ಸಂಪುಟ 19 ಸಂಚಿಕೆ 1
ಅಕ್ಟೋಬರ್-ನವೆಂಬರ್ 2025

ಪವಿತ್ರಾತ್ಮಭರಿತ, ಪವಿತ್ರಾತ್ಮ ಪ್ರೇರಿತ ಹಾಗೂ ಸರ್ವಾರ್ಪಿತ ಶಿಷ್ಯರ ಸಮುದಾಯ

A SPIRIT-FILLED & SPIRIT-LED COMMUNITY OF RADICAL DISCIPLES

# ಸಿಂಚನ

ಮನೆ ಮನೆಗೆ ದೈವಾನುಗ್ರಹದ ಹನಿ ಹನಿ

BIMONTHLY MAGAZINE OF GULBARGA DIOCESE
ಗುಲ್ಬರ್ಗ ಧರ್ಮಕ್ಷೇತ್ರದ ದ್ವೈಮಾಸಿಕ ಪತ್ರಿಕೆ



## ಭರವಸೆಯ ಪಯಣ ನಿರಂತರ

‘ನಾವು ನೋಡಿ ನಡೆಯುವವರಲ್ಲ, ನಂಬಿ ನಡೆಯುವವರು’ 2 ಕೊರಿಂಥಿಯರಿಗೆ 5:7

## ಧರ್ಮಾಧ್ಯಕ್ಷರ ಸಂದೇಶ



**ಪ್ರಭು ಯೇಸು ಕ್ರಿಸ್ತರಲ್ಲಿ ನನ್ನ ಪ್ರಿಯ ಗುರುಗಳೇ, ಕನ್ಯಾಭಗಿನೀಯರೇ ಮತ್ತು ಭಕ್ತಜನರೇ,**

ಗುಲ್ಬರ್ಗಾ ಧರ್ಮಕ್ಷೇತ್ರ ಇತಿಹಾಸದಲ್ಲಿ ಆಗಸ್ಟ್ 18, 2005 ಒಂದು ಸ್ಮರಣೀಯ ದಿನ. ಅಂದು ನಮ್ಮ ಧರ್ಮಕ್ಷೇತ್ರವನ್ನು ಅಧಿಕೃತವಾಗಿ ಪ್ರಾರಂಭಿಸಲಾಯಿತು. ಅದೇ ದಿನ ನನಗೆ ನೂತನವಾಗಿ ರಚಿಸಿದ ಧರ್ಮಕ್ಷೇತ್ರಕ್ಕೆ ಧರ್ಮಾಧ್ಯಕ್ಷರನ್ನಾಗಿ ಅಭಿಷೇಕಿಸಿ, ನನ್ನ ಯಾಜಕ ಜೀವನದ ಪಯಣವನ್ನು ಈ ಧರ್ಮಕ್ಷೇತ್ರದ ಸೇವೆಗೆ ಅರ್ಪಿಸುವ ಅನನ್ಯ ಕರ್ತವ್ಯವನ್ನು ದೇವರು ನನಗೆ ವಹಿಸಿದರು. ಇಂದಿಗೆ ಇಪ್ಪತ್ತು ವರ್ಷಗಳು ಸಂಪೂರ್ಣಗೊಳ್ಳುತ್ತವೆ. ಈ ಕ್ಷಣದಲ್ಲಿ ನಾನು ಹಿಂದಿನ ದಿನಗಳನ್ನು ಅವಲೋಕಿಸಿ ನೋಡಿದಾಗ ನನ್ನ ಹೃದಯವು ದೇವರ ಮಹಾದಾನಕ್ಕಾಗಿ ಕೃತಜ್ಞತೆಯಿಂದ ತುಂಬಿದೆ. "ದೇವಾರಾತ್ಮನ ಬಲದಿಂದ" ಎಂಬ ವಾಕ್ಯವು ನನ್ನ ಧರ್ಮಾಧ್ಯಕ್ಷರ ಸೇವಾ ಜೀವನದ ಧ್ಯೇಯ ವಾಕ್ಯವಾಗಿದೆ. ಪರಿಶುದ್ಧಾತ್ಮನ ಪ್ರೇರಣೆಯಿಲ್ಲದೆ ಯಾವ ಕೆಲಸವೂ ಸಾಧ್ಯವಾಗಿರಲಿಲ್ಲ. ಮೂಲಸೌಕರ್ಯ ನಿರ್ಮಾಣ, ವ್ಯವಸ್ಥೆಗಳ ಸ್ಥಾಪನೆ, ಕೇಂದ್ರಗಳ ಸಂಘಟನೆ, ತರಬೇತಿ ಕೇಂದ್ರಗಳ ಸ್ಥಾಪನೆ ಇವೆಲ್ಲವುಗಳ ಹಿಂದೆ ದೇವರ ಆತ್ಮನೇ ಕಾರ್ಯನಿರ್ವಹಿಸಿದ್ದಾನೆಂದು ನಾನು ದೃಢವಾಗಿ ನಂಬುತ್ತೇನೆ. ನಾನು ಎಂದಿಗೂ ದೊಡ್ಡ ತೊಂದರೆಗಳನ್ನು ಎದುರಿಸಲಿಲ್ಲ; ಇದಕ್ಕೆ ಕಾರಣವೆಂದರೆ ದೈವಾನುಗ್ರಹ, ನಿಮ್ಮ ಪ್ರೀತಿ, ನಿಮ್ಮ ಪ್ರಾರ್ಥನೆ ಮತ್ತು ನಿಮ್ಮ ಅಚಲ ಬೆಂಬಲ.

ಈ ವರ್ಷವನ್ನು ನಾವು ವಿಶೇಷವಾಗಿ ಜ್ಯೂಬಿಲಿ ಸಂವತ್ಸರ ವರ್ಷ 2025ವೆಂದು ಆಚರಿಸುತ್ತಿದ್ದೇವೆ. ಯೇಸು ಕ್ರಿಸ್ತರು 2025 ವರ್ಷಗಳ ಹಿಂದೆ ಈ ಲೋಕದಲ್ಲಿ ಹುಟ್ಟಿ ನಮ್ಮ ರಕ್ಷಕರಾದರು. ಆದ್ದರಿಂದ ಈ ವರ್ಷವನ್ನು ನಾವು ಪವಿತ್ರತೆಯಲ್ಲಿ (ಪರಿಶುದ್ಧತೆಯಲ್ಲಿ) ಬೆಳೆಯುವ, ದೇವರ ಕೃಪೆಯನ್ನು ಸ್ವೀಕರಿಸುವ, ಹಾಗೂ ಸಮಾಜಕ್ಕೆ ಕ್ರಿಸ್ತನ ಸಾಕ್ಷಿಯಾಗುವ ವರ್ಷವೆಂದು ಆಚರಿಸುತ್ತಿದ್ದೇವೆ. ಜ್ಯೂಬಿಲಿ ಎಂದರೆ ಕೃಪೆಯ ವರ್ಷ, ಆಧ್ಯಾತ್ಮಿಕ ಪುನರುಜ್ಜೀವನದ ವರ್ಷ. ಕಳೆದ ಮೂರು ವರ್ಷಗಳಿಂದ ನಾವು ಈ ಜುಬಿಲಿಗಾಗಿ ಸಜ್ಜುಗೊಂಡಿದ್ದೇವೆ: ಅಧ್ಯಯನದ ವರ್ಷ ವಾಟಿಕನ್ ಮಹಾಸಭೆಯ ಅಧಿಕೃತ ಪುಸ್ತಕವನ್ನು ಯೂಟ್ಯೂಬ್ ಮುಖಾಂತರ ಕಲಿಸಿದ್ದೇವೆ. ಪ್ರಾರ್ಥನೆಯ ವರ್ಷ – ದೇವರೊಂದಿಗೆ ಆಳವಾದ ಏಕತೆಯಲ್ಲಿ ಬದುಕುವ ಅಭ್ಯಾಸ. ಜ್ಯೂಬಿಲಿ ವರ್ಷ – ಕೃತಜ್ಞತೆ, ಹಬ್ಬ, ಮತ್ತು ಭವಿಷ್ಯದ ಹೊಸ ಬದ್ಧತೆಯ ಕಾಲ. ನಮ್ಮ ಧರ್ಮಕ್ಷೇತ್ರದಲ್ಲಿ ಮಹಿಳಾ ಜ್ಯೂಬಿಲಿ, ಕಿರು ಕ್ರೈಸ್ತ ಕುಟುಂಬದ ಜ್ಯೂಬಿಲಿ, ಕುಟುಂಬದ ಜ್ಯೂಬಿಲಿ, ಯುವಕರ ಜ್ಯೂಬಿಲಿ, ಸುವಾರ್ತೆ ಚಿಣ್ಣರ ಜ್ಯೂಬಿಲಿ, ಅಂತರ್ ಧರ್ಮೀಯ ಮತ್ತು ಅಂತರ್ ಪಂಗಡದ ಜ್ಯೂಬಿಲಿ ಆಚರಿಸಿದ್ದೇವೆ. ಇದರ ಉದ್ದೇಶ ಭರವಸೆಯಾಗಿರುವ ನಮ್ಮ ಶಿಲುಬೆಯನ್ನು ಪ್ರೀತಿ ವಿಶ್ವಾಸದಿಂದ ಅಪ್ಪಿಕೊಳ್ಳುವುದಾಗಿದೆ.

ಜ್ಯೂಬಿಲಿ ಸಮಾಪ್ತಿಯ ಪ್ರಮುಖ ಘಟನೆ ಭಾಲ್ಕಿ ಜಾತ್ರೋತ್ಸವವಾಗಿದ್ದು, ಈ ಬಾರಿ ಅದನ್ನು ನವೆಂಬರ್‌ನಲ್ಲಿ 7–9 ರಂದು ವಿಜೃಂಭಣೆಯಿಂದ ಆಚರಿಸುತ್ತಿದ್ದೇವೆ. ಇದರ ವಿಷಯವನ್ನು "ಭರವಸೆಯ ಯಾತ್ರಿಕರು ಸಂಭ್ರಮಿಸೋಣ, ಸೇವೆಗೈಯೋಣ" ಎಂದು ಘೋಷಿಸಿದ್ದೇವೆ. ಕ್ರೈಸ್ತ ಜೀವನವೆಂದರೆ ಯಾತ್ರೆ; ವಿಶ್ವಾಸದಿಂದ ಸಾಗುವ ಈ ಪಯಣದಲ್ಲಿ ನಾವು ಎಲ್ಲರೂ ಭರವಸೆಯ ಸಾಕ್ಷಿಗಳಾಗಬೇಕು. ಈ ಸಂದರ್ಭದಲ್ಲಿ ನಮ್ಮ ಧರ್ಮಕ್ಷೇತ್ರಕ್ಕೆ ಅಪೊಸ್ತೋಲಿಕ್ ನುಂಶಿಯೋ ಮೊದಲ ಬಾರಿಗೆ ಆಗಮಿಸುತ್ತಿರುವುದು ಐತಿಹಾಸಿಕ ಕ್ಷಣ. ಇದು ನಮ್ಮೆಲ್ಲರಿಗೂ ಗೌರವ, ಆದರೆ ಜೊತೆಗೆ ಹೊಣೆಗಾರಿಕೆಯೂ ಹೌದು. ಈ ಜಾತ್ರೆಯನ್ನು ಯಶಸ್ವಿಯಾಗಿಸಲು ಮತ್ತು ಧರ್ಮಕ್ಷೇತ್ರದ ಭವಿಷ್ಯವನ್ನು ಬಲಪಡಿಸಲು ನಿಮ್ಮ ಸಕ್ರಿಯ ಸಹಭಾಗಿತ್ವ ಹಾಗೂ ಪ್ರಾರ್ಥನೆಗಳನ್ನು ನಾನು ವಿನಮ್ರತೆಯಿಂದ ವಿನಂತಿಸುತ್ತೇನೆ.

ಇದಲ್ಲದೆ, ಪೋಪ್ ಲಿಯೋ XIV ಇತ್ತೀಚೆಗೆ ಎರಡು ಮಹಾನ್ ಸಂತರನ್ನು ನೂತನ ಪೀಳಿಗೆಯ ಪ್ರೇರಣೆಯಾಗಲೆಂದು ಘೋಷಿಸಿದ್ದಾರೆ. ಸಂತ ಕಾರ್ಲೊ ಅಕುಟಿಸ್ (Carlo Acutis) ಸಂತ ಪಿಯರ್ ಜಾರ್ಜಿಯೋ ಫ್ರಸ್ಸಾತಿ (Pier Giorgio Frassati) ಈ ಸಂತರ ಜೀವನ, ತ್ಯಾಗ, ವಿಶ್ವಾಸ ಮತ್ತು ಅವರ ಪರಿಶುದ್ಧ ಜೀವನ ನಮಗೆಲ್ಲರಿಗೂ "ಪವಿತ್ರತೆಯಲ್ಲಿ ಬೆಳೆಯಿರಿ" (1 ಪೇತ್ರ 1:16) ಎಂಬ ಪವಿತ್ರ ಪುಸ್ತಕದ ಆಜ್ಞೆಯನ್ನು ಸ್ಮರಿಸುತ್ತದೆ. ಅವರ ಉದಾಹರಣೆ ನಮ್ಮ ಧರ್ಮಕ್ಷೇತ್ರದಲ್ಲಿ ಹೊಸ ಆಧ್ಯಾತ್ಮಿಕ ಚೈತನ್ಯವನ್ನು ಹರಿಯುವಂತೆ ಮಾಡಲಿ.

ಪ್ರಿಯ ಸಹೋದರ ಸಹೋದರಿಯರೆ, ಈ ಇಪ್ಪತ್ತು ವರ್ಷದ ಸೇವಾ ಪಯಣದಲ್ಲಿ ನೀವು ನನಗೆ ನೀಡಿದ ಪ್ರೀತಿ, ಮತ್ತು ಸಹಕಾರಕ್ಕಾಗಿ ಹೃತ್ಪೂರ್ವಕ ಧನ್ಯವಾದಗಳು. ಮುಂದಿನ ದಿನಗಳಲ್ಲಿ ಸಹ ಪರಿಶುದ್ಧಾತ್ಮನ ಮಾರ್ಗದರ್ಶನದಲ್ಲಿ ನಾವು ಒಟ್ಟಾಗಿ ಬಲವಾದ ವಿಶ್ವಾಸದಲ್ಲಿ, ಆಳವಾದ ಪ್ರೀತಿಯಲ್ಲಿ, ಸೇವೆಯಲ್ಲಿ ತೊಡಗಿರುವ ಮತ್ತು ಪವಿತ್ರತೆಯಲ್ಲಿ ಬೆಳೆಯುತ್ತಿರುವ ಧರ್ಮಕ್ಷೇತ್ರವನ್ನು ರೂಪಿಸೋಣ. ಭರವಸೆಯ ಯಾತ್ರಿಕರು ನಾವು, ಬನ್ನಿ ನಮ್ಮ ಕ್ರೈಸ್ತ ಜೀವನ ಒಂದು ವಿಶಿಷ್ಟ ಸಂಭ್ರಮವಾಗಲಿ, ನಿಸ್ವಾರ್ಥ ಸೇವೆಗೆ ಸಾಕ್ಷಿಯಾಗಲಿ.

**ಹೃದಯದಿಂದ ಧನ್ಯವಾದಗಳು,**

+ R. Miranda

**ಪೂಜ್ಯ ರಾಬರ್ಟ್ ಮಿರಾಂದ**

**ಧರ್ಮಾಧ್ಯಕ್ಷರು, ಕೃಪಾಲಯ, ಧರ್ಮಾಧ್ಯಕ್ಷರ ನಿವಾಸ**

# ಸಿಂಚನ

ಗುಲ್ಬರ್ಗ ಧರ್ಮಕ್ಷೇತ್ರದ ದ್ವೈಮಾಸಿಕ ಪತ್ರಿಕೆ



**ಅಧ್ಯಕ್ಷರು:**
ಪೂಜ್ಯ ರಾಬರ್ಟ್ ಮಿರಾಂದ
ಧರ್ಮಾಧ್ಯಕ್ಷರು, ಗುಲ್ಬರ್ಗ ಧರ್ಮಕ್ಷೇತ್ರ

**ಸಂಪಾದಕರು**
ಫಾ ರೋಶನ್ ಡಿ'ಸೋಜ

**ಸಹ ಸಂಪಾದಕರು**
ಸಿ. ಪ್ರಿಯಾ ಡಿ'ಸೋಜ ಎ.ಸಿ

**ಸಂಪಾದಕೀಯ ಮಂಡಳಿ**
ಫಾ. ಆರೋನ್ ವಾಸ್
ಫಾ. ದೀಪಕ್ ಫುಟ್ತಾದೊ
ಸಿ. ಜೇನ್ ಪಾಯ್ಸ್ ಬೆಥನಿ
ಸಿ. ಲೋವಿಟ ಸಿ.ಎಸ್.ಎಸ್.ಟಿ.
ಶ್ರೀ ಸಿಮೋನ್, ಭಾಲ್ಕಿ



ಮುದ್ರಣ : ಡೆಕ್ಕನ್ ಪ್ರಿಂಟರ್ಸ್
ನಂ. ಸಿ–431, ಪೀಣ್ಯ 1ನೇ ಹಂತ,
ಪೀಣ್ಯ ಪೊಲೀಸ್ ಠಾಣೆ ಹಿಂಭಾಗ,
ಪೀಣ್ಯ, ಬೆಂಗಳೂರು – 560 058.
deccandata1999@gmail.com
Ph.: 080-23721533

To print all good things

ಪ್ರಕಾಶಕರು : ಪ್ರೇಮವಾಣಿ
ಸಂಪರ್ಕ ಮಾಧ್ಯಮ ಆಯೋಗ,
ಗುಲ್ಬರ್ಗ ಧರ್ಮಕ್ಷೇತ್ರ



The Editor
Sinchana Monthly
Kripalaya - Bishop's House,
Kotnoor (D) Village, Nandikoor P.O.,
Jewargi Rd, Kalaburagi - 585102
E-mail: dioceseofgulbarga@gmail.com
Website: www.gulbargadiocese.org


## ಒಳನೋಟ


ಧರ್ಮಾಧ್ಯಕ್ಷರ ಸಂದೇಶ
ದೇವರಾತ್ಮನ ಪ್ರೇರಣೆ ನಿರಂತರ 02
ಸಮೀಕ್ಷೆ, ಪರೀಕ್ಷೆ ಮತ್ತು ನಿರೀಕ್ಷೆ 03
A Man of God, A Shepherd for All 04
ದೇವರಾತ್ಮನ ಬಲದಿಂದ 20 ವರ್ಷಗಳ ..... 05
ಗುಲ್ಬರ್ಗಾ ಧರ್ಮಕ್ಷೇತ್ರದಲ್ಲಿ ಜ್ಯೂಬಿಲಿ ವರ್ಷ 2025 09
ಕಥೋಲಿಕ ಧೈವಾರಧನೆಯಲ್ಲಿ ಹಬ್ಬಗಳ ಆಚರಣೆ 11
ಸಂತ ಫ್ರಾನ್ಸಿಸ್ ಕ್ಷೇವಿಯರ್ ದೇವಾಲಯ. ಸೇಡಂ 15
ಜೋಳ: ಆಯುರ್ವೇದದ ಪ್ರಾಚೀನ ಧಾನ್ಯ 17
ಯುವಕರ ಜ್ಯೂಬಿಲಿ ವರುಷ ತಂದಿತ್ತು ಭರವಸೆಯ ಹರುಷ 19
ಮೌಂಟನ್ ಕ್ಲೈಂಬರ್ ಸಂತ ಪಿಯರ್ ಜಾರ್ಜಿಯೋ ಫ್ರಸ್ಸಾಟಿ 21
ಸಂತರ ಪದವಿಯ ಹಾದಿಯಲ್ಲಿ ಪುನಿತ ಕಾರ್ಲೊ ಆಕುತಿಸ್ 23
ಸಂತ ವಿನ್ಸೆಂಜಾ ಜೆರೋಸಾ 25
ಸುದ್ಧಿ ಸಿಂಚನ 27



## Advertisement Tariff For Sinchana




| | |
|---|---|
| Back Page (Outer) – Multi-Color: | ₹ 6,300 |
| Back Page (Inner): | ₹ 5,250 |
| Inner Page – Black and White (Full Page): | ₹ 2,200 |
| Inner Page – Black and White (Half Page): | ₹ 1,150 |





ಫಾ. ಕ್ಲೇರಿ ಡಿ'ಸೋಜ

# ದೇವರಾತ್ಮನ ಪ್ರೇರಣೆ ನಿರಂತರ

ಐಪಿಯಲ್ 20:20 ಕ್ರಿಕೆಟ್ ಮ್ಯಾಚ್‌ನಲ್ಲಿ ಭಾರತ, ಆರ್.ಸಿ.ಬಿ ತಂಡ ಗೆದ್ದರೆ ನಮಗಾಗುವ ಸಂತೋಷ ವಿಶೇಷ. 20:20 ಮುಗಿದ ಇನ್ನೊಂದು 20:20ಯಲ್ಲಿ ಜಯಸಾಧಿಸಲು ತಂಡವನ್ನು ಸಿದ್ಧಪಡಿಸುತ್ತಾರೆ. ಇದೇ ರೀತಿ ನಮ್ಮ ವಿಶ್ವಾಸದ ಪಯಣದಲ್ಲಿಯೂ 20:20 ಆಟದ ನಂತರ ಮುಂಬರುವ 20:20ಗೆ ಸಿದ್ಧತೆ ನಡೆಯಲಿಕ್ಕಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು 20 ವರ್ಷಗಳನ್ನು ಪೂರೈಸಿ, ಮುಂದಿನ ದಿನಗಳಿಗಾಗಿ ದೂರ ದೃಷ್ಟಿಯನ್ನು ಹಾಕಿ ದೇವರಿಗೆ ಸಮರ್ಪಿಸುವ ಸಮಯ.

20 ವರ್ಷಗಳ ಮೊದಲು ಮನೆ ಬಿಟ್ಟು ಬಂದಿದ್ದ ಯಾಕೋಬನ ಹತ್ತಿರ ಜೋರ್ಡನ್ ನದಿ ದಾಟುವಾಗ ಕೈಯಲ್ಲಿ ಒಂದು ಕೋಲು ಮಾತ್ರ ಇತ್ತು. ಇಪ್ಪತ್ತು ವರ್ಷಗಳ ನಂತರ ತನ್ನ ಕುಟುಂಬದ ಎಲ್ಲಾ ಸದಸ್ಯರೊಂದಿಗೆ, ಸಂಪತ್ತಿನೊಂದಿಗೆ, ದೇವರಿಗೆ ಕೃತಜ್ಞತಾ ಬಲಿಯನ್ನು ಅರ್ಪಿಸುತ್ತಾನೆ. ತನ್ನ ಸಹೋದರ ಏಸಾವನೊಂದಿಗೆ ರಾಜಿಯಾಗಿ, ನನ್ನ ಅಣ್ಣನ ಮುಖ ನೋಡಿದರೆ, ದೇವರನ್ನೇ ಭೇಟಿಯಾದಂತೆ ಎಂದು ಹೇಳುತ್ತಾನೆ.

ದೇವರ ವಾಗ್ದಾನ ಖಂಡಿತವಾಗಿ ಈಡೇರುತ್ತದೆ ಎಂದು ಕಾದು ಕುಳಿತಿದ್ದ ಅಬ್ರಾಹಮನು ತನ್ನ 100ನೇ ವಯಸ್ಸಿನಲ್ಲಿ ಪುತ್ರ ಸಂತಾನವನ್ನು ಪಡೆದ. ಪ್ರೇಷಿತರ ಕಾರ್ಯಕಲಾಪ ಅಧ್ಯಾಯ 20:20 ರಲ್ಲಿ ಸಂತ ಪೌಲನು, ನಾನು ಬಹಿರಂಗವಾಗಿಯೂ ಹಾಗೂ ಮನೆಗಳಲ್ಲಿಯೂ ಹಿಂಜರಿಯದೆ ಬೋಧಿಸಿದ್ದೇನೆ ಹಾಗೂ ಕಲಿಸಿದ್ದೇನೆ ಎಂದು ಹೇಳುತ್ತಾರೆ. ಪವಿತ್ರಾತ್ಮ ಭರಿತ, ಪವಿತ್ರಾತ್ಮ ಪ್ರೇರಿತ ಶಿಷ್ಯತ್ವದ ಕರೆಯನ್ನು ನಾವು 20 ವರ್ಷಗಳ ಮೊದಲು ಸ್ವೀಕರಿಸಿದೆವು. ಪ್ರಭು ನಮಗೆ ಮಹತ್ಕಾರ್ಯ ಮಾಡಿದದು ಖಚಿತ ಎಂತಲೇ ನಾವಾನಂದಭರಿತವಾಗಿರುವುದು ಉಚಿತ ಕೀರ್ತನೆ 126:3.

ಕಳೆದ 20 ವರ್ಷದಲ್ಲಿ ಧರ್ಮಾಧ್ಯಕ್ಷರ ನಿವಾಸದಿಂದ ಹಿಡಿದು, ಪಾಲನ ಕೇಂದ್ರ, ಗುರು ತರಬೇತಿ ನಿವಾಸ, ಮಹಾದೇವಾಲಯ, ಅನೇಕ ದೇವಾಲಯಗಳು, ಶಿಕ್ಷಣ, ಆರೋಗ್ಯ, ಸಮಾಜ ಸಂಸ್ಥೆಗಳು, ಮಕ್ಕಳ ಶಿಕ್ಷಣ ವಸತಿ ನಿಲಯಗಳು ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ನಮ್ಮ ಧರ್ಮಾಧ್ಯಕ್ಷರ ಅವಿರತ ಪ್ರಯತ್ನದಿಂದ ಪ್ರಗತಿಯಾಗಿದೆ.

ಯೇಸು ಪೇತ್ರನಿಗೆ, ಈಗ ನೀನು ಕೈ ಚಾಚುವೆ, ಮತ್ತೊಬ್ಬ ನಿನ್ನನ್ನು ಕರೆದೊಯ್ಯುವರು. ನಮ್ಮನ್ನು ಸದಾ ನಡಿಸುವ ಆ ಮತ್ತೊಬ್ಬ ವ್ಯಕ್ತಿ ಬೇರೆ ಯಾರು ಅಲ್ಲ, ಅವರೇ ಪವಿತ್ರಾತ್ಮರು. ಯೆಶಾಯ 40:31 ರೆಕ್ಕೆ ಬಾಚಿದ ಹದ್ದುಗಳಂತೆ ಹಾರುವರು, ಓಡಿದರೂ ದಣಿಯರು, ನಡೆದರು ಬಳಲರು.

120 ವರ್ಷಗಳಾಗಿದ್ದ ಮೋಷೆ, ದೇವರು ಕೊಟ್ಟ ಪ್ರತಿಯೊಂದು ಕೆಲಸವನ್ನು ನಿಷ್ಠೆಯಿಂದ ಮಾಡಿದ. ನನ್ನ ಸೇವಕ ಮೋಶೆಯ ಹಾಗೆ ದೀನ ವ್ಯಕ್ತಿ ಈ ಪ್ರಪಂಚದಲ್ಲಿಯೇ ಇಲ್ಲ, ಎಂದು ಅವನ ವಿರುದ್ಧ ಮಾತಾಡಿದ ವ್ಯಕ್ತಿಗಳಿಗೆ ದೇವರೇ ಉತ್ತರ ಕೊಟ್ಟರು. ದೇವರು ಮೋಶೆಗೆ ಈಗ ನೀನು ಮುದುಕನಾಗಿದ್ದಿ ಎಂದರು ಆದರೆ ಮೋಷೆ ಶರೀರದಲ್ಲಿ ಶಕ್ತಿ ಇತ್ತು, ಅವನ ಕಣ್ಣುಗಳು ಸ್ಪಷ್ಟವಾಗಿ ಕಾಣುತ್ತಿತ್ತು. ಸಮುವೆಲನು ಹಣ್ಣು ಹಣ್ಣು ಮುದುಕನಾಗಿದ್ದರು ಸೇವೆ ಸಲ್ಲಿಸುತ್ತಿದ್ದ. ಅವನ ಉತ್ತರ ಅಧಿಕಾರಿಯಾಗಲು ಅವನ ಮಕ್ಕಳು ಅಯೋಗ್ಯರಾಗಿದ್ದರು.

ಭೂಮಿಗೆ ಬುನಾದಿಯನ್ನು ಹಾಕುವ ಮೊದಲೇ ದೇವರು ನಮ್ಮನ್ನು ತಮ್ಮವರನ್ನಾಗಿ ಆರಿಸಿದ್ದಾರೆ. ಯಾವುದು ಆಕಸ್ಮಿಕವಾಗಿ ಸಂಭವಿಸುವುದಿಲ್ಲ. ಆದಿಯೂ ಅಂತ್ಯವು ಆಗಿರುವ ದೇವರು ಸರ್ವ ಒಳಿತನ್ನೆ ಮಾಡುವರು. ಆಮೆನ್.

**ಸಂಪಾದಕೀಯ**

# ಸಮೀಕ್ಷೆ, ಪರೀಕ್ಷೆ ಮತ್ತು ನಿರೀಕ್ಷೆ



ಸಿ. ಪ್ರಿಯಾ ಡಿ'ಸೋಜ ಎ.ಸಿ
ಸಹ ಸಂಪಾದಕರು

ಕರ್ನಾಟಕ ರಾಜ್ಯದಾದ್ಯಂತ ಸಾಮಾಜಿಕ ಶೈಕ್ಷಣಿಕ ಸಮೀಕ್ಷೆ ನಡೆಯುತ್ತಾ ಇದೆ. ಈ ಸಮೀಕ್ಷೆಯಲ್ಲಿ ಪ್ರಶ್ನೆ ಸಂಖ್ಯೆ 8ರಲ್ಲಿ ಧರ್ಮದ ಪ್ರಸ್ತಾಪವಿರುತ್ತದೆ. ಪ್ರತಿಯೊಂದು ಧರ್ಮದ ಶಕ್ತಿ ತಮ್ಮ ಜನಸಂಖ್ಯೆಯಲ್ಲಿ ಒಳಗೊಂಡಿದೆ. ಕೆಲವರಿಗೆ ಸಮೀಕ್ಷೆಯನ್ನು ಎದುರಿಸುವ ಭಯ– ಖಾಸಾಗಿ ಮಾಹಿತಿಗಳು ಹೊರ ಬರುವ ಅಂಶವೆಂದು ತಿಳಿದಿರುತ್ತಾರೆ. ಇನ್ನೂ ಕೆಲವರು ಕ್ರೈಸ್ತ ಕುಟುಂಬದಿಂದ ಹುಟ್ಟಿದವರಾದರೂ, ಪವಿತ್ರ ಸಂಸ್ಕಾರಗಳನ್ನು ಸ್ವೀಕರಿಸಿದವರಾದರೂ, ನಾವು ಕ್ರೈಸ್ತ ಸಮುದಾಯಕ್ಕೆ ಸೇರಿದವರೆಂದು "ನಾನು ಕ್ರೈಸ್ತ" ಎಂದು ಹೇಳುವುದು ಕಷ್ಟಕರವಾಗುತ್ತದೆ. ಕಾರಣ, ಸರ್ಕಾರದಿಂದ ಬರುವ ಕೆಲವು ಸೌಲಭ್ಯಗಳನ್ನು ಕಳೆದುಕೊಳ್ಳುವ ಭಯ ಮಾತ್ರವಲ್ಲ ಬಹಿರಂಗವಾಗಿ ಕ್ರೈಸ್ತರೆಂದು ಸಾಕ್ಷಿ ನೀಡಲು ಮುಜುಗರ. ಆದರೆ ಪ್ರಿಯ ಸಹೋದರ ಸಹೋದರಿಯರೇ, ನಿಜವಾದ ವಿಶ್ವಾಸ ಎಂದರೆ ತ್ಯಾಗ, ನಿಜವಾದ ಪರಿಶುದ್ಧಮಯ ಜೀವನ ಎಂದರೆ ಧೈರ್ಯ. ಪ್ರಭು ಯೇಸು ಕ್ರಿಸ್ತರು ಮತ್ತಾಯನ ಶುಭಸಂದೇಶದಲ್ಲಿ ನುಡಿಯತ್ತಾರೆ "ಜನರ ಮುಂದೆ, ತಾನು ನನ್ನವನೆಂದು ಬಹಿರಂಗವಾಗಿ ಒಪ್ಪಿಕೊಳ್ಳುವ ಪ್ರತಿಯೊಬ್ಬನನ್ನು ನಾನು ಸಹ ಸ್ವರ್ಗದಲ್ಲಿರುವ ನನ್ನ ಪಿತನ ಮುಂದೆ ನನ್ನವನೆಂದು ಒಪ್ಪಿಕೊಳ್ಳುತ್ತೇನೆ." (ಮತ್ತಾಯ 10:32) ಎಂದು ಯೇಸು ತಾನೇ ಹೇಳಿದ್ದಾರೆ.

ಜ್ಯೂಬಿಲಿ ವರ್ಷ 2025 ನಮ್ಮ ವಿಶ್ವಾಸದ ಹಬ್ಬ. ನಮ್ಮ ರಕ್ಷಕರಾದ ಯೇಸು ಕ್ರಿಸ್ತರು 2025 ವರ್ಷಗಳ ಹಿಂದೆ ಜನನ ಹೊಂದಿ ಈ ಲೋಕಕ್ಕೆ ರಕ್ಷಣೆ ತಂದರು. ಅವರ ಜನನವು ಮಾನವ ಇತಿಹಾಸವನ್ನು "ಕ್ರಿಸ್ತ ಪೂರ್ವ (BC)" ಮತ್ತು "ಕ್ರಿಸ್ತ ಶಕ (AD)" ಎಂದು ವಿಭಜಿಸುವ ಹೊಸ ಯುಗವನ್ನು ಆರಂಭಿಸಿತು. ಈ ಸತ್ಯವನ್ನು ನಾವು ಇಂದು ಧೈರ್ಯದಿಂದ ಸಾರಬೇಕಾಗಿದೆ. ನಮ್ಮ ದೇವರು ನಮ್ಮ ರಕ್ಷಕರು, ನಮ್ಮ ಸರ್ವಸ್ವವೆಂದು ನಂಬಬೇಕು.

ನವೆಂಬರ್ ತಿಂಗಳಲ್ಲಿ ಭಾಲ್ಕಿ ಜಾತ್ರೋತ್ಸವವು ನಮ್ಮ ವಿಶ್ವಾಸವನ್ನು ಬಹಿರಂಗವಾಗಿ ಘೋಷಿಸುವ ಮಹೋತ್ಸವವಾಗಿದೆ. ಬಾಲ ಯೇಸುವಿನಲ್ಲಿ ನಮ್ಮ ವಿಶ್ವಾಸವನ್ನು ನಾವು ಬಹಿರಂಗವಾಗಿ ಸಾರುವ ಸುಸಂದರ್ಭವಿದು. ನಾವು ಪಾದಯಾತ್ರೆ ಮಾಡುವ ಮೂಲಕ ನಮ್ಮ ಪಾಪಗಳಿಗೆ ಪಶ್ಚಾತಾಪ ಪಟ್ಟು, ಕ್ಷಮೆಯಾಚಿಸುತ್ತಾ ಪಾದ ಯಾತ್ರೆಯಲ್ಲಿ ಭಾಗವಹಿಸಿದಾಗ ದೇವರು ನಮ್ಮ ಅಂತರಂಗದಲ್ಲಿ ನಡೆಯುವ ಒಳ್ಳೆಯಕಾರ್ಯಗಳನ್ನು ನೋಡಿ ನಮ್ಮನ್ನು ಆಶೀರ್ವದಿಸುವರು. ಪಾದಯಾತ್ರೆ ಕೇವಲ ಒಂದು ಸಂಪ್ರದಾಯವಲ್ಲ; ಇದು ಒಂದು ಧೈರ್ಯದ ಸಾಕ್ಷಿ. ಪಾದಯಾತ್ರಿಗಳು ಹಾಡುವ ಭಜನೆ, ಮಾಡುವ ಜಪ, ಅನುಭವಿಸುವ ನೋವು ಎಲ್ಲವೂ ಕ್ರಿಸ್ತರಲ್ಲಿ ಪ್ರಕಟಿಸುವ ಜೀವಂತ ಸಾಕ್ಷಿ.

ಈ ಜ್ಯೂಬಿಲಿ ವರ್ಷವು ಪವಿತ್ರತೆಯಲ್ಲಿ ಬೆಳೆಯುವ ಆಹ್ವಾನ. ಸಂತ ಕಾರ್ಲೊ ಅಕುಟಿಸ್ ಮತ್ತು ಸಂತ ಪಿಯರ್ ಜಾರ್ಜಿಯೋ ಫ್ರಸ್ಸಾಟಿ –ಪೋಪ್ ಲಿಯೋ ಹದಿನಾಲ್ಕನೇಯವರಿಂದ ಸಂತರನ್ನಾಗಿ ಘೋಷಿಸಲ್ಪಟ್ಟ ಇಬ್ಬರು ಯುವ ಸಂತರು ನಮಗೆ ಪ್ರೇರಣೆ. ಕಾರ್ಲೊ ಅಕುಟಿಸ್ ಪರಮ ಪ್ರಸಾದ ಸಂತರು ಸಂತ ಫ್ರಸ್ಸಾಟಿ ಬಡವರ ಸೇವೆಯಲ್ಲಿ ತೊಡಗಿಕೊಂಡವರು.

ಪ್ರಿಯರೇ, ಕ್ರಿಸ್ತನಲ್ಲಿ ಬದುಕುವುದೇ ನಿಜವಾದ ಸ್ವಾತಂತ್ರ್ಯ. ನಾವು ಕ್ರೈಸ್ತರು ಎಂಬ ಹೆಮ್ಮೆ ತಾಳುವುದರಲ್ಲಿ ಭಯವಿಲ್ಲದಿರಲಿ. ಸರ್ಕಾರದ ಸೌಲಭ್ಯಗಳನ್ನು ಕಳೆದುಕೊಳ್ಳುವ ಭಯ ನಮ್ಮನ್ನು ವಿಶ್ವಾಸದಿಂದ ಹಿಂದಕ್ಕೆ ತಳ್ಳಬಾರದು. ಬದಲಿಗೆ "ಸತ್ಯವು ನಿಮ್ಮನ್ನು ಮುಕ್ತಗೊಳಿಸುತ್ತದೆ" (ಯೋವಾನ್ನ 8:32) ಎಂಬ ಕ್ರಿಸ್ತನ ವಚನವನ್ನು ಅಪ್ಪಿಕೊಳ್ಳೋಣ.

ಈ ಜ್ಯೂಬಿಲಿ ವರ್ಷವು ನಮ್ಮೆಲ್ಲರಿಗೂ ವಿಶ್ವಾಸವನ್ನು ಪುನರುಜ್ಜೀವನಗೊಳಿಸುವ ಆಹ್ವಾನವಾಗಿದೆ. ನಮ್ಮ ಜೀವನದಲ್ಲಿ, ಕುಟುಂಬದಲ್ಲಿ, ಸಮಾಜದಲ್ಲಿ ಕ್ರಿಸ್ತನ ಸಾಕ್ಷಿಗಳಾಗೋಣ. ಭಾಲ್ಕಿ ಜಾತ್ರೋತ್ಸವದಂತೆ, ನಾವು ಸಾರ್ವಜನಿಕವಾಗಿ ನಮ್ಮ ನಂಬಿಕೆಯನ್ನು ಸಾರೋಣ. ಸಂತ ಕಾರ್ಲೊ ಅಕುಟಿಸ್ ಮತ್ತು ಸಂತ ಪಿಯರ್ ಜಾರ್ಜಿಯೋ ಫ್ರಸ್ಸಾಟಿಯವರ ಪ್ರೇರಣೆಯಿಂದ, ನಾವು ಸಹ ಧೈರ್ಯದಿಂದ ಹೇಳೋಣ: "ಹೌದು, ನಾನು ಕ್ರೈಸ್ತನು – ನಾನು ಕ್ರಿಸ್ತನವನಾಗಿದ್ದೇನೆ." ಇದು ನಮ್ಮೆಲ್ಲರ ನಿರೀಕ್ಷೆ

**ಕೀರ್ತನೆ 5:2-3 – "ನನ್ನ ಮೊರೆಯನ್ನು ಆಲಿಸು ಕರ್ತನೇ, ನನ್ನ ಕೂಗುಗಳನ್ನು ಕಿವಿಗೊಡು."**

## A MAN OF GOD, A SHEPHERD FOR ALL

O Bishop dear, Robert Miranda, our guide,
Chosen by God, with us to abide.
So simple, so humble, all gather near,
Your heart speaks love, your presence brings cheer.

Your tireless spirit knows no “enough,”
Through trials and storms, you stand firm and tough.
Among the many, you shine so bright,
A beacon of faith, a shepherd of light.

Intercultural bridges you gently build,
With interfaith wisdom, your life is filled.
You stand when they stand, you sit when they rest,
You dine with your flock, you share at their best.

No soul is excluded, your circle is wide,
You walk with the poor, the broken, the tried.
You smell of the sheep, their burdens you bear,
With laughter and joy, your spirit you share.

Details you treasure, no meeting too small,
A shepherd without crook, yet caring for all.
O Diocese of Gulbarga, how blessed are we,
For God's hand has touched you, His grace we see.

A man for all seasons, with charisma rare,
Youth with the youth, with the child you care.
Gentle yet firm, steadfast and true,
Integrity, prayer, and wisdom shine through.

So may your days be joyous, serene,
With God's compassion, ever keen.
Happiness, love, and blessings unfold,
A shepherd, a father, more precious than gold.





Sr. Vasantha Prathipati SSpS,
Gulbarga



# ದೇವರಾತ್ಮನ ಬಲದಿಂದ 20 ವರ್ಷಗಳ ಪ್ರೇಷಿತ ಸೇವೆ
## ಪೂಜ್ಯ ರಾಬರ್ಟ್ ಮಿರಾಂದ



ಫಾ. ರೋಶನ್ ಡಿ'ಸೋಜ



ಉತ್ತರ ಕರ್ನಾಟಕದ ತುತ್ತತುದಿಯುಲಿ ್ಲಕಥೋಲಿಕ ಕ್ರೈಸ್ತ ವಿಶ್ವಾಸ ಮೊಳಕೆಯೊಡೆಯುತ್ತಿದ್ದಾಗ ಮತ್ತು ಸುವಾರ್ತೆಯು ತನ್ನ ಮೊದಲ ಬೇರುಗಳನ್ನು ಪಸರಿಸುವಾಗ, ದೇವರು ನಮಗಾಗಿ ಮೇಷ ಪಾಲಕರನ್ನಾಗಿ ಸಿದ್ಧಪಡಿಸಿದರು. ತನ್ನ ಹೃದಯ ಬಡಿತ ಸುವಾರ್ತೆಗಾಗಿ ಹಾತೊರೆಯುತ್ತಿದ್ದ, ದೂರ ದೃಷ್ಟಿಯುಳ್ಳ ಓರ್ವ ಮುಖಂಡನ್ನು ದಯಪಾಲಿಸಿದರು. ಅವರು ಬೀದರ್ ನಾಡಿನಲ್ಲಿ ಗುರುಗಳಾಗಿ ಸೇವೆಸಲ್ಲಿಸುತ್ತಿದ್ದಾಗ ದೇವರು ಫಾ. ರಾಬರ್ಟ್ ಮೈಕೆಲ್ ಮಿರಾಂದಾರವರನ್ನು ಧರ್ಮಕ್ಷೇತ್ರದ ಪ್ರಥಮ ಧರ್ಮಾಧ್ಯಕ್ಷರಾಗಿ ಆರಿಸಿದರು. ಇವರು ಮಂಗಳೂರು ಧರ್ಮಕ್ಷೇತ್ರದ ಕಿರೆಂ ಧರ್ಮಕೇಂದ್ರಕ್ಕೆ ಸೇರಿದ ದೈವೀ ಕುಟುಂಬದಲ್ಲಿ ಜನಿಸಿದರು. ಇವರ ತಂದೆ ಶ್ರೀ. ಜೇಕಬ್ ಮಿರಾಂದಾ ಶಿಸ್ತಿನ ಶಿಪಾಯಿ ಮತ್ತು ಪೋಂಪೈ ಹಿರಿಯ ಪ್ರಾಥಮಿಕ ಶಾಲೆ, ದಾಮಸ್‌ಕಟ್ಟೆಯ ಶಿಕ್ಷಕರು. ಇವರ ತಾಯಿ ಶ್ರೀಮತಿ ಮಾರ್ಸೆಲಿನ್ ಮಿರಾಂದಾ ಧೈರ್ಯ ಮತ್ತು ವಿಶ್ವಾಸದಿಂದ ಮಕ್ಕಳ ಹೃದಯಗಳನ್ನು ರೂಪಿಸಿದವರು. ಹನ್ನೆರಡು ಮಕ್ಕಳ ಸಂಭ್ರಮ ಮತ್ತು ಪ್ರಾರ್ಥನೆಯಿಂದ ತುಂಬಿದ ಮನೆಯಲ್ಲಿ, ರಾಬರ್ಟ್ ಐದನೆಯ ಪುತ್ರನಾಗಿ 1952ರಲ್ಲಿ ಎಪ್ರೀಲ್ ತಿಂಗಳ 10ರಂದು ಜನಿಸಿದರು. ಇವರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ತಮ್ಮ ಊರಿನಲ್ಲೇ ಮುಗಿಸಿದರು. 1968ರಲ್ಲಿ ಗುರುಗಳಾಗಲು ಮಂಗಳೂರಿನ ಜೆಪ್ಪುವಿನಲ್ಲಿರುವ ಸಂತ ಜೋಸೆಫರ ಗುರುಮಠಕ್ಕೆ ಪ್ರವೇಶಿಸಿದರು. 1972ರಲ್ಲಿ ಅವರುಸಂತ ಅಲೋಶಿಯಸ್ ಕಾಲೇಜು, ಮಂಗಳೂರಿನಲ್ಲಿ ಪದವಿ ಪೂರ್ಣಗೊಳಿಸಿದರು. ನಂತರ ಗುರುಮಠದ ಶಿಕ್ಷಣ ಮುಂದುವರಿಸಿದರು. ಎರಡು ವರ್ಷದ ತತ್ವಶಾಸ್ತ್ರ ಮತ್ತು ನಾಲ್ಕು ವರ್ಷದ ದೈವಶಾಸ್ತ್ರವನ್ನು 1977ರಲ್ಲಿ ಮುಗಿಸಿಸೇವಾದರ್ಶಿ ದೀಕ್ಷೆಯನ್ನು ಸ್ವೀಕರಿಸಿದರು. 1978ರ ಮೇ 4ರಂದು ಪೂಜ್ಯ ಬೇಸಿಲ್ ಸಾಲ್ವದೋರ್ ಡಿ'ಸೋಜಾ ಅವರ ಅಮೃತ ಹಸ್ತದಿಂದ ಯಾಜಕ ದೀಕ್ಷೆಯನ್ನು ಪಡೆದರು. ಇದು ಅವರ ಸೇವಾ ಜೀವನದ ಶುಭಾರಂಭವಾಗಿತ್ತು.





ಮೊದಲ ಸೇವೆಯಾಗಿ ಅವರು ಮಂಗಳೂರು ಧರ್ಮಕ್ಷೇತ್ರದ ಮೂಡುಬೆಳ್ಳೆಯ ಸಂತ ಲಾರೆನ್ಸ್ ಧರ್ಮಕೇಂದ್ರದಲ್ಲಿ ಮೂರು ವರ್ಷ ಸೇವೆಸಲ್ಲಿಸಿದರು. ನಂತರ ಒಂದು ವರ್ಷ ಮಂಗಳೂರಿನ ರೊಸಾರಿಯೊ ಮಹಾದೇವಾಲಯದಲ್ಲಿ ಸಹಾಯಕ ಗುರುಗಳಾಗಿ ನೇಮಕಗೊಂಡರು. ಆದರೆ ದೇವರ ಯೋಜನೆಗಳು ಇನ್ನೂ ವಿಭಿನ್ನವಾಗಿದ್ದವು. ಉತ್ತರ ಕರ್ನಾಟಕದ ಬೀದರ್‌ಗೆ ಅವರನ್ನು ಕಳುಹಿಸಲಾಯಿತು–ಅಲ್ಲಿ ಬಡತನ ಆಳವಾಗಿತ್ತು, ಕಥೋಲಿಕ ವಿಶ್ವಾಸದ ಬೀಜ ಇನ್ನೂ ಮೊಳೆಯುತ್ತಿರಲಿಲ್ಲ. ಗ್ರಾಮಗಳು ದೂರದಲ್ಲಿದ್ದು,



ಜನರು ಶಿಕ್ಷಣ, ಭರವಸೆ, ಘನತೆಗಾಗಿ ಹಂಬಲಿಸುತ್ತಿದ್ದರು. ಫಾ ರಾಬರ್ಟ್ ಈ ಸವಾಲುಗಳನ್ನು ಧೈರ್ಯದಿಂದ ಎದುರಿಸಿ, ಜನರ ಜೊತೆ ನಡೆದು, ಬಡವರ ಅಳಲನ್ನು ಆಲಿಸಿ, ಪುಟ್ಟ ಸಮುದಾಯಗಳನ್ನು ಕಟ್ಟಿದರು.

ಅವರ ಬದ್ಧತೆಯನ್ನು ಗಮನಿಸಿದ ಅಂದಿನ ಧರ್ಮಾಧ್ಯಕ್ಷರಾಗಿದ್ದ ಪೂಜ್ಯ ಬೇಸಿಲ್, ಅವರನ್ನು ಬೀದರ್ ಮಿಷನ್‌ನ ಎಪಿಸ್ಕೊಪಲ್ ವಿಕಾರ್ ಆಗಿ ನೇಮಿಸಿದರು. ಈ ಹೊಣೆಗಾರಿಕೆಯಲ್ಲಿ ಅವರು ಕೇವಲಸೇವೆಸಲ್ಲಿಸಲಿಲ್ಲ, ಬದಲಾಗಿ ಭವಿಷ್ಯದ ಧರ್ಮಕ್ಷೇತ್ರದ ಕನಸಿಗೆ ಆಕಾರ ನೀಡಿದರು. ಆ ಕನಸು 2005ರ ಜೂನ್ 24ರಂದು ನೆರವೇರಿತು. ಪೋಪ್ ಬೆನೆಡಿಕ್ಟ್ XVI ಅವರು ಫಾ. ರಾಬರ್ಟ್ ಮಿರಾಂದರನ್ನು ಗುಲ್ಬರ್ಗಾ ಧರ್ಮಕ್ಷೇತ್ರದ ಪ್ರಥಮ ಧರ್ಮಾಧ್ಯಕ್ಷರನ್ನಾಗಿ ನೇಮಿಸಿದರು. ಧರ್ಮಾಧ್ಯಕ್ಷರಾಗಿ ಅವರ ಮಂತ್ರವಾಗಿದ್ದದ್ದು "ದೇವರಾತ್ಮನ ಬಲದಿಂದ." ಇದೇ ಮಾತುಗಳು ಅವರ ಪ್ರತಿಯೊಂದು ನಿರ್ಧಾರ, ಪ್ರತಿಯೊಂದು ಕಾರ್ಯ ಮತ್ತು ಪ್ರತಿಯೊಂದು ಪಯಣವನ್ನು ಮಾರ್ಗದರ್ಶಿಸಿದವು.



**ಧರ್ಮಾಧ್ಯಕ್ಷರಾದ ಪೂಜ್ಯ ರಾಬರ್ಟ್ ಕೇವಲ ಕಟ್ಟಡಗಳನ್ನು ನಿರ್ಮಿಸಲಿಲ್ಲ;** ಜೀವಂತ ವಿಶ್ವಾಸದ ಸಮುದಾಯಗಳನ್ನು ಕಟ್ಟಿದರು. ಅವರು ಪಾಲನಾ ಪರಿಷತ್ತುಗಳು, ಧರ್ಮ ಕೇಂದ್ರಗಳನ್ನು, ಸೇವಾನಿರತ ಹಳ್ಳಿಗಳನ್ನು, ಹಳ್ಳಿಗಳಲ್ಲಿ ಉತ್ತಮ ವಿಧ್ಯಾಭ್ಯಾಸದಿಂದ ವಂಚಿತರಾದ ಮಕ್ಕಳಿಗಾಗಿ ಶಾಲೆಗಳು, ಬಾಲಸದನ ಹಾಸ್ಟೆಲ್‌ಗಳನ್ನು, ಆರೋಗ್ಯ ಕೇಂದ್ರಗಳನ್ನು, ಹಾಗೂ ಸಮಾಜ ಅಭಿವೃದ್ಧಿ ಸಂಸ್ಥೆಗಳನ್ನು ಆರಂಭಿಸಿದರು. ಬಡತನದ ಬೇಡಿಗಳನ್ನು ಮುರಿಯಲು ಶಿಕ್ಷಣವನ್ನು ಆಯುಧವನ್ನಾಗಿ ಬಳಸಿದರು. ಆರೋಗ್ಯ ಸೇವೆಯನ್ನು ಕರುಣೆಯ ಕಾರ್ಯವೆಂದು ಬೆಳೆಸಿದರು. ಉತ್ತಮ ಮತ್ತು ಆರೋಗ್ಯ ಭರಿತ ಸಂಪರ್ಕಗಳನ್ನು ಬೆಳೆಸಲು ಅಂತರ್ ಧರ್ಮೀಯ ಸಂವಾದ ಮತ್ತು ಶಾಂತಿ ಕೂಟಗಳು, ಅಂತರ್ ಪಂಗಡ ಮುಖಂಡರ ಸಭೆಗಳನ್ನು ಆಯೋಜಿಸುವ ಪ್ರಯತ್ನಗಳನ್ನು ತಮ್ಮ ಹೃದಯದಲ್ಲಿ ಧರಿಸಿದರು.



ತಮ್ಮ ಕನಸನ್ನು ಮುಂದುವರಿಸಲು ಧರ್ಮಕ್ಷೇತ್ರದ ಗುರುಗಳ ಸಮಸ್ಯೆಗಳು ಎದ್ದು ಕಾಣುತ್ತಿತ್ತು. ಮಂಗಳೂರು ಧರ್ಮಕ್ಷೇತ್ರ ಅನೇಕ ಗುರುಗಳು ನಮ್ಮ ಧರ್ಮಕ್ಷೇತ್ರದಲ್ಲಿ ಅನೇಕ ಸೇವೆ ಸಲ್ಲಿಸಿ ನೂತನವಾಗಿ ಗುಲ್ಬರ್ಗಾ ಧರ್ಮಕ್ಷೇತ್ರಕ್ಕಾಗಿ ಯಾಜಕ ದೀಕ್ಷೆ ಪಡೆದ ಗುರುಗಳಿಗೆ ಪ್ರೇರಣೆಯಾದರು. ಫಾ. ಬೆಂಜಮಿನ್, ಫಾ ವಿಕ್ಟರ್ ಮಚಾದೊ, ಫಾ. ಜೋಸೆಫ್ ರೊಡ್ರಿಗಸ್, ಫಾ ಅಲ್ಬರ್ಟ್ ಕ್ರಾಸ್ತ ಇನ್ನೂ ಹಲವು ಗುರುಗಳು ಸೇವೆ ಸಲ್ಲಿಸಿ ತಮ್ಮ ಮೂಲ ಧರ್ಮಕ್ಷೇತ್ರಕ್ಕೆ ಹಿಂತಿರುಗಿದಾಗ ಗುರುಗಳ ಸಂಖ್ಯೆ ಕಡಿಮೆಯಾಗುತ್ತಾ ಬಂತು. ಬೆಳೆ ಹೇರಳವಾಗಿದೆ ಕೊಯ್ಲುಗಾರರು ವಿರಳ. ದಿನೆ ದಿನೆ ಸೇವಾಕಾರ್ಯ ಹೆಚ್ಚುತ್ತಿರುವ ಸಮಯದಲ್ಲಿ ಧರ್ಮಾಧ್ಯಕ್ಷರು ಅನೇಕ ಧಾರ್ಮಿಕ ಸಹೋದರ, ಸಹೋದರಿಯರ ಸಭೆಗಳನ್ನು ಆಹ್ವಾನಿಸಿದರು. ಅವರ ಅಮಂತ್ರಣದ ಫಲವಾಗಿ 28 ಕಾನ್ವೆಂಟ್‌ಗಳು ಸ್ಥಾಪನೆಯಾದವು, 7 ಪುರುಷ ಧಾರ್ಮಿಕ ಗುರುಗಳ ಸಭೆಗಳು ಸುವಾರ್ತ ಕಾರ್ಯಕ್ಕೆ ಸ್ಪಂದಿಸಿದರು. ನಮ್ಮ ಧರ್ಮಕ್ಷೇತ್ರ ಬಲು ಕಿರಿದಾದರೂ ಅನೇಕ ಧಾರ್ಮಿಕ ಗುರುಗಳ ಮತ್ತು ಕನ್ಯಾಭಗಿನೀಯರ ಪ್ರಸನ್ನತೆ ಧರ್ಮಕ್ಷೇತ್ರಕ್ಕೆ ಶೋಭೆ ಮತ್ತು ಧೈರ್ಯ ತಂದಿದೆ.



**ಆಡಳಿತ ಬೆಳವಣಿಗೆ:** ಪ್ರಾರಂಭದಲ್ಲಿ ಪಾಲನಾ ಸೇವೆಗಾಗಿ ಧರ್ಮಾಧ್ಯಕ್ಷರ ಕಛೇರಿಯನ್ನು ದೈವಾನುಗ್ರಹಮಾತೆ ಮಹಾದೇವಾಯದಲ್ಲಿ ಸ್ಥಾಪಿಸಿದರು. ಆಡಳಿತ ಕಛೇರಿಗಳನ್ನು ವಿಸ್ತರಿಸುವ ಸಲುವಾಗಿ ಸ್ಥಳದ ಅಭಾವ ಇರುವುದರಿಂದ ಸಂತೋಷ ಕಾಲೋನಿಯಲ್ಲಿ ತದನಂತರ ಕೋಟ್ನೂರು ಹಳ್ಳಿಯ ಕೇಂದ್ರೀಯ ವಿದ್ಯಾಲಯದ ಸಮೀಪದಲ್ಲಿರುವ ಸ್ಥಳವನ್ನು ಖರೀದಿಸಿ ನವೆಂಬರ್ 1, 2008ರಲ್ಲಿ ಧರ್ಮಾಧ್ಯಕ್ಷರ ನಿವಾಸವನ್ನು ಹಾಗೂ ಸುಜ್ಞಾನ ಪಾಲನಾ ಕೇಂದ್ರವನ್ನು 24 ನವೆಂಬರ್ 2010ರಲ್ಲಿ ಕಟ್ಟಿದರು. ತದನಂತರ ದೈವಾನುಗ್ರಹ ಮಾತೆ ಮಹಾದೇವಾಲಯವನ್ನು 2013ರಲ್ಲಿ ಸುಂದರವಾಗಿ ಪುನರ್ ಸ್ಥಾಪಿಸಿದರು. ಅವರ ಬಲ ತಂಡ ಸ್ಪೂರ್ತಿ, ಟೀಮ್ ಸ್ಪಿರಿಟ್. ಗುರುಗಳು ಮತ್ತು



ಕನ್ಯಾಭಗಿನೀಯರನ್ನು ಒಟ್ಟಾಗಿ ಸೇರಿಸಿ, ತಂಡ ಸಭೆಗಳು, ಶ್ರದ್ಧಾಸಮಾವೇಶಗಳು, ಧಾರ್ಮಿಕ ಶಿಬಿರಗಳ ಮೂಲಕ ಸೇವಾ ಅನುಭವ ಹಂಚಿಕೊಳ್ಳಲು ಪ್ರೋತ್ಸಾಹಿಸಿದರು. ಧರ್ಮಕೇಂದ್ರದಲ್ಲಿ ಗುರು ತರಭೇತಿಗಾಗಿ ಸಿರ್ನೂರಿನಲ್ಲಿ ಪವಿತ್ರ ಹೃದಯ ಕಿರು ಗುರುಮಠವನ್ನು 2011ರಲ್ಲಿ ಸ್ಥಾಪಿಸಿದರು. ಪ್ರತೀ ವರ್ಷದ ಜೂನ್ ತಿಂಗಳ ಧಾರ್ಮಿಕ ಯೋಜನೆಗಳನ್ನು ರೂಪಿಸಿಲು ಪಾಲನಾ ಯೇಜನೆ 24 ಆಯೋಗಗಳ ಪಾಲನಾ ಯೋಜನೆಗಳನ್ನು ಪ್ರಾರಂಭಿಸಿದರು.

**ವಿಶ್ವಾಸದ ರೂಪಣೆ:** ಪೂಜ್ಯ ಬೇಸಿಲ್ ಡಿ'ಸೋಜರವರ ಕನಸನ್ನು ನನಸಾಗಿಸಲು ಪೂಜ್ಯ ರಾಬರ್ಟ್ ಮಿರಾಂದರವರು ದಿವಂಗತ ಧರ್ಮಾಧ್ಯಕ್ಷರ ದಾರಿಯಲ್ಲಿ ನಡೆಯಲು ಶ್ರಮಿಸಿದರು. ಧರ್ಮಕ್ಷೇತ್ರದ ಪ್ರತಿಯೊಂದು ತಾಲೂಕಿನಲ್ಲಿಯೂ ಕಥೋಲಿಕ ಕ್ರೈಸ್ತ ಪ್ರಸನ್ನತೆಯಿಂದ ಸಮಾಜ ಸೇವೆಗೈಯಲು ಹೊಸ ಸುವರ್ತಾ ಕೇಂದ್ರಗಳನ್ನು ಪ್ರಾರಂಭಿಸಿದರು. ಧರ್ಮಾಧ್ಯಕ್ಷರ ಹೃದಯದಲ್ಲಿ ಮೊದಲ ಆದ್ಯತೆ ವಿಶ್ವಾಸದ ಬೆಳವಣಿಗೆಯೇ ಆಗಿತ್ತು. ವಿಶ್ವಾಸ ಎಂಬ ಬಂಡೆಯ ಮೇಲೆ ಕಟ್ಟಲಾದ ಸಮುದಾಯವೇ ಧರ್ಮಸಭೆಯ ಜೀವ. ಧರ್ಮಕೇಂದ್ರಗಳನ್ನು ವಿಸ್ತರಿಸಿದರು, ಅವರು ಹೊಸ ಸೇವಾನಿರತ ಹಳ್ಳಿಗಳನ್ನು ಸೇರಿಸಿದರು, ಅಲ್ಲಿ ಚಿಕ್ಕ ಚಿಕ್ಕ ದೇವಾಲಯಗಳನ್ನು ನಿರ್ಮಿಸಿ ವಿಶ್ವಾಸದ ಬೆಳಕು ಹಚ್ಚಿದರು. ಗುರುಗಳು ಮತ್ತು ಧಾರ್ಮಿಕ ಸಹೋದರಿಯರು ಒಗ್ಗಟ್ಟಿನಿಂದ ಸುವಾರ್ತಾ ಸೇವೆಗೈಯಲು ಅವರು ಯಾವಾಗಲೂ ಪ್ರೇರೇಪಿಸಿದರು. ತಂಡದ ಸಭೆಗಳು, ಸ್ಮರಣಾರ್ಥ ದಿನಗಳು, ಧ್ಯಾನಕೂಟಗಳು ಮತ್ತು ಶಿಬಿರಗಳ ಮೂಲಕ ಎಲ್ಲರಿಗೂ ವಿಶ್ವಾಸದ ಅನುಭವವನ್ನು ಹಂಚಿಕೊಳ್ಳುವ ಅವಕಾಶ ಒದಗಿಸಿದರು.



**ಸಾಮಾಜಿಕ ಸೇವೆ:** ಅವರ ದೃಷ್ಟಿಯಲ್ಲಿ ಸಮಾಜದ ಏಳಿಗೆಗಾಗಿ ದುಡಿಯುವುದು ಧರ್ಮಸಭೆಯ ಕರ್ತವ್ಯ (ಬಡವರ ಆಯ್ಕೆ **option for the poor**). 1993ರಲ್ಲಿ ಸ್ಥಾಪನೆಯಾಗಿದ್ದ ಹುಮನಾಬಾದಿನ ಓರ್ಬಿಟ್ ಸಮಾಜ ಸೇವಾಭಿವೃದ್ಧಿ ಸಂಸ್ಥೆಗೆ ಬೆಂಬಲ ನೀಡಿ, ಕಲಬುರಗಿಯ ಕೊಟ್ನೂರಿನಲ್ಲಿ ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆಯನ್ನು 2006ರಲ್ಲಿ ಸ್ಥಾಪಿಸಿದರು. ಬಡವರ ಸಂಕಷ್ಟಗಳನ್ನು ಅವರ ಹೃದಯದಲ್ಲಿ ಹೊತ್ತುಕೊಂಡು, ಜನರ ನಡುವೆ ಬಾಳಿದರು, ಅವರ ನೋವು ಹಂಚಿಕೊಂಡರು. ಕಟ್ಟಡಗಳನ್ನು ಕಟ್ಟುವುದಕ್ಕಿಂತ ಜನರ ಹೃದಯಗಳನ್ನು ಕಟ್ಟುವುದು ಅವರ ನಿಜವಾದ ಸೇವೆ ಅವರದಾಗಿತ್ತು. ಜನರೊಂದಿಗೆ ಬದುಕುವುದು, ಅವರೊಂದಿಗೆ ಊಟ ಮಾಡುವುದು, ಕೆಲಸ ಮಾಡುವುದು ಇವರ ಸರಳ ಬದುಕಿನ ಗುರುತು. 14 ವಿವಿಧ ಕಥೋಲಿಕ ಕ್ರೈಸ್ತ ಸಮಾಜ ಸೇವೆ ಸಂಸ್ಥೆಗಳ ಮೂಲಕ ಜಾತಿ ಮತ ಧರ್ಮವಿಲ್ಲದೆ ಅನೇಕರ ಜೀವನದಲ್ಲಿ ಹೊಸ ಬೆಳಕನ್ನು ತರಲು ಶ್ರಮಿಸಿರುತ್ತಾರೆ. ಸ್ವಸಹಾಯ ಸಂಘಗಳ ಮುಖಾಂತರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಅಂಗವಿಕಲರ ಬದುಕಿನಲ್ಲಿ ಶಕ್ತಿ, ರೋಗಿಗಳಿಗೆ ವೈದ್ಯಕೀಯ ನೆರವು, ಸ್ವ ಉದ್ಯೋಗದಿಂದ ಹೋಸ ಜೀವನ, ಅನೇಕರಿಗೆ ಉದ್ಯೋಗವಕಾಶಗಳು ನೀಡಿದೆ.



**ಶಿಕ್ಷಣ:** ಧರ್ಮಕ್ಷೇತ್ರದ ಪ್ರಾರಂಭದಲ್ಲಿ ಉನ್ನತ ಶಿಕ್ಷಣ ಪಡೆದವರು ಕೇವಲ ಇಬ್ಬರು ಮಾತ್ರ. ಶಿಕ್ಷಣದಿಂದ ವಂಚಿತರಾದವರನ್ನು ನೋಡಿ ಶಿಕ್ಷಣವೇ ಬಡವರನ್ನು ಮೇಲಕ್ಕೆತ್ತುವ ಶಕ್ತಿಯಾಗಿದೆ ಎಂಬ ವಿಶ್ವಾಸ ಪೂಜ್ಯ ಧರ್ಮಾಧ್ಯಕ್ಷರಿತ್ತು. ಶಿಕ್ಷಣ ಕ್ಷೇತ್ರದಲ್ಲಿ ಸೇವೆಸಲ್ಲಿಸಲು ಗುಲ್ಬರ್ಗಾ ಡಯೋಸಿಜನ್ ಎಡ್ಯೂಕೇಶನ್ ಸೋಸೈಟಿಯನ್ನು 2005 ಸ್ಥಾಪಿಸಿದರು. ಅಂಗನವಾಡಿಯಿಂದ ಪದವಿ ಶಿಕ್ಷಣ ತನಕ – ತಾಂತ್ರಿಕ ಕೌಶಲ್ಯ ಶಿಕ್ಷಣದ ವ್ಯವಸ್ಥೆ ನಮ್ಮ ನಮ್ಮ ಧರ್ಮಕ್ಷೇತ್ರದಲ್ಲೇ ನಮ್ಮ ಮಕ್ಕಳು ಪಡೆಯಬೇಕೆಂದು ಆಶಿಸಿದರು. ಪ್ರಾರಂಭದಲ್ಲಿ ಹಳ್ಳಿಗಳಲ್ಲಿ ಉತ್ತಮ ವಿಧ್ಯಾಭ್ಯಾಸದಿಂದ ವಂಚಿತರಾದ ಮಕ್ಕಳಿಗಾಗಿ ಶಾಲೆಗಳು, ಬಾಲಸದನ ಹಾಸ್ಟೆಲ್‌ಗಳನ್ನು ಶಾಲೆಗಳನ್ನು ಪ್ರಾರಂಭಿಸಿದರು. ಅವರು ಬೀದರ್, ಇಟಗಾ, ಏಕಾಂಬಾ, ತಾಳಿಕೋಟೆ, ಶಾಹಾಬಾದ್, ಹೆಬ್ಬಾಳದಲ್ಲಿ ಹೊಸ ಶಾಲೆಗಳನ್ನು ಸ್ಥಾಪಿಸಿದರು. ಪ್ರೌಢ ಶಿಕ್ಷಣದ ಪದವಿ ಪೂರ್ವ ಕಾಲೇಜನ್ನು ಬೀದರ್ ಸೈಂಟ್ ಜೋಸೇಫ್‌ನಲ್ಲಿ 1992ರಲ್ಲಿ ಮತ್ತು ಸೈಂಟ್ ಮೇರಿಸ್ ಪಿ.ಯು ಕಾಲೇಜನ್ನು 2008ರಲ್ಲಿ ಸ್ಥಾಪಿಸಿದರು. ಗ್ರಾಮೀಣ ಮಕ್ಕಳಿಗೆ ಕಲಿಕೆಯ ಹಕ್ಕನ್ನು ಒದಗಿಸಲು ಧಾರ್ಮಿಕ ಗುರುಗಳಿಗೆ, ಕನ್ಯಾಭಗಿನಿಯರಿಗೆ ತಮ್ಮದೇ ಸಂಸ್ಥೆಯ ವಿದ್ಯಾಲಯವನ್ನು ಸ್ಥಾಪಿಸಲು ಅನುಮತಿಯನ್ನು ನೀಡಿದರು. ಪ್ರಸ್ತುತ 41 ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 16 ಶಾಲೆಗಳು ಜಿ.ಡಿ.ಇ.ಎಸ್, 29 ಪ್ರೌಢ ಶಾಲೆಗಳಲ್ಲಿ 8 ಜಿ.ಡಿ.ಇ.ಎಸ್, 8 ಪದವಿ ಪೂರ್ವ ಕಾಲೇಜುಗಳಲ್ಲಿ, 2 ಜಿ.ಡಿ.ಇ.ಎಸ್, 6 ಇತರ



ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾಗಲು ಕಾರಣ ಕರ್ತರಾಗಿದ್ದಾರೆ. ಕಥೋಲಿಕ ಕ್ರೈಸ್ತರಲ್ಲಿ ಶಿಕ್ಷಣ ಮಟ್ಟ ಹೆಚ್ಚಿಸಲು ಮಕ್ಕಳಿಗೆ ಶಾಲಾ ವಾರ್ಷಿಕ ಶುಲ್ಕದಲ್ಲಿ ಅರ್ಧದಷ್ಟು ರಿಯಾತಿ ನೀಡಲು ಆಜ್ಞೆ ನೀಡಿದರು. ಪದವಿ ಶಿಕ್ಷಣ ಕಾಲೇಜು ನಮ್ಮ ಯುವಜನರಿಗೆ ತುಂಬಾ ಅಗತ್ಯವಿತ್ತು ಆದರೆ ಧರ್ಮಕ್ಷೇತ್ರವು ತನ್ನದೇ ಆದ ಪದವಿ ಶಿಕ್ಷಣ ಕಾಲೇಜು ನಡೆಸುವುದು ಅಸಾಧ್ಯವಿತ್ತು. ಆದುದರಿಂದ ಜೆಸ್ವಿಟ್ ಗುರುಗಳಿಗೆ ಪ್ರಾರಂಭಿಸಲು ತುಂಬಾ ಶ್ರಮಪಟ್ಟರು. ವೈಯಕ್ತಿಕವಾಗಿ ಪ್ರೋವಿನ್ಸಿಯಲ್ ಸುಪೀರಿಯರ್, ಜನರಲ್ ಸುಪೀರಿಯರ್‌ಗಳಿಗೆ ಭೇಟಿ ಮಾಡಿ ತಮ್ಮ ಅಗತ್ಯಗಳಿಗೆ ಮನವಿ ಮಾಡಿದ್ದಾರೆ.ಉನ್ನತ ಶಿಕ್ಷಣಕ್ಕಾಗಿ ಅನೇಕ ಮಕ್ಕಳನ್ನು ಮಂಗಳೂರು, ಕಾರವಾರ, ಹುಬ್ಬಳಿಗಳಿಗೆ ಕಳುಹಿಸಿ ಉನ್ನತ ಶಿಕ್ಷಣ ಪಡೆಯಲು ಸಹಕಾರಿಯಾಗಿದ್ದಾರೆ.

**ಬಡ ಮಕ್ಕಳಿಗೆ ಶಿಕ್ಷಣ ಸಹಕಾರ:** ಶಿಕ್ಷಣಕ್ಕಾಗಿ ಹಾತೊರೆಯುವವರಿಗಾಗಿ ಮತ್ತು ಉನ್ನತ ಕನಸಿನ ಅರಮನೆಯನ್ನು ಕಟ್ಟಲು ಮಕ್ಕಳಿಗಾಗಿ ಶಾಲೆಯಲ್ಲಿ ಬಾಲಜ್ಯೋತಿ ಟ್ಯೂಶನ್ ಟೀಚರ್, ಬಡ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಬಾಲಜ್ಯೋತಿ ಧನ ಸಹಾಯ ಮತ್ತು ಮಾರ್ಗದರ್ಶನ. ಪುವರ್ ಸ್ಟೂಡೆಂಟ್ ಫಂಡ್, ಉನ್ನತ ಶಿಕ್ಷಣಕ್ಕಾಗಿ ಸಹಕಾರ. ಇದರ ಫಲವಾಗಿ ಪ್ರಸ್ತುತ ಡಾಕ್ಟರ್‌ಗಳು, ನರ್ಸ್‌ಗಳು, ಇಂಜಿನೀರ್‌ಗಳು, ಸ್ವದೋಗ್ಯಸ್ಥರು, ಪಿ.ಏಚ್.ಡಿ ಶಿಕ್ಷಕರು, ರಾಜಕೀಯ ಮುಖಂಡರು, ಗುರುಗಳು, ಕನ್ಯಾಭಗಿನೀಯರು ಉದಯಿಸಿದ್ದಾರೆ. ಇವುಗಳಿಗೆ ಧರ್ಮಾಧ್ಯಕ್ಷರು ಮೂಲ ಕಾರಣರಾಗಿದ್ದಾರೆ.

**ಆರೋಗ್ಯ ಸೇವೆ:** ಆರೋಗ್ಯ ಸೇವೆ ಕೂಡ ಅವರ ಹೃದಯದ ಭಾಗ. ಅವರು ಸ್ಥಿರವಾಗಿರುವ ಕಟ್ಟಡಕ್ಕೆ ಜಾಸ್ತಿ ಗಮನ ನೀಡಲಿಲ್ಲ, ಬದಲಾಗಿ ಒಡಾಡುವ ಆಸ್ಪತ್ರೆಗೆ, ಹಳ್ಳಿಯಲ್ಲಿರುವ ರೋಗಿಗಳಿಗೆ ಭೇಟಿಮಾಡುವ ಮುಖಾಂತರ ಆರೋಗ್ಯಭಾಗ್ಯವನ್ನು ದಯಪಾಲಿಸಿದ್ದಾರೆ. 2009ರಲ್ಲಿ ಕಲಬುರಗಿಯಲ್ಲಿ ಮದರ್ ತೆರೆಸಾ ಆಸ್ಪತ್ರೆಗೆ ಅಡಿಗಲ್ಲು ಹಾಕಿ, ಅನೇಕ ಬಡವರಿಗೆ ಚಿಕಿತ್ಸೆ ದೊರಕುವಂತೆ ಮಾಡಿದರು. ಧರ್ಮಸಭೆಯ ಆರೋಗ್ಯ ಸೇವೆಯು ದಯೆಯ ಕ್ರಿಯೆಎಂದು ಅವರು ವಿಶ್ವಾಸ ಹೊಂದಿದ್ದರು. ಧರ್ಮಭಗಿನೀಯರು ಭಾಲ್ಕಿ, ಸಂತಪುರ, ಜಲಸಂಗಿ, ಜೆವರ್ಗಿ, ಚಿತ್ತಾಪುರ, ಬಿಜಾಪುರದಲ್ಲಿ ನಡೆಸುವ 7 ಆಸ್ಪತ್ರೆಗಳಿಗೆ ಪ್ರೋತ್ಸಾಹ ನೀಡಿದ್ದಾರೆ.

**ಶ್ರೀಸಾಮಾನ್ಯರ ಜೀವನ ಶೈಲಿಯೇ – ಅವರ ಜೀವನ ಶೈಲಿ:** ಅವರ ಜೀವನ ಸರಳತೆಗೇ ಮಾದರಿ. ಬಡತನದಲ್ಲಿ ಜೀವಿಸುತ್ತಿರುವ ಜನರೊಂದಿಗೆ ಸಾವುಕರನಾಗಲೂ ಯೋಚಿಸಲಿಲ್ಲ. ವೈಯಕ್ತಿಕ ವಾಹನ ಖರೀದಿಸಲಿಲ್ಲ, ಏರ್–ಕಂಡೀಷನ್ ಆಳವಡಿಸಲಿಲ್ಲ, ಬೆಲೆಬಾಳುವ ವಸ್ತ್ರಗಳನ್ನು ಧರಿಸಲಿಲ್ಲ, ತಮ್ಮ ಕೈಗೆಬಂದಪ್ರತಿಯೊಂದು ದೇಣಿಗೆಯನ್ನೂ ಧರ್ಮಕ್ಷೇತ್ರದ ಅಗತ್ಯಗಳಿಗೆ ನೀಡಿದರು. ನಿರ್ವಹಣಾ ನಿಧಿಗಳನ್ನು ಪ್ರಾರಂಭಿಸಿ, ಭವಿಷ್ಯದ ಆರ್ಥಿಕ ಸ್ಥಿರತೆಯನ್ನು ಖಚಿತಪಡಿಸಿದರು. ಅವರು ಅಲೆಮಾರಿ ಯೋಧನಂತೆ ಶ್ರಮಿಸಿದರು. ನಿದ್ರೆ, ವಿಶ್ರಾಂತಿಗಳನ್ನು ತ್ಯಜಿಸಿ, ತನ್ನ ಕನಸನ್ನು ಸಾಕಾರಗೊಳಿಸಲು ನಿರಂತರ ಪ್ರಯತ್ನಿಸಿದರು. ನಾವು ಎಲ್ಲರೂ ಅವರ ಸೇವೆಯ ಸಾಕ್ಷಿಗಳು. ಪೂಜ್ಯ ರಾಬರ್ಟ್ ಮೈಕೆಲ್ ಮಿರಾಂದ ಅವರ ಜೀವನ ನಂಬಿಕೆಯ ಸಾಕ್ಷಿ, ಬಡವರ ಪರ ಧ್ವನಿ, ಸೇವೆಯ ಚಿಹ್ನೆ. ಅವರು ಕಟ್ಟಿದದು ಕೇವಲ ಕಟ್ಟಡವಲ್ಲ–ಜನರ ಹೃದಯಗಳು. ಅವರು ನಿದ್ರೆಯನ್ನೂ ತ್ಯಾಗ ಮಾಡಿ ಕೆಲಸ ಮಾಡಿದವರು. ಬಡವರ ಕಣ್ಣೀರನ್ನು ಒರೆಸಿದವರು. ಅವರ ಬದುಕು ಒಂದು ಜೀವಂತ ಸಾಕ್ಷಿ–ವಿಶ್ವಾಸ, ತ್ಯಾಗ ಮತ್ತು ಸುವಾರ್ತೆಗಾಗಿ ಸಂಪೂರ್ಣವಾಗಿ ದೇವರ ಆತ್ಮದಲ್ಲಿ ಬದುಕಿದ ಒಬ್ಬ ಮೇಷಪಾಲಕರು ಅವರು.







# ಗುಲ್ಬರ್ಗಾ ಧರ್ಮಕ್ಷೇತ್ರದಲ್ಲಿ ಜ್ಯೂಬಿಲಿ ವರ್ಷ 2025



ಫಾ. ಸ್ಟ್ಯಾನಿ ಲೋಬೊ

ಗುಲ್ಬರ್ಗಾ ಧರ್ಮಕ್ಷೇತ್ರದಲ್ಲಿ ಜ್ಯೂಬಿಲಿ ವರ್ಷ 2025ವನ್ನು ಕೃಪೆಯ, ನವೀಕರಣದ ಮತ್ತು ಏಕತೆಯ ದಿವ್ಯ ಸಂದರ್ಭವಾಗಿ ಭಕ್ತ ಜನರು ಅನುಭವಿಸಿದರು. "ಭರವಸೆಯ ಯಾತ್ರಿಕರು" ಎಂಬ ಆಳವಾದ ಧ್ಯೇಯವಾಕ್ಯದೊಂದಿಗೆ ಮಹಿಳೆಯರು, ಮಕ್ಕಳು, ಯುವಕರು ಹಾಗೂ ಕಿರು ಕ್ರೈಸ್ತ ಸಮುದಾಯಗಳು (BEC) ಒಟ್ಟಾಗಿ ವಿಶ್ವಾಸದ ಪಥದಲ್ಲಿ ನಡೆಯುತ್ತಾ, ಕ್ರಿಸ್ತನ ಪ್ರೀತಿಯ ಸಾಕ್ಷಿಗಳಾದರು. ಈ ಜ್ಯೂಬಿಲಿ ಪ್ರಾರ್ಥನೆ, ಸಾಂಸ್ಕೃತಿಕ ಆಚರಣೆ, ಆಧ್ಯಾತ್ಮಿಕ ಶಿಬಿರಗಳು ಮಾತ್ರವಲ್ಲದೆ ಪರಿಸರದ ಕಾಳಜಿ ಹಾಗೂ ಪಾಲನಾ ಯೋಜನೆಗಳ ಮೂಲಕವೂ ಬದುಕಿನ ಬೇರೂರಿಕೆಯಾಗಿ ಪರಿಣಮಿಸಿತು.



**ಸುವಾರ್ತೆ ಸಾರುವ ಚಿಣ್ಣರ ಜ್ಯೂಬಿಲಿ ಸಂಭ್ರಮ:** ನಮ್ಮ ಧರ್ಮಕೇಂದ್ರದಲ್ಲಿ ಜ್ಯೂಬಿಲಿ ಸಂಭ್ರಮಕ್ಕೆ ಚಾಲನೆ ನೀಡಿದ್ದು ಸುವಾರ್ತೆ ಸಾರುವ ಚಿಣ್ಣರಿಂದ. ಸುವಾರ್ತೆ ಸಾರುವ ಚಿಣ್ಣರಿಗಾಗಿ ಆಯೋಜಿಸಲಾದ "ಚಿಣ್ಣರ ಮಹೋತ್ಸವ 2025" ಜನವರಿ 12 ರಿಂದ 14 ರವರೆಗೆ ಭಾಲ್ಕಿಯ ಬಾಲ ಯೇಸು ಪುಣ್ಯಕ್ಷೇತ್ರದಲ್ಲಿ ನಡೆಯಿತು. ಸುಮಾರು 400 ಮಕ್ಕಳು ಗುರುಗಳು ಮತ್ತು ಧಾರ್ಮಿಕ ಸಹೋದರಿಯರು ಸೇರಿಕೊಂಡು "ನಮ್ಮ ಜೀವನದಲ್ಲಿ ಭರವಸೆಯ ಯಾತ್ರೆ" ಎಂಬ ವಿಷಯದ ಮೇಲೆ ಆನಂದದಿಂದ ಧ್ಯಾನಿಸಿದರು. ಪ್ರಾರ್ಥನೆ, ಸೇವೆಗಳು, ಆರಾಧನೆ, ಬೈಬಲ್ ಕ್ವಿಜ್, ನಾಟಕಗಳು ಹಾಗೂ ಪವಿತ್ರ ಬಲಿಪೂಜೆ ಅನೇಕ ಚಟುವಟಿಕೆಗಳು ಮಕ್ಕಳಲ್ಲಿ ಆಧ್ಯಾತ್ಮಿಕತೆಯನ್ನು ಬಲಪಡಿಸಿತು. ಧರ್ಮಾಧ್ಯಕ್ಷರು ಕುಟುಂಬ ಪ್ರಾರ್ಥನೆಯ ಮಹತ್ವವನ್ನು ನೆನಪಿಸಿ ಮಕ್ಕಳನ್ನು ತಮ್ಮ ಮನೆಯಲ್ಲಿಯೇ ಕುಟುಂಬ ಜಪವನ್ನು ಕುಟುಂಬದ ಸದಸ್ಯರು ಒಟ್ಟಾಗಿ ಸೇರಿ ಸುವಾರ್ತೆ ಸಾರುವ ಸುವಾರ್ತಕರಾಗಬಹುದೆಂದು ಪ್ರೇರೇಪಿಸಿದರು.



**ಯುವಜನರ ಜ್ಯೂಬಿಲಿ:** ಜನವರಿ 24 ರಿಂದ 26, 2025 ರವರೆಗೆ ಬೀದರಿನ ಸೈಂಟ್ ಜೋಸೆಫ್ ಪಿಯು ಕಾಲೇಜಿನಲ್ಲಿ ಧರ್ಮಕ್ಷೇತ್ರದ ಯುವಜನರ ಸಮಾವೇಶ ನಡೆಯಿತು. "ಭರವಸೆಯ ಯಾತ್ರಿಕರು–ನಮ್ಮ ಯುವ ಜನರು" ಎಂಬ ಧ್ಯೇಯವಾಕ್ಯದೊಂದಿಗೆ 228 ಯುವಕರು ಮೂರು ದಿನಗಳ ಕಾಲವಿಶ್ವಾಸ, ಪ್ರಾರ್ಥನೆ ಮತ್ತು ಸ್ನೇಹದ ಪಯಣ ನಡೆಸಿದರು. ಜೀವನ ಸಾಕ್ಷಿ, ವಿಶ್ವಾಸದ ಸಾಕ್ಷಿಗಳ ಹಂಚಿಕೆ, ಚರ್ಚೆಗಳು, ಆಳವಾದ ಉಪನ್ಯಾಸಗಳು, ಆರಾಧನೆ, ಪಶ್ಚಾತ್ತಾಪ ಹಾಗೂ ಪವಿತ್ರ ಬಲಿಪೂಜೆಗಳು ಅವರ ಆತ್ಮವನ್ನು ನವೀಕರಿಸಿದವು. ಈ ಸಮಾವೇಶವು ಯುವಕರಲ್ಲಿ ಧರ್ಮಸಭೆಗೆ ಸೇರಿದ ಭಾವನೆ ಮತ್ತು ಭರವಸೆಯ ಜವಾಬ್ದಾರಿಯ ಅರಿವನ್ನು ಹೆಚ್ಚಿಸಿತು.



**ಮಹಿಳೆಯರ ಜ್ಯೂಬಿಲಿ:** ಮಹಿಳಾ ಆಯೋಗ ಕಾರ್ಯದರ್ಶಿಯಾಗಿರುವ ಸಿಸ್ಟರ್ ಮರಿಯು ರಿತಾ, ಧರ್ಮಕ್ಷೇತ್ರದ ಪಾಲನಾ ಯೋಜನೆಯಂತೆ ಮಹಿಳೆಯರನ್ನು ಒಗ್ಗೂಡಿಸಿ ಜ್ಯೂಬಿಲಿಯ ನಾಲ್ಕು ಮಹಾಸಮಾವೇಶವನ್ನು ಆಯೋಜಿಸಿದರು. ಮಾರ್ಚ್ 16 ರಂದು ಬೀದರ್ ಜಿಲ್ಲೆಯ ಮಹಿಳೆಯರಿಗೆ ಸಂತ ಜೋಸೆಫ್ ಶಾಲಾ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸಿ. ಕ್ರಿಸ್ತಿನ್ ಎಸ್.ಸಿ.ಬಿ, ಡಾ ಜೋಯ್ಸ್ ಮತ್ತು ಶ್ರೀಮತಿ ಸವಿತಾ ಸಂಪನ್ಮೂಲ ವ್ಯಕ್ತಿಗಳಾಗಿ ಬಂದು ಭಾಗವಹಿಸಿದ 500 ಮಹಿಳೆಯರನ್ನು ಉದೇಶಿಸಿ ಮಾತನಾಡಿದರು. ಮಾರ್ಚ್ 23, 2025 ರಂದು ಗುಲ್ಬರ್ಗಾದ ದೈವಾನುಗೃಹ ಮಾತೆ ಮಹಾದೇವಾಲಯ, ಕಲಬುರಗಿಯಲ್ಲಿ ಭವ್ಯವಾಗಿ ಆಚರಿಸಲಾಯಿತು. ಸುಮಾರು 90 ಮಹಿಳೆಯರು ಸೇರಿಕೊಂಡು "ಭರವಸೆಯ ಯಾತ್ರಿಕರಾಗಿರುವ ಮಹಿಳೆಯರು" ಎಂಬ ವಿಷಯದ ಬಗ್ಗೆ ಆಳವಾಗಿ ಆಲೋಚಿಸಿದರು. ಪವಿತ್ರ ಬಲಿಪೂಜೆ, ಬೈಬಲ್ ದೃಶ್ಯಗಳ ನಾಟಕೀಕರಣ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಪ್ರೇರಣಾದಾಯಕ ಉಪನ್ಯಾಸಗಳಿಂದ ದಿನ ಪಾವನತೆಯಿಂದ ಕಳೆಯಿತು. ಆಗಸ್ಟ್‌ನಲ್ಲಿ 11ರಂದು ಆಯೋಜಿಸಲಾದ ಮಹಿಳಾ ಆಧ್ಯಾತ್ಮಿಕ ಧ್ಯಾನಕೂಟದಲ್ಲಿ "ಪವಿತ್ರ ಪುಸ್ತಕದಲ್ಲಿ ಮಹಿಳೆಯರು" ಹಾಗೂ "ಧರ್ಮಸಭೆಯಲ್ಲಿ ಮಹಿಳೆಯರು" ಎಂಬ ವಿಷಯಗಳ ಮೇಲೆ ಧ್ಯಾನ–ಪ್ರಾರ್ಥನೆ, ಪಶ್ಚಾತ್ತಾಪ ಮತ್ತು ಆಧ್ಯಾತ್ಮಿಕ ಪುನಶ್ಚೇತನ ನಡೆಯಿತು. ಇದು ಮಹಿಳೆಯರಲ್ಲಿ ಚೈತನ್ಯ, ದೃಢತೆ ಹಾಗೂ ಭರವಸೆಯ ಬದುಕಿನತ್ತ ಹೊಸ ಬಲದಂತಿತ್ತು. ಆಗಸ್ಟ್ 23ರಂದು ಬೀದರ್‌ನ ಸೇಕ್ರೆಡ್ ಹಾರ್ಟ್ ದೇವಾಲಯದಲ್ಲಿ "ಆರೋಗ್ಯ ಮತ್ತು ಮಹಿಳೆಯರು" ವೆಂಬ ವಿಷಯದ ಮೇಲೆ ಕಾರ್ಯಾಗಾರ ಆಯೋಜಿಸಲಾಗಿತ್ತು. ಡಾ. ಸೋನಿ ಮಹಿಳೆಯರಿಗೆ ಆರೋಗ್ಯ, ಆಹಾರ, ನ್ಯಾಯದ ಬಗ್ಗೆ ಮಾಹಿತಿಯನ್ನು ನೀಡಿದರು.



**ಕಿರು ಕ್ರೈಸ್ತ ಸಮುದಾಯಗಳ (BEC) ಜ್ಯೂಬಿಲಿ:** ಧರ್ಮಕ್ಷೇತ್ರದ ಯೋಜನೆಯಂತೆ ಕಿರುಕ್ರೈಸ್ತ ಸಭೆ ಆಯೋಗವು ಮೂರು ಜ್ಯೂಬಿಲಿ ಕಾರ್ಯಕ್ರಮಗಳನ್ನು ಮಾಡಿ ಭಕ್ತಜನರನ್ನು ವಿಶ್ವಾಸದಲ್ಲಿ ಬೆಳೆಯುವಂತೆ ಮಾಡಿದೆ. ಜುಲೈ 6ರಂದು ಬೀದರಿ ಜಿಲ್ಲೆಯ ಸಂತ ಜೋಸೆಫ್ ಶಾಲಾ ಸಭಾಂಗಣದಲ್ಲಿ ಬೀದರ್ ಮತ್ತು ಔರದ ವಲಯಗಳ ಭಕ್ತಜನರ ಸಹಭಾಗಿತ್ವದಲ್ಲಿ ನಡೆಯಿತು. ಜುಲೈ 20, 2025 ರಂದು ಭಾಲ್ಕಿಯ ಬಾಲಯೇಸುವಿನ ಪುಣ್ಯಕ್ಷೇತ್ರ ಭಾಲ್ಕಿಯಲ್ಲಿ, ಹುಮನಾಬಾದ್ ಮತ್ತು ಬಸವಕಲ್ಯಾಣ ವಲಯಗಳ ಭಕ್ತ ಜನರೊಂದಿಗೆ ಜ್ಯೂಬಿಲಿಯನ್ನು ಆಚರಣೆ ನಡೆಯಿತು. 350 ಕ್ಕೂ ಹೆಚ್ಚು ಜನರು ಭಾಗವಹಿಸಿ ಬೈಬಲ್ ಪಠಣ, ಸಾಂಸ್ಕೃತಿಕ ನೃತ್ಯಗಳು, ಪ್ರಾರ್ಥನೆ ಮತ್ತು ಪೂಜ್ಯ ರಾಬರ್ಟ್ ಮಿರಾಂದ ಅವರ ನೇತೃತ್ವದ ಪವಿತ್ರ ಬಲಿಪೂಜೆಯಲ್ಲಿ ಪಾಲ್ಗೊಂಡರು. ಇದು ಕ್ರೈಸ್ತ ಸಮುದಾಯಗಳನ್ನು ಇನ್ನಷ್ಟು ಒಗ್ಗೂಡಿಸಿತು. ಕಲಬುರಗಿ ಭಕ್ತ ಜನರಿಗಾಗಿ ಸೆಪ್ಟೆಂಬರ್ 21ರಂದು ಕಿರು ಕ್ರೈಸ್ತ ಸಮುದಾಯದ ಜ್ಯೂಬಿಲಿಯನ್ನು ಕಲಬುರಗಿಯ ದೈವಾನುಗ್ರಹ ಮಾತೆ ದೇವಾಲಯದಲ್ಲಿ ನಡೆಯಿತು. ಈ ಎಲ್ಲಾ ಕಾರ್ಯಕ್ರಮದಲ್ಲಿ ಪ್ರಾಂತೀಯ ಕಾರ್ಯದರ್ಶಿ ಫಾ. ಮ್ಯಾಕ್ಸಿಂ ಡಯಾಸ್ ಅವರು "ಕಿರು ಕ್ರೈಸ್ತ ಸಭೆಯು ಬಲವಾದ ಹಾಗೂ ಶಾಶ್ವತ ಧರ್ಮಸಭೆಯ ಅಡಿಪಾಯವಾಗಿವೆ" ಎಂದು ಸ್ಮರಿಸಿದರು.

**ಶ್ರೀಸಾಮಾನ್ಯರ ಜ್ಯೂಬಿಲಿ:** ಜ್ಯೂಬಿಲಿ ವರ್ಷ 2025ರ ಸಿದ್ಧತೆಯ ಅಂಗವಾಗಿ, ಗುಲ್ಬರ್ಗಾ ಧರ್ಮಕ್ಷೇತ್ರವು ಆಗಸ್ಟ್ 2, 2025 ಶನಿವಾರ, ಬೀದರಿನ ಸಂತ ಜೋಸೆಫ್ ಕನ್ವೆನ್ಷನ್ ಸಭಾಂಗಣದಲ್ಲಿ ಒಂದು ದಿನದ ಶ್ರೀಸಾಮಾನ್ಯರ ಸಮಾವೇಶವನ್ನು ಆಯೋಜಿಸಲಾಯಿತು. "ಜೊತೆ ಜೊತೆಯಾಗಿ ಸೇರೋಣ, ಧರ್ಮಸಭೆಯನ್ನು ಬೆಳೆಸೋಣ" ಎಂಬ ಧ್ಯೇಯ ವಾಕ್ಯದಡಿ ನಡೆದ ಈ ಸಮಾರಂಭದಲ್ಲಿ ಧರ್ಮಕ್ಷೇತ್ರದ ಎಲ್ಲಾ ಕೇಂದ್ರ ಪಾಲನಾ ಪರಿಷದ್ ಸಭೆಯ ಸದಸ್ಯರು, ಗುರುಗಳು ಮತ್ತು



ಧಾರ್ಮಿಕ ಸಹೋದರಿಯರು ಭಾಗವಹಿಸಿದರು. ಕಾರ್ಯಕ್ರಮವನ್ನು ಗೌರವಾನ್ವಿತ ಪೂಜ್ಯ ರಾಬರ್ಟ್ ಮಿರಾಂದರವರು ಉದ್ಘಾಟಿಸಿದರು. ತಮ್ಮ ಭಾಷಣದಲ್ಲಿ ಅವರು ಶ್ರೀಸಾಮಾನ್ಯರ ಪಾತ್ರವನ್ನು ಒತ್ತಿಹೇಳುತ್ತಾ, ಧರ್ಮಕೇಂದ್ರದ ಜೀವನದಲ್ಲಿ ಅವರು ಹೊಣೆಗಾರಿಕೆಯಿಂದ ನಾಯಕತ್ವ ವಹಿಸಿ, ಸುವಾರ್ತೆ ಸಾರುವ ಉತ್ಸಾಹದೊಂದಿಗೆ ಸೇವೆ ಸಲ್ಲಿಸಬೇಕು ಎಂದು ಪ್ರೋತ್ಸಾಹಿಸಿದರು. ಫಾ. ಸಂತೋಷ ಬಾಪು (ಶ್ರೇಷ್ಠ ಗುರುಗಳು), ಫಾ.ಅನಿಲ್ ಪ್ರಸಾದ್ (ಪ್ರಾಂತೀಯ ಸಂಯೋಜಕರು), ಫಾ. ರಿಚರ್ಡ್ ಮಿನೆಜಸ್ (ಸಂಪನ್ಮೂಲ ವ್ಯಕ್ತಿ), ಡಾ॥ ಇಜಾಬೆಲ್ಲ ಕ್ಷೇವಿಯರ್, (ಸಂಪನ್ಮೂಲ ವ್ಯಕ್ತಿ), ಫಾ. ಕ್ಲಾರಿ ಡಿಸೋಜಾ, ಫಾ. ಲಾರೆನ್ಸ್ ಅರುಣ್, ಶ್ರೀ ಸುರೇಶ್ ದೊಡ್ಡಿ (ಕ್ಯಾಥೋಲಿಕ್ ಅಸೋಸಿಯೇಷನ್ ಅಧ್ಯಕ್ಷರು) ಹಾಗೂ ಶ್ರೀಸಮಾನ್ಯರ ಮುಖಂಡರಾದ ಶ್ರೀ ಸುಧೀರ್ ಮತ್ತು ಶ್ರೀಮತಿ ಬೆನಿಷಾ ಉಪಸ್ಥಿತರಿದ್ದರು. ಫಾ. ರಿಚರ್ಡ್ ಮಿನೆಜಸ್ ಅವರು ತಮ್ಮ ಅಧಿವೇಶನದಲ್ಲಿ ದೇಹಾತ್ಮಕ ಮತ್ತು ಆಧ್ಯಾತ್ಮಿಕ ಕರುಣಾ ಕೃತ್ಯಗಳ ಮೂಲಕ ಧರ್ಮಸಭೆಯಲ್ಲಿ ಸೇವೆಯ ಮಹತ್ವವನ್ನು ವಿವರಿಸಿದರು. ಅವರು ಪ್ರತಿಯೊಬ್ಬರಿಗೂ "ನಾನು ಧರ್ಮಸಭೆಗಾಗಿ ಏನು ಮಾಡಬಹುದು?" ಎಂಬ ಪ್ರಶ್ನೆಯನ್ನು ಮನನ ಮಾಡುವಂತೆ ಆಹ್ವಾನಿಸಿದರು.




**ಸಂಪರ್ಕ ಮಾಧ್ಯಮದ ಜ್ಯೂಬಿಲಿ:** ನಮ್ಮ ಅಂದಿನ ಜಗದ್ಗುರುಗಳಾದ ಪೋಪ್ ಪ್ರಾನ್ಸಿಸ್ ಜ್ಯೂಬಿಲಿ ವರ್ಷವನ್ನು ಅರ್ಥಭರಿತವಾಗಿ ಆಚರಿಸುವುದಕ್ಕಾಗಿ 2023ನೇ ವರ್ಷವನ್ನು ಸಿದ್ಧತೆಯ ವರ್ಷವನ್ನಾಗಿ ಘೋಷಿಸಿದರು. ಎರಡನೇಯ ವ್ಯಾಟಿಕನ್ ಮಹಾ ಸಮ್ಮೇಳನದ ಅಧಿಕೃತ ಪುಸ್ತಕಗಳನ್ನು ಧ್ಯಾನಿಸಲು ಕರೆ ನೀಡಿದ್ದರು. ಅವರ ಅಮಂತ್ರಣಕ್ಕೆ ಓಗೊಟ್ಟು ಸಂಪರ್ಕ ಮಾಧ್ಯಮದಿಂದ ಗುರುಗಳೊಂದಿಗೆ ಸಂದರ್ಶನ ಮಾಡಿ ಕಲಿಕಾ ವರ್ಷವನ್ನು ಅರ್ಥಭರಿತವನ್ನಾಗಿ ಆಚರಿಸಲಾಯಿತು. ಮಾತ್ರವಲ್ಲದೆ ಪ್ರತಿದಿನ ಬೈಬಲ್ ಚಿತ್ರಣ ಪೋಸ್ಟರ್ಸ್ ವಿಶ್ವಾಸದ ಬೆಳವಣಿಗೆಯಲ್ಲಿ ಪಾತ್ರವಹಿಸಿದರು. ಫಾ. ರೋಶನ್ ಡಿ'ಸೋಜಾ ಪ್ರೇಮವಾಣಿ ಸಂಪರ್ಕ ಮಾಧ್ಯಮದ ವತಿಯಿಂದ ಪರಿಸರದ ಮಹತ್ವವನ್ನು ವ್ಯಕ್ತಡಿಸುವ "ಹಸಿರು ಜ್ಯೂಬಿಲಿ ಕ್ವಿಜ್" ಆಯೋಜಸಿದರು. ಮಕ್ಕಳು, ಯುವಜನರು, ಭಕ್ತಜರು ಭಾಗವಹಿಸಿದರು. ಈ ಕ್ವಿಜ್ ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವವನ್ನು ಜೊತೆಗೆ ವಿಶ್ವಾಸದ ಬುನಾದಿಗಳನ್ನು ಗಟ್ಟಿಗೊಳಿಸಿತು.

**ಲೌದತೊ ಸಿ ಜ್ಯೂಬಿಲಿ (ಪರಿಸರ ಸಂಭ್ರಮ)**




ಜ್ಯೂಬಿಲಿ ವರ್ಷದ ಅಂಗವಾಗಿ ಲೌದಾತೊ ಸಿ ಪರಿಸರ ದಿನಾಚರಣೆಯನ್ನು ಜುಲೈ 5–11, 2025 ತನಕ ನೆಡುವುದರ ಪರಿಸರ ಸ್ವಚ್ಛತೆ ಮಾಡುವ ಮೂಲಕ ಅದ್ದೂರಿಯಾಗಿ ನಡೆಸಲಾಯಿತು. ಭೂಮಿಯ ಸಂರಕ್ಷಣೆಯ ಸಂಕೇತವಾಗಿ ವಿವಿಧ ಧರ್ಮಕೇಂದ್ರಗಳಲ್ಲಿ ಗಿಡಗಳನ್ನು ನೆಡುವ ಕಾರ್ಯವನ್ನು ನಡೆಸಲಾಯಿತು. ಮಕ್ಕಳು, ಯುವಕರು, ಮಹಿಳೆಯರು, ಧಾರ್ಮಿಕ ಸಹೋದರ ಸಹೋದರಿಯರು, ಭಕ್ತಜನರು ಸೇರಿಕೊಂಡು ಹಸಿರನ್ನು ಬೆಳೆಯುವ ಕಾರ್ಯದಲ್ಲಿ ಭಾಗವಹಿಸಿದರು. ಈ ಮೂಲಕ ಧರ್ಮಕ್ಷೇತ್ರವು ಪರಿಸರದತ್ತ ತನ್ನ ಜವಾಬ್ದಾರಿಯನ್ನು ವ್ಯಕ್ತಪಡಿಸಿದರು. ಫಾ. ರೋಶನ್ ಡಿ'ಸೋಜಾ ಪ್ರೇಮವಾಣಿ ಸಂಪರ್ಕ ಮಾಧ್ಯಮದ ವತಿಯಿಂದ ಪರಿಸರದ ಮಹತ್ವವನ್ನು ವ್ಯಕ್ತಡಿಸುವ "ಹಸಿರು ಜ್ಯೂಬಿಲಿ ಕ್ವಿಜ್" ಆಯೋಜಸಿದರು. ಮಕ್ಕಳು, ಯುವಜನರು, ಭಕ್ತಜನರು ಭಾಗವಹಿಸಿದರು. ಈ ಕ್ವಿಜ್ ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವದ ಜೊತೆಗೆ ವಿಶ್ವಾಸದ ಬುನಾದಿಯನ್ನು ಭದ್ರಗೊಳಿಸಿತು.

**2025 ರಂದು 2025 ಗಿಡಗಳು**

| ಧರ್ಮಕೇಂದ್ರ / ಸಂಸ್ಥೆಯ ಹೆಸರು | ಸ್ಥಳ | ಮಾದರಿಗಳ ಸಂಖ್ಯೆ |
|---|---|---|
| ದೈವಾನುಗ್ರಮಾತೆ ಮಹಾದೇವಾಲಯ | ಗುಲ್ಬರ್ಗಾ | 5 |
| ಸೈಂಟ್ ಮೇರಿ ಶಾಲೆ, ಕೊಟ್ನೂರು | ಗುಲ್ಬರ್ಗಾ | 100 |
| ಪವಿತ್ರ ಹೃದಯ ಕಿರುಗುರು ಮಠ | ಸಿನ್ನೂರ್ | 15 |
| ಡಾನ್ ಬಾಸ್ಕೋ ಸಂಸ್ಥೆಗಳು | ಗುಲ್ಬರ್ಗಾ | 50 |
| ಮದರ್ ತೆರೆಸಾ ಆಸ್ಪತ್ರೆ | ಗುಲ್ಬರ್ಗಾ | 15 |
| ಲೊಯೊಲಾ ಸದನ ಸಂಸ್ಥೆಗಳು | ಗುಲ್ಬರ್ಗಾ | 100 |
| ಸೈಂಟ್ ಜೋಸೆಫ್ ಸಂಸ್ಥೆಗಳು | ಗುಲ್ಬರ್ಗಾ | 4 |
| ಸೈಂಟ್ ಥಾಮಸ್ ಶಾಲೆ ಮತ್ತು ದೇವಾಲಯ | ಶಹಾಬಾದ್ | 250 |
| ಮೌಂಟ್ ಕಾರ್ಮೆಲ್ ಶಾಲೆ | ಶಹಾಬಾದ್ | 50 |
| ಸೈಂಟ್ ಆನ್ಸ್ ಚರ್ಚ್ | ವಾಡಿ | 38 |
| ಮರಿ ಪಾವಡ ಮಾತೆ ದೇವಾಲಯ | ಇಟಗಾ | 15 |
| ಆಶ್ರಯ ಮಾತೆ ಕಾನ್ವೆಂಟ್ | ಇಟಗಾ | 15 |
| ಕ್ರಿಸ್ತಗಿರಿ ಆಶ್ರಮ | ಕಮಲಾಪುರ | 50 |
| ಪವಿತ್ರ ಕುಟುಂಬ ದೇವಾಲಯ | ಕಮಲ್‌ನಗರ್ | 79 |
| ಸೈಂಟ್ ಪೌಲ್ ದೇವಾಲಯ | ಏಕಂಬಾ | 30 |
| ಸೈಂಟ್ ಮೇರಿ ಶಾಲೆ | ಆಳಂದ | 135 |
| ದಿವೈನ್ ಮರ್ಸಿ ಮಿಷನ್ (ಹೊಲಿ ಕ್ರಾಸ್) | ಅಫ್ಜಳ್‌ಪುರ್ | 80 |
| ಪವಿತ್ರ ರಕ್ಷಕರ ದೇವಾಲಯ | ಭಾಲ್ಕಿ | 100 |
| ಮರಿಯ ನಿಲಯ ಕಾನ್ವೆಂಟ್ ಸಂಸ್ಥೆಗಳು | ಬೀದರ್ | 110 |
| ಪ್ರೇಮಾಂಜಲಿ ಕಾನ್ವೆಂಟ್ | ಉಜಿನಿ | 5 |
| ಸೈಂಟ್ ಚಾರ್ಲ್ಸ್ ಕಾನ್ವೆಂಟ್ ಮತ್ತು ಶಾಲೆ | ಹುಲ್ಸೂರ್ | 80 |
| ಸೈಂಟ್ ಆಂತೋನಿ ದೇವಾಲಯ | ಹುಲ್ಸೂರ್ | 30 |
| ಸೇಕ್ರೆಡ್ ಹಾರ್ಟ್ ಬ್ರದರ್ಸ್ | ಜೇವರ್ಗಿ | 30 |
| ಸೈಂಟ್ ಆನ್ಸ್ ದೇವಾಲಯ | ವಿಜಯಪುರ | 150 |
| ಶ್ರಮಿಕ ಸಂತ ಜೋಸೆಫ್ ದೇವಾಲಯ | ಮುಚ್ಚಳಾಂಬ | 25 |
| ಹೋಲಿ ಕ್ರಾಸ್ ದೇವಾಲಯ | ಸಂತಪುರ | 21 |
| ಮರಿ ಕೃಪಾ ಕಾನ್ವೆಂಟ್ ಮತ್ತು ಸಂಸ್ಥೆಗಳು | ಸಂತಪುರ | 45 |
| ಯೂಫ್ರೇಸಿಯಾ ನಿಲಯ | ಸಂತಪುರ | 60 |
| ಯೂಫ್ರೇಸಿಯಾ ನಿಲಯ | ದುಪದ್ಮಹಾಗಾಂವ್ | 10 |
| ಸೈಂಟ್ ಲಾರೆನ್ಸ್ ದೇವಾಲಯ | ತಾಳ್ಮಮಡಿಗಿ | 18 |
| ಮರಿ ನಿಕೇತನ್ ಕಾನ್ವೆಂಟ್ ಮತ್ತು ಶಾಲೆ | ತಾಳ್ಮಮಡಿಗಿ | 80 |
| ಪವಿತ್ರ ಹೃದಯ ಮಿಷನ್ | ತಾಳಿಕೋಟೆ | 75 |
| ಸೈಂಟ್ ಫ್ರಾನ್ಸಿಸ್ ಕ್ಷೇವಿಯರ್ ದೇವಾಲಯ | ಸೇಡಂ | 5 |
| ಪ್ರತ್ಯಾಶಾ ಕಾನ್ವೆಂಟ್ ಮತ್ತು ಸಂಸ್ಥೆಗಳು | ಚಿಂಚೋಳಿ | 70 |
| ಆರೋಗ್ಯಮಾತಾ ದೇವಾಲಯ | ಜಲಸಂಗಿ | 80 |
| ಒಟ್ಟು ಮಾದರಿಗಳ ಸಂಖ್ಯೆ: | | **2025** |




**ಕೀರ್ತನೆ 40:1 – "ನಾನು ಕರ್ತನಿಗಾಗಿ ಕಾಯುತ್ತಿದ್ದೆನು; ಆತನು ನನ್ನ ಪ್ರಾರ್ಥನೆ ಕೇಳಿದನು."**





ಫಾ. ಆರೋನ್ ವಾಸ್

# ಕಥೋಲಿಕ ದೈವಾರಾಧನೆಯಲ್ಲಿ ಹಬ್ಬಗಳ ಆಚರಣೆ

ಹಬ್ಬಗಳು ಪ್ರತಿಯೊಂದು ಧರ್ಮ ಮತ್ತು ಸಂಸ್ಕೃತಿಯ ಸಹಜವಾದ ಅಂಗವಾಗಿವೆ, ಏಕೆಂದರೆ ಮಾನವನು ದೇವರು ತನಗೆ ನೀಡಿರುವ ಜೀವನ, ಪ್ರಕೃತಿಯ ವರದಾನ ಮತ್ತು ದೇವರ ಆಶೀರ್ವಾದಗಳನ್ನು ಆಚರಿಸಲು ಬಯಸುತ್ತಾನೆ. ಆತನ ದೈನಂದಿನ ಜೀವನವು ಕಷ್ಟ ದುಖಃ ಮತ್ತು ಸೋಲು ಗೆಲುವಿನ ಹೋರಾಟಗಳಿಂದ ಕೂಡಿರುತ್ತದೆಯಾದರೂ ಹಬ್ಬಗಳ ಸಮಯದಲ್ಲಿ ಅತನು ತನ್ನ ದಿನನಿತ್ಯದ ಚಟುವಟಿಕೆಗಳಿಂದ ದೂರ ಸರಿದು, ದೇವರೊಡನೆ ಸಮಯವನ್ನು ಕಳೆಯಲು ಬಯಸುತ್ತಾನೆ. ಆದುದರಿಂದ ಹಬ್ಬಗಳು ಕೇವಲ ಆನಂದ ಮತ್ತು ವಿಶ್ರಾಂತಿಯ ವಿರಾಮವಲ್ಲ; ಅವು ಜನರು ದೇವರಲ್ಲಿ ಒಂದಾಗುವ ಕ್ಷಣಗಳಾಗಿವೆ. ಕಥೋಲಿಕ ದೈವಾರಧನೆಯಲ್ಲಿ ಆಚರಣೆಗಳು ಮಹತ್ತರವಾದ ಸ್ಥಾನವನ್ನು ಹೊಂದಿದೆ. ಇವು ನಮ್ಮನ್ನು ದೇವರಲ್ಲಿ ಒಂದಾಗಲು ಸಹಾಯ ಮಾಡುತ್ತದೆ. ಈ ಲೇಖನದಲ್ಲಿ  ಹಬ್ಬಗಳ ಪರಿಕಲ್ಪನೆ, ಅವುಗಳ ಆಚರಣೆ, ವಿಕಾಸ ಮತ್ತು ಕಥೋಲಿಕ ಧೈವಾರಧನೆಯಲ್ಲಿ ಯೇಸುವಿನ ರಕ್ಷಣಾಕಾರ್ಯದ ಸ್ಮರಣೆ ಬಗೆ ತಿಳಿದುಕೊಳ್ಳೋಣ.

**ಪವಿತ್ರ ಕಾಲ ಮತ್ತು ಪವಿತ್ರ ಸ್ಥಳ**

ಕಥೋಲಿಕ ದೈವಾರಾಧನೆಯಲ್ಲಿ ಹಬ್ಬವು ಪವಿತ್ರ ಸಮಯ (ಅಂದು ಅ ಘಟನೆಯು ಆದ ನಿರ್ಧಿಷ್ಟ ಸಮಯ) ಮತ್ತು ಪವಿತ್ರ ಸ್ಥಳ (ಅಂದು ಅ ಘಟನೆಯು ಆದ ನಿರ್ಧಿಷ್ಟ ಸ್ಥಳ)ಗಳೊಂದಿಗೆ ಸಂಪರ್ಕ ಹೊಂದಿರುತ್ತವೆ. ಆದುದರಿಂದ ಹಬ್ಬವು ನಾವು ದೇವರನ್ನು ಸ್ಪರ್ಶಿಸುವ ಸ್ಥಳ ಮತ್ತು ಸಮಯವನ್ನು ಸೂಚಿಸುತ್ತದೆ. ಉದಾಹರಣೆಗೆ, ಮೋಶೆಯವರು ಧರ್ಮಶಾಸ್ತ್ರವನ್ನು ಪಡೆದ ಸೀನಾಯ್ ಪರ್ವತ, ಯೇಸುವನ್ನು ಶಿಲುಬೆಗೆ ಜಡಿಸಲ್ಪಟ್ಟ ಹಾಗು ಪುನರತ್ಥಾನವಾದ ಸ್ಥಳ ಇತ್ಯಾದಿ.

**ಅನ್ಯ ಧರ್ಮಿಯರ (ಪೇಗನ್) ಹಬ್ಬಗಳಿಂದ ಕ್ರೈಸ್ತ ಆಚರಣೆಗಳ ಕಡೆಗೆ ಬೆಳವಣಿಗೆ**

ಅನ್ಯ ಧರ್ಮಿಯರ ಅಂದರೆ ಪೇಗನ್‌ಗಳ ಹಬ್ಬಗಳು ಯಹೂದ್ಯರ ಮೇಲೆ ಮತ್ತು ಆಮೇಲೆ ಕ್ರೈಸ್ತರ ದೈವಾರಾಧನೆಯ ಮೇಲೆ ಪ್ರಭಾವ ಬೀರಿವೆ. ಅನ್ಯ ಧರ್ಮಿಯರು ನಕ್ಷತ್ರಗಳ ಚಲನೆ, ಬೆಳೆಕೊಯ್ಯುವ ಕಾಲ, ಅಥವಾ ದುಷ್ಟಾತ್ಮಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಮಾಡುವ ಆಚರಣೆಗಳ ಆಧಾರದ ಮೇಲೆ ಹಬ್ಬಗಳನ್ನು ಆಚರಿಸುತ್ತಿದ್ದರು. ಯಹೂದ್ಯರು ಈ ಹಬ್ಬಗಳಿಗೆ ದೇವರ ಒಡಂಬಡಿಕೆಯ ಪ್ರಕಾರ ಪಾಸ್ಕಾ, ಮಂಜೂಷದ ಹಬ್ಬ ಇತ್ಯಾದಿ ಹಬ್ಬಗಳನ್ನು ಆಚರಿಸುತ್ತಿದ್ದರು. ಕ್ರೈಸ್ತಧರ್ಮದಲ್ಲಿ ಅನೇಕ ಯೆಹೂದ್ಯರ ಹಬ್ಬಗಳನ್ನು ಆಚರಿಸಲಾಯಿತು ಆದರೆ ನಮ್ಮ ನಂಬಿಕೆಯ ಕೇಂದ್ರ ಬಿಂದುವಾಗಿರುವ ಯೇಸು ಕ್ರಿಸ್ತರ ಜೀವನ, ಮರಣ ಮತ್ತು ಪುನರುತ್ಥಾನವನ್ನು ಪ್ರತಿಬಿಂಬಿಸಿ ಈ ಹಬ್ಬಗಳಿಗೆ ಹೊಸ ಅರ್ಥವನ್ನು ನೀಡಿ ಆಳಗೊಳಿಸಲಾಯಿತು.

**ಕಥೋಲಿಕ ಧರ್ಮಸಭೆಯ ಹಬ್ಬಗಳು: ಸ್ಮರಣೆ ಮತ್ತು ನವೀಕರಣ.**

ಕಥೋಲಿಕ ಧರ್ಮಸಭೆಯ ಹಬ್ಬಗಳು ಐತಿಹಾಸಿಕ ಘಟನೆಗಳನ್ನು ಮೆಲುಕು ಹಾಕಲು ಮಾತ್ರವಲ್ಲ ಬದಲಾಗಿ ಯೇಸು ಕ್ರಿಸ್ತರ ರಕ್ಷಣೆಯ ಕಾರ್ಯವನ್ನು ಪುನಃ ಕಾರ್ಯಗೃತಗೊಳಿಸುವ ಸ್ಮರಣೆಯಾಗಿದೆ. ಅಂದರೆ ಈ ಸ್ಮರಣೆಯನ್ನು ಮಾಡುವಾಗ ಯೇಸುವಿನ ರಕ್ಷಣಾ ಕಾರ್ಯವು ನಮ್ಮ ಜೀವನದಲ್ಲಿ ನವೀಕರಿಸಲಾಗುತ್ತದೆ. ಆ ಕಾರಣಕ್ಕಾಗಿ ಪ್ರತಿಯೊಂದು ಹಬ್ಬದ ಕೇಂದ್ರಬಿಂದುವು ಬಲಿಪೂಜೆಯಾಗಿರುತ್ತದೆ. ಬಲಿಪೂಜೆಯಲ್ಲಿ ಯೇಸುವಿನ ರಕ್ಷಣಾ ಕಾರ್ಯವನ್ನು ನಾವು ಸಜೀವವಾಗಿ

ಅನುಭವಿಸುತ್ತೇವೆ. ಹಾಗೆಯೇ, ಪವಿತ್ರ ತ್ರಿತ್ವದ ಹಬ್ಬದಂತಹವುಗಳು ನಿರ್ದಿಷ್ಟವಾದ ಯೇಸುವಿನ ರಕ್ಷಣಾ ಕಾರ್ಯವನ್ನು ಸ್ಮರಿಸದಿದ್ದರೂ, ನಮ್ಮ ಜೀವನದಲ್ಲಿ ಪಿತ, ಸುತ ಮತ್ತು ಪವಿತ್ರಾತ್ಮರ ರಕ್ಷಣಾ ಕಾರ್ಯವನ್ನು ನೆನಪಿಸುತ್ತವೆ.

**ಕಥೋಲಿಕ ಧರ್ಮಸಭೆಯ ಹಬ್ಬಗಳು: ಕಾಲಗಳು**

**ದೈವಾರದನೆಯ ವರ್ಷ (Liturgical Year):** ಎಲ್ಲಿ ಆಗಮನ ಕಾಲ, ಕ್ರಿಸ್‌ಮಸ್ ಹಬ್ಬ, ತಪಸ್ಸು ಕಾಲ, ಈಸ್ಟರ್ ಹಬ್ಬ ಮತ್ತು ಸಾಮಾನ್ಯ ಕಾಲ ಎಂಬ ಮುಖ್ಯ ಕಾಲಗಳನ್ನು ಆಚರಿಸುತ್ತೇವೆ. ಪ್ರತಿಯೊಂದು ಕಾಲವು ಯೇಸುಕ್ರಿಸ್ತರ ರಹಸ್ಯದ ವಿಭಿನ್ನ ಅಂಶವನ್ನು ಬಿಚ್ಚಿಡುತ್ತದೆ. ಈ ಕಾಲದಲ್ಲಿ, ಈಸ್ಟರ್ ಹಬ್ಬವು ವರ್ಷದಲ್ಲಿಯೇ ಕೇಂದ್ರ ಹಬ್ಬವಾಗಿದೆ.

**ಕಾಲ ವಿವರಣೆ ಬಣ್ಣ  ಅವಧಿ ಮುಖ್ಯ ಹಬ್ಬಗಳು / ಸ್ಮರಣೆಗಳು**

**ಆಗಮನ ಕಾಲ**

(Advent) ಯೇಸುವಿನ ಆಗಮನದ ನಿರೀಕ್ಷೆ ಮತ್ತು ಸಿದ್ಧತೆ  ನೇರಳೆ (Purple)  ಗುಲಾಬಿ (Pink)  4 ಭಾನುವಾರಗಳು (ಡಿಸೆಂಬರ್ 25ರ ತನಕ) ಕ್ರಿಸ್ಮಸ್ ಹಬ್ಬಕ್ಕೆ ಸಿದ್ಧತೆ

ಯೇಸುಕ್ರಿಸ್ತರ ಜಯಂತಿ (Christmas)  ಯೇಸುವಿನ ಜನನದ ಸಂಭ್ರಮ ಬಿಳಿ (White) / ಬಂಗಾರ (Gold) ಡಿಸೆಂಬರ್ 25ರಿಂದ ಯೇಸುವಿನ ದೀಕ್ಷಾಸ್ನಾನ (ಜನವರಿ 6/8) ವರೆಗೆ  ಕ್ರಿಸ್ಮಸ್, ಪವಿತ್ರ ಕುಟುಂಬ, ದೇವಮಾತೆಯ ಹಬ್ಬ (ಜನವರಿ 1), ಎಪಿಫನಿ

**ಸಾಮಾನ್ಯ ಕಾಲ– I** (Ordinary Time I) ಯೇಸು ಬೋಧನೆಗಳು ಮತ್ತು ಸಾರ್ವಜನಿಕ ಜೀವನದ ನೆನಪು ಹಸಿರು (Green) ಎಪಿಫನಿ / ದೀಕ್ಷಾಸ್ನಾನದ ನಂತರದಿಂದ ತಪಸ್ಸು ಕಾಲದ ಆರಂಭದವರೆಗೆ ಯಾವುದೇ ವಿಶೇಷ ಹಬ್ಬವಿಲ್ಲ, ಯೇಸು ಜೀವನದ ಧ್ಯಾನ ತಪಸ್ಸು ಕಾಲ (Lent) ಪಶ್ಚಾತ್ತಾಪ, ಪ್ರಾರ್ಥನೆ, ಉಪವಾಸ, ದಾನ ನೇರಳೆ (Purple) 40 ದಿನಗಳು (ವಿಭೂತಿ ಬುಧವಾರದಿಂದ) ವಿಭೂತಿ ಬುಧವಾರ, ಗರಿಗಳ ಭಾನುವಾರ ಹಾಗೂ ಪವಿತ್ರ ವಾರಕ್ಕೆ ಸಿದ್ಧತೆ ಪಾಸ್ಕಲ್ ತ್ರಿದುವುಮ್ (Triduum) ಯೇಸು ಕ್ರಿಸ್ತರ ಯಾತನೆ, ಶಿಲುಬೆ ಮರಣ ಮತ್ತು ಪುನರುತ್ಥಾನ ಕೆಂಪು (Good Friday), ಬಿಳಿ (Easter Vigil) ಪವಿತ್ರ ಗುರುವಾರ ಸಂಜೆದಿಂದ ಪಾಸ್ಕ ರಾತ್ರಿವರೆಗೆ ಯೇಸುವಿನ ಕೊನೆಯ ಬೋಜನ (Holy Thursday), ಪವಿತ್ರ ಶುಕ್ರವಾರ, ಪಾಸ್ಕಹಬ್ಬದ ಜಾಗರಣೆ ಈಸ್ಟರ್ (Easter) ಯೇಸು ಪುನರುತ್ಥಾನದ ಸಂಭ್ರಮ ಬಿಳಿ (White) / ಬಂಗಾರ (Gold) 50 ದಿನಗಳು (ಈಸ್ಟರ್ ಭಾನುವಾರದಿಂದ ಪೆಂತೆಕೊಸ್ಟ್ ತನಕ) ಈಸ್ಟರ್ ಭಾನುವಾರ, ದೈವ ಕರುಣೆ ಭಾನುವಾರ, ಆರೋಹಣ, ಪೆಂತೆಕೊಸ್ಟ್

**ಸಾಮಾನ್ಯ ಕಾಲ – II** (Ordinary Time II) ಕ್ರಿಸ್ತನ ಬೋಧನೆ ಮತ್ತು ಮಿಷನರಿಯ ಜೀವನದ ನೆನಪು ಹಸಿರು (Green) ಪೆಂತೆಕೊಸ್ಟ್ (ಪಂಚದಶಮಿ) ನಂತರದಿಂದ ಕ್ರಿಸ್ತ ರಾಜರ ಮಹೋತ್ಸವ ತನಕ, ಎಲ್ಲಾ ಸಂತರ ಹಬ್ಬ, ಇತರ ಸ್ಮರಣೆಗಳು

**ಕಥೋಲಿಕ ದೈವಾರದನೆಯ ಹಬ್ಬಗಳ ಉದ್ದೇಶ**

1. ಹಬ್ಬಗಳು ಕೇವಲ ಸಂತೋಷ ಮತ್ತು ಸಂಭ್ರಮದ ದಿನಗಳಲ್ಲ, ಅವು ನಮ್ಮ ಕ್ರೈಸ್ತ ಜೀವನವನ್ನು ನವೀಕರಿಸುವ ಸಮಯಗಳಾಗಿವೆ.
2. ಕ್ರಿಸ್ತರ ರಕ್ಷಣಾ ರಹಸ್ಯವನ್ನು ಸಜೀವಗೊಳಿಸುತ್ತವೆ.
3. ರಕ್ಷಣಾ ಇತಿಹಾಸವನ್ನು ನೆನಪಿಸುತ್ತವೆ.
4. ನಮ್ಮನ್ನು ಹೆಚ್ಚು ನಿಷ್ಠಾವಂತ ಕ್ರೈಸ್ತರಾಗಿ ಬದುಕಲು ಆಹ್ವಾನಿಸುತ್ತವೆ.
5. ದೇವರೊಂದಿಗೆ ಶಾಶ್ವತ ಜೀವನದಲ್ಲಿ ನಮ್ಮ ಅಂತಿಮ ಗುರಿಯನ್ನು ತೋರಿಸುತ್ತವೆ.



# ಸಂತ ಫ್ರಾನ್ಸಿಸ್ ಕ್ಷೇವಿಯರ್ ದೇವಾಲಯ. ಸೇಡಂ

## ಬೆಳ್ಳಿ ಮಹೋತ್ಸವದ ಸಂಭ್ರಮ



ಫಾ. ಆಂಟೋನಿ ಸೆಲ್ವಂ

ಸೇಡಂ ಪಟ್ಟಣವು ಕಲಬುರಗಿ ಜಿಲ್ಲೆಯ ಪೂರ್ವ ಭಾಗದಲ್ಲಿದ್ದು, ಕರ್ನಾಟಕದ ಪ್ರಮುಖ ಕೈಗಾರಿಕಾ ವಲಯಗಳಲ್ಲಿ ಪ್ರಮುಖ ಹೆಸರು ಮಾಡಿದೆ.ಇಲ್ಲಿ ದೊಡ್ಡ ಪ್ರಮಾಣದಲ್ಲಿ ಸಿಮೆಂಟ್ ಕಾರ್ಖಾನೆಗಳು ಸ್ಥಾಪನೆಯಾಗಿದ್ದು, ಉದ್ಯೋಗದ ಹುಡುಕಾಟದಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಹಾಗೂ ಬೇರೆ ಬೇರೆ ಊರುಗಳಿಂದ ಅನೇಕ ಕ್ರೈಸ್ತ ಕುಟುಂಬಗಳು ಸೇಡಂಗೆ ಆಗಮಿಸಿದವು. ತಮ್ಮ ಜೀವನೋಪಾಯಕ್ಕಾಗಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವಾಗ, ಇವರಿಗೆ ತಮ್ಮ ಧಾರ್ಮಿಕ ಜೀವನವನ್ನು ಉಳಿಸಿಕೊಳ್ಳುವಂತೆಯೂ, ಮಕ್ಕಳಲ್ಲಿ ಕ್ರೈಸ್ತ ಮೌಲ್ಯಗಳನ್ನು ಬೆಳೆಸುವಂತೆಯೂ ಒಂದು ಕೇಂದ್ರ ಅಗತ್ಯವಾಯಿತು.ಈ ಅಗತ್ಯತೆಯಿಂದಲೇ ಸೇಡಂನಲ್ಲಿ ಸಂತ ಫ್ರಾನ್ಸಿಸ್ ಕ್ಷೇವಿಯರ್ ದೇವಾಲಯದ ಉಗಮವಾಯಿತು.

ದೇವಾಲಯದ ನಿರ್ಮಾಣಕ್ಕಾಗಿ ಗುರುಗಳಾದ ಫಾ. ಜಯರಾಜ್ ಪಟ್ಟಿ ಅವರು ತಮ್ಮ ಶ್ರದ್ಧೆ ಮತ್ತು ಪರಿಶ್ರಮವನ್ನು ಹರಿಸಿದರು. ಸಂತ ಫ್ರಾನ್ಸಿಸ್ ಕ್ಷೇವಿಯರ್ ದೇವಾಲಯವು 2000ರ ಮಾರ್ಚ್ 1ರಂದು ಧಾರ್ಮಿಕ ಆಶೀರ್ವಾದವನ್ನು ಪಡೆದು ಅಧಿಕೃತವಾಗಿ ಪ್ರಾರಂಭವಾಯಿತು. ಅವರ ನಂತರ 2000ರ ಮೇ 15ರಂದು ಫಾ. ಹೆನ್ರಿ ಫೆರ್ನಾಂಡಿಸ್ ಧರ್ಮಕೇಂದ್ರದ ಧರ್ಮಗುರುಗಳ ಹೊಣೆ ಹೊತ್ತು, 2002ರ ಜೂನ್ 19ರಂದು ಫಾ. ಸಿಬಿ ತಡತಿಲ್ ಗುರುಗಳು ಅವರ ನಂತರ ಕಾರ್ಯಭಾರ ಸ್ವೀಕರಿಸಿದರು. ಆ ನಂತರವೂ ಅನೇಕ ಗುರುಗಳು ತಮ್ಮ ಸೇವೆಯನ್ನು ಸಲ್ಲಿಸಿದರು.

2004 ರಿಂದ 2005ರ ಫೆಬ್ರವರಿವರೆಗೆ ಫಾ. ನಾರ್ಬರ್ಟ್ ಫೆರ್ನಾಂಡಿಸ್ ಎಸ್.ಜೆ ಗುರುಗಳು ಸೇವೆ ಸಲ್ಲಿಸಿದರೆ, 2005ರ ಫೆಬ್ರವರಿಯಿಂದ 2007ರವರೆಗೆ ಫಾ. ಅಂಬ್ರೋಸ್ ಡಿ'ಸೋಜಾ ಎಸ್.ಜೆ ಗುರುಗಳು ಸೇಡಂನಲ್ಲಿ ಪಾಲನಾ ಸೇವೆಯನ್ನು ನೀಡಿದರು. ಅವರ ಕಾಲದಲ್ಲೇ 'ಹೆಲ್ಪರ್ಸ್ ಆಫ್ ಮೇರಿ' ಧರ್ಮಭಗಿನೀಯರು ಸೇಡಂ ಮಿಷನ್‌ನಲ್ಲಿ ತಮ್ಮ ಕಾರ್ಯವನ್ನು ಪ್ರಾರಂಭಿಸಿದರು. 2007ರಲ್ಲಿ ಸಹೋದರಿಯರು ಅಧಿಕೃತವಾಗಿ ಸೇಡಂ ಧರ್ಮಕೇಂದ್ರಕ್ಕೆ ಸೇರ್ಪಡೆಯಾದರು. ನಂತರ 2007ರ ಮೇ ತಿಂಗಳಿಂದ 2010ರ ಜೂನ್ ವರೆಗೆ ಫಾ. ರಿಚರ್ಡ್ ಡಿ'ಸೋಜಾ ಗುರುಗಳು ಸೇವೆ ಸಲ್ಲಿಸಿದರು.

2010ರ ಜೂನ್ ತಿಂಗಳಲ್ಲಿ ಸೇಡಂ ಮಿಷನ್‌ಗೆ ಸಂತ ಫ್ರಾನ್ಸಿಸ್ ದಿ ಸೇಲ್ಸ್ (MSFS) ಸಭೆಯ ಗುರುಗಳನ್ನು ಆಹ್ವಾನಿಸಲಾಯಿತು. ಮೊದಲ MSFS ಗುರುಗಳಾದ ಫಾ. ದೊರೈಸ್ವಾಮಿ ಅವರು 2010ರಿಂದ 2014ರವರೆಗೆ ಸುವಾರ್ತಾ ಸೇವೆ ಸಲ್ಲಿಸಿದರು. 2014ರ ಮೇ ತಿಂಗಳಲ್ಲಿ ಫಾ. ಆರೋಗ್ಯನಾಥನ್ ಗುರುಗಳು ಅಧಿಕಾರ ಸ್ವೀಕರಿಸಿದರೂ, ಅವರ ಆರೋಗ್ಯ ಸಮಸ್ಯೆಯಿಂದಾಗಿ ತಮ್ಮ ಪ್ರಾಂತ್ಯಕ್ಕೆ ಹಿಂತಿರುಗಬೇಕಾಯಿತು. ಅವರ ಸ್ಥಾನದಲ್ಲಿ 2014ರ ನವೆಂಬರ್ 15ರಂದು ಫಾ. ಆನಂದ್ ಏಕ್ಕಾ ಗುರುಗಳು ನೇಮಕಗೊಂಡರು.

2015ರ ಮೇ ತಿಂಗಳಲ್ಲಿ ಫಾ. ಬಲವೇಂದ್ರ ಧರ್ಮಕೇಂದ್ರದ ಗುರುಗಳಾಗಿ ಅಧಿಕಾರ ಸ್ವೀಕರಿಸಿದರೆ, 2018ರಲ್ಲಿ ಫಾ. ಸೆಲ್ವರಾಜ್ ಸೇಡಂ ದೇವಾಲಯದ ನಿರ್ದೇಶಕರಾಗಿ ಅಧಿಕಾರ ಸ್ವೀಕರಿಸಿ ದೇವಾಲಯವನ್ನು ನವೀಕರಿಸುವ ಮಹತ್ವದ ಕಾರ್ಯವನ್ನು ಕೈಗೊಂಡರು. ಅವರ ಪರಿಶ್ರಮದ ಫಲವಾಗಿ 2018ರ ಡಿಸೆಂಬರ್ 9ರಂದು ದೇವಾಲಯದ

ನವೀಕರಣವನ್ನು ಪೂಜ್ಯ ರಾಬರ್ಟ್ ಮಿರಾಂದಾ ಆಶೀರ್ವದಿಸಿ ಉದ್ಘಾಟಿಸಿದರು. 2020ರ ಮೇ ತಿಂಗಳಲ್ಲಿ ಫಾ. ಆರೋಗ್ಯನಾಥನ್ ಧರ್ಮಕೇಂದ್ರದ ನಿರ್ದೇಶಕರಾಗಿ ನೇಮಕಗೊಂಡರು. 2021ರ ಜೂನ್ 27ರಿಂದ ಫಾ. ಆಂಟೋನಿ ಸೆಲ್ವಂ ಪಾಲನಾ ಸೇವಾಕಾರ್ಯವನ್ನು ಕಳೆದ ಐದು ವರ್ಷಗಳಿಂದ ಭಕ್ತಿ ಬದುಕನ್ನು ಬಲಪಡಿಸುವ ವಿವಿಧ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ.

ಪ್ರಸ್ತುತ ಸೇಡಂ ದೇವಾಲಯದಲ್ಲಿ 17 ಕುಟುಂಬಗಳು ಸೇರಿಕೊಂಡಿದ್ದು, ಒಟ್ಟು 60 ಮಂದಿ ಸದಸ್ಯರು ಧಾರ್ಮಿಕ ಜೀವನದಲ್ಲಿ ಪಾಲ್ಗೊಂಡಿದ್ದಾರೆ. ಕುರಕುಂಟಾದಲ್ಲಿ ಒಂದು ಕುಟುಂಬ, ವಸವದತ್ತ ಕಾಲೊನಿಯಲ್ಲಿ ಎರಡು ಕುಟುಂಬಗಳು, ಸೇಡಂ ಪಟ್ಟಣದಲ್ಲಿ ಎರಡು, ಸಿಮೆಂಟ್ ಕಾರ್ಖಾನೆಯ ಬಳಿ ಎರಡು, ಕೋಡ್ಲಾದಲ್ಲಿ ಎರಡು ಹಾಗೂ ಮಳಖೇಡಿನಲ್ಲಿ ಹತ್ತು ಕುಟುಂಬಗಳು ಸೇರಿವೆ. ಇವುಗಳ ಮೂಲಕ ಸೇಡಂ ದೇವಾಲಯವು ಸಣ್ಣ ಸಮುದಾಯವಾದರೂ ಬಲಿಷ್ಠವಾದ ವಿಶ್ವಾಸದ ಕುಟುಂಬವಾಗಿ ಬೆಳೆದಿದೆ. ದೇವಾಲಯದಲ್ಲಿ ಕಿರು ಕ್ರೈಸ್ತ ಸಮುದಾಯ, ಸುವಾರ್ತೆ ಸಾರುವ ಚಿಣ್ಣರ ಸಭೆ (MCA), ಮಹಿಳಾ ಅಯೋಗದ ಗುಂಪುಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ.

**ಧರ್ಮಕೇಂದ್ರದಲ್ಲಿ ಧರ್ಮಭಗಿನೀಯರು**

ಪ್ರತೀ ಧರ್ಮಕೇಂದ್ರದಲ್ಲಿ ಧರ್ಮಭಗಿನಿಯರ ಅಸ್ತಿತ್ವ ಧರ್ಮಕೇಂದ್ರದ ವಿಶ್ವಾಸ ಬೆಳವಣಿಗೆಯಲ್ಲಿ, ಪ್ರಮುಖ ಪಾತ್ರ ವಹಿಸುತ್ತದೆ. ಆದುದರಿಂದ 2006ರ ಮೇ 25ರಂದು, ಪೂಜ್ಯ ರಾರ್ಬಟ್ ಮಿರಾಂದಾರವರು ದೇವಾಲಯದ ಗುರುಗಳಾದ ಫಾ. ಅಂಬ್ರೋಸ್ ಅವರ ಮುಂದಾಳತ್ವದಲ್ಲಿ 'ಹೆಲ್ಪರ್ಸ್ ಆಫ್ ಮೇರಿ' ಸಹೋದರಿಯರನ್ನು ಮಿಷನ್ ಸೇವೆಗೆ ಆಹ್ವಾನಿಸಿದರು. ಸಹೋದರಿಯರಾದ ಸಿಸ್ಟರ್ ಆಶಾ ಮತ್ತು ಸಿಸ್ಟರ್ ಸೀಮಾ ಅವರು 2006ರ ಸೆಪ್ಟೆಂಬರ್ 11ರಂದು ಸೇಡಂಗೆ ಮೊದಲ ಬಾರಿಗೆ ಭೇಟಿ ನೀಡಿ, ವಿವಿಧ ಹಳ್ಳಿಗಳನ್ನು ಸಂಚರಿಸಿ ಜನರ ಪರಿಸ್ಥಿತಿಯನ್ನು ಹಾಗೂ ಸಮಸ್ಯೆಗಳನ್ನು ಅರ್ಥಮಾಡಿಕೊಂಡರು. 2007ರ ಮೇ 14ರಂದು ಸಭೆಯ ಪ್ರೋವಿನ್ಸಿಯಲ್ ಸಿಸ್ಟರ್ ಇಂದುಮತಿ, ಸಿಸ್ಟರ್ ಶೋಭನಾ ಹಾಗೂ ಹೊಸದಾಗಿ ನೇಮಕಗೊಂಡ ಸೇಡಂ ಸಮುದಾಯದ ಮೇಲ್ವಿಚಾರಕಿ ಸಿಸ್ಟರ್ ಫಿಲೋಮೇನಾ ಸೇಡಂಗೆ ಭೇಟಿ ನೀಡಿ ಸಮುದಾಯವನ್ನು ಆರಂಭಿಸಲು ನಿರ್ಧರಿಸಿದರು.

2007ರ ಜುಲೈ 28ರಂದು, 'ಹೆಲ್ಪರ್ಸ್ ಆಫ್ ಮೇರಿ' ಸಹೋದರಿಯರಿಗಾಗಿ ಸೇಡಂ ಇತಿಹಾಸದ ಚಿನ್ನದ ಅಕ್ಷರದ ದಿನವೆನಿಸಿತು. ಆ ದಿನ ಸಿಸ್ಟರ್ ಲೀಲಾ, ಸಿಸ್ಟರ್ ಫಿಲೋ, ಸಿಸ್ಟರ್ ಸಂಧ್ಯಾ ಮತ್ತು ಸಿಸ್ಟರ್ ನ್ಯಾನ್ಸಿ ಸೇಡಂಗೆ ಬಂದು ತಮ್ಮ ಸುವಾರ್ತಾ ಸೇವೆಯನ್ನು ಪ್ರಾರಂಭಿಸಿದರು.ಜುಲೈ 31ರಂದು, ಸಂಸ್ಥಾಪಕಿ ಮದರ್ ಅಣ್ಣಾಹ್ಯುಬೆರ್ಟಾ ಅವರ ಜನ್ಮ ದಿನದಂದು, ಧರ್ಮಾಧ್ಯಕ್ಷರಾದ ಪೂಜ್ಯ ರಾಬರ್ಟ್ ಮಿರಾಂದಾ ಅವರು ಪವಿತ್ರ ಬಲಿಪೂಜೆಯನ್ನು ಅರ್ಪಿಸಿ ಮದರ್ಅಣ್ಣಾ ಅವರ ತ್ಯಾಗಮಯ ಜೀವನವನ್ನು ನೆನೆದು ಸಹೋದರಿಯರ ಕಾರ್ಯಚಟುವಟಿಕೆಗೆ ಪ್ರೇರಣೆ ನೀಡಿದರು. ಆರಂಭದಲ್ಲಿ ಸಹೋದರಿಯರು ಸೇಡಂ ದೇವಾಲಯದ ಗುರುಗಳ ನಿವಾಸದಲ್ಲಿ ಹಾಗೂ ನಂತರ ಬಾಡಿಗೆ ಮನೆಯಲ್ಲಿ ವಾಸವಿದ್ದು, ತಮ್ಮ ಸೇವೆಯನ್ನು ಮುಂದುವರೆಸಿದರು. 2013ರ ಏಪ್ರಿಲ್ 21ರಂದು ಹೊಸ ಕಾನ್ವೆಂಟ್ ಕಟ್ಟಡವನ್ನು ಪೂಜ್ಯ ರಾಬರ್ಟ್ ಮಿರಾಂದಾರವರು ಆಶೀರ್ವದಿಸಿ, ಸಿಸ್ಟರ್ ಲೀಲಾರವರು ಉದ್ಘಾಟಿಸಿದರು.

ಈ ರೀತಿಯಾಗಿ, ಸೇಡಂ ಪಟ್ಟಣವು ಕೈಗಾರಿಕಾ ಕೇಂದ್ರವಾಗಿದ್ದರೂ, ವಿಶ್ವಾಸ ಜೀವನವನ್ನು ಬೆಳೆಸಲು ಹಾಗೂ ಬಲಪಡಿಸಲು ದೇವಾಲಯ ಮತ್ತು ಸಹೋದರಿಯರ ಸೇವೆಗಳು ಅತ್ಯಂತ ಪ್ರಮುಖ ಪಾತ್ರವಹಿಸಿವೆ. ದೇವಾಲಯ ಮತ್ತು ಸಹೋದರಿಯರ ಸೇವೆಯಿಂದ, ಸೇಡಂನ ಕ್ರೈಸ್ತ ಸಮುದಾಯವು ಇಂದು ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿನಲ್ಲಿ ಸಾಕಷ್ಟುಬಲಿಷ್ಠವಾಗಿ ಬೆಳೆಯುತ್ತಿದೆ.







ಬ್ರದರ್ ಸಚಿನ್ ಮೊಂತೇರೊ,
ಮೈಸೂರು

# ಜೋಳ: ಆಯುರ್ವೇದದ ಪ್ರಾಚೀನ ಧಾನ್ಯ, ಆಧುನಿಕ ಆರೋಗ್ಯದ ಮಂತ್ರ

ಜೋಳ (Hordeum vulgare), ಆಯುರ್ವೇದದಲ್ಲಿ ಯವ ಎಂದು ಕರೆಯಲ್ಪಡುವುದು, ಮಾನವ ಇತಿಹಾಸದಲ್ಲಿನ ಅತ್ಯಂತ ಹಳೆಯ ಬೆಳೆಯಾದ ಧಾನ್ಯಗಳಲ್ಲಿ ಒಂದಾಗಿದೆ. ಆಯುರ್ವೇದೀಯ ಆಹಾರಶಾಸ್ತ್ರ, ಸಾಂಪ್ರದಾಯಿಕ ಔಷಧಿ ಮತ್ತು ಆಧುನಿಕ ಪೌಷ್ಠಿಕ ವಿಜ್ಞಾನದಲ್ಲಿ ಜೋಳವು ಪ್ರಮುಖ ಸ್ಥಾನ ಪಡೆದಿದೆ. ಅದರ ಔಷಧೀಯ ಗುಣಗಳು ಹಾಗೂ ಹಲವಾರು ಉಪಯೋಗಗಳಿಂದ ಇದು ಪ್ರಸಿದ್ಧವಾಗಿದೆ. ಆಯುರ್ವೇದದಲ್ಲಿ ಜೋಳವನ್ನು ಲಘು, ಅಂದರೆ ಸುಲಭವಾಗಿ ಜೀರ್ಣವಾಗುವ ಧಾನ್ಯವೆಂದು, ಶೀತ ಸ್ವಭಾವದ, ರೂಕ್ಷ, ಕಫಶಮನಕಾರಿ ಹಾಗೂ ಕೊಬ್ಬು ಕಡಿಮೆ ಮಾಡುವ ಗುಣವುಳ್ಳ ಧಾನ್ಯವೆಂದು ವರ್ಣಿಸಲಾಗಿದೆ. ಈ ಕಾರಣದಿಂದಾಗಿ ಜೋಳವು ಮಟಾಬಾಲಿಕ್ ತೊಂದರೆಗಳು, ಮೋಟಾಪನ ಹಾಗೂ ಜೀರ್ಣಕ್ರಿಯೆಯ ಅಸಮತೋಲನಗಳಲ್ಲಿ ಉಪಯುಕ್ತವೆಂದು ಪರಿಗಣಿಸಲಾಗಿದೆ.



ಆಧುನಿಕ ಸಂಶೋಧನೆಗಳ ಪ್ರಕಾರ, ಜೋಳದಲ್ಲಿ ಬೇಟಾಗ್ಲುಕಾನ್ಸ್, ಫಿನಾಲಿಕ್ ಸಂಯುಕ್ತಗಳು, ಫ್ಲಾವೋನಾಯ್ಡ್, ಅಗತ್ಯ ಖನಿಜಗಳು ಹಾಗೂ ಆಹಾರ ತಂತುಗಳು ಸಮೃದ್ಧವಾಗಿದ್ದು, ಇವು ಹೃದಯದ ಆರೋಗ್ಯವನ್ನು ಕಾಪಾಡಲು, ರಕ್ತದಲ್ಲಿ ಸಕ್ಕರೆಯ ಮಟ್ಟವನ್ನು ನಿಯಂತ್ರಿಸಲು, ತೂಕವನ್ನು ಸಮತೋಲನಗೊಳಿಸಲು ಮತ್ತು ಪಚನಾಂಗದ ಆರೋಗ್ಯವನ್ನು ಉಳಿಸಲು ಮಹತ್ತರ ಪಾತ್ರ ವಹಿಸುತ್ತವೆ.

ಜೋಳದಲ್ಲಿ ಕಾರ್ಬೋಹೈಡ್ರೇಟ್ಸ್ ಸುಮಾರು ಎಪ್ಪತ್ತು ಶೇಕಡಾ, ಪ್ರೋಟೀನ್ ಹತ್ತು ಶೇಕಡಾ, ಖನಿಜಗಳು ಒಂದುರಿಂದ ಎರಡು ಶೇಕಡಾ ಅಂಶವರೆಗೆ ಇರುವುದನ್ನು ಕಾಣಬಹುದು. ಜೋಳವು ದ್ರವ್ಯಮಾನ ತಂತುಗಳಲ್ಲಿ, ವಿಶೇಷವಾಗಿ ಬೇಟಾಗ್ಲುಕಾನ್ಸ್‌ನಲ್ಲಿಸಮೃದ್ಧವಾಗಿದೆ.ಮ್ಯಾಗ್ನೀಶಿಯಮ್, ಪೊಟ್ಯಾಸಿಯಮ್, ಫಾಸ್ಫರಸ್, ಸೆಲೆನಿಯಂ, ತಾಮ್ರ ಮೊದಲಾದ ಸೂಕ್ಷ್ಮ ಖನಿಜಗಳೂ ಜೋಳದಲ್ಲಿ ಲಭ್ಯವಿವೆ. ಇದಲ್ಲದೆ ಫಿನಾಲಿಕ್ ಆಮ್ಲಗಳು, ಫ್ಲಾವೋನಾಯ್ಡ್, ಲಿಗ್ನಾನ್ಸ್, ಟೊಕೋಲ್ಸ್ ಮುಂತಾದ ಸಸ್ಯರಾಸಾಯನಿಕ ಸಂಯುಕ್ತಗಳು ದೇಹಕ್ಕೆ ಆರೋಗ್ಯಕರವಾದ ರಕ್ಷಣೆ ಒದಗಿಸುತ್ತವೆ.

ಆಯುರ್ವೇದದ ದೃಷ್ಟಿಯಿಂದ ಜೋಳವು ಮಧುರ ಹಾಗೂ ಕಷಾಯ ರಸವುಳ್ಳ ಧಾನ್ಯವಾಗಿದ್ದು, ಶೀತವೀರ್ಯವನ್ನು ಹೊಂದಿದೆ.ಇದು ಕಫ ಮತ್ತು ಪಿತ್ತವನ್ನು ಶಮನಗೊಳಿಸಿದರೂ ಹೆಚ್ಚು ಸೇವಿಸಿದಲ್ಲಿ ವಾತ ದೋಷವನ್ನು ಹೆಚ್ಚಿಸಬಹುದು. ಜೀರ್ಣಕ್ರಿಯೆಗೆ ಇದು ಸಹಾಯಕವಾಗಿದ್ದು, ಅಗ್ನಿಯನ್ನು ವೃದ್ಧಿಗೊಳಿಸುತ್ತದೆ, ಅಮವನ್ನು ನಿವಾರಿಸುತ್ತದೆ ಹಾಗೂ ಉಬ್ಬುವಿಕೆ ಮತ್ತು ಬದ್ಧಕೋಷ್ಠವನ್ನು ಕಡಿಮೆಮಾಡುತ್ತದೆ. ಇದಲ್ಲದೆ ಮೋಟಾಪನ, ಮಧುಮೇಹ ಮತ್ತು ಕೊಲೆಸ್ಟ್ರಾಲ್‌ನಿಯಂತ್ರಣಕ್ಕೂ ಜೋಳವು ಅತ್ಯಂತ ಉಪಯುಕ್ತ ನೈಸರ್ಗಿಕ ಮೂತ್ರವರ್ಧಕವಾದ ಕಾರಣದಿಂದ ಕಿಡ್ನಿ ಕಲ್ಲು ತಡೆಗಟ್ಟುವ ಸಾಮರ್ಥ್ಯವೂ ಇದಕ್ಕೆ ಇದೆ. ಗಂಟಲು ನೋವು, ಕೆಮ್ಮು ಹಾಗೂ ಕೆಲವು ಚರ್ಮರೋಗಗಳ ಚಿಕಿತ್ಸೆಯಲ್ಲಿ ಸಹ ಜೋಳವನ್ನು ಬಳಸಲಾಗುತ್ತದೆ.



ಆಧುನಿಕ ವಿಜ್ಞಾನವೂ ಇದೇ ವಿಚಾರವನ್ನು ದೃಢಪಡಿಸಿದೆ. ಜೋಳದಲ್ಲಿರುವ ಬೇಟಾಗ್ಲುಕಾನ್ಸ್ ದ್ರವ್ಯಮಾನ ತಂತು ಕೊಲೆಸ್ಟ್ರಾಲ್ ಕಡಿಮೆ ಮಾಡಿ ಹೃದಯರೋಗದ ಅಪಾಯವನ್ನು ತಗ್ಗಿಸುತ್ತದೆ. ಕಡಿಮೆ ಗ್ಲೈಸೆಮಿಕ್ ಸೂಚ್ಯಂಕ ಇರುವುದರಿಂದ ರಕ್ತದಲ್ಲಿನ ಸಕ್ಕರೆಯ ಏರಿಕೆಯನ್ನು ನಿಧಾನಗೊಳಿಸಿ ಮಧುಮೇಹಿಗಳಿಗೆ ಸಹಾಯಕವಾಗುತ್ತದೆ. ಹೊಟ್ಟೆ ತುಂಬುವ ಭಾವನೆ ನೀಡುವ ಗುಣದಿಂದ ತೂಕ ನಿಯಂತ್ರಣದಲ್ಲಿ ಸಹಕಾರಿ. ಪ್ರೀಬಯೋಟಿಕ್ ಗುಣವುಳ್ಳ ಬೇಟಾಗ್ಲುಕಾನ್ಸ್ ಜೀರ್ಣಾಂಗದಲ್ಲಿನ ಉತ್ತಮ ಬ್ಯಾಕ್ಟೀರಿಯಾದ ಬೆಳವಣಿಗೆಯನ್ನು ಬೆಂಬಲಿಸುತ್ತದೆ. ಜೊತೆಗೆ ಫಿನಾಲಿಕ್ ಸಂಯುಕ್ತಗಳು ಮತ್ತು ಫ್ಲಾವೋನಾಯ್ಡ್ ದೀರ್ಘಕಾಲೀನ ಉರಿಯಾಂಶವನ್ನು ಕಡಿಮೆ ಮಾಡುತ್ತವೆ.

ಆಯುರ್ವೇದದಲ್ಲಿ ಜೋಳದ ಹಲವಾರು ಮನೆಮದ್ದುಗಳನ್ನು ಶಿಫಾರಸು ಮಾಡಲಾಗಿದೆ. ಉದಾಹರಣೆಗೆ, ಹುರಿದ ಜೋಳದಿಂದ ತಯಾರಿಸಿದ ಗಂಜಿಯನ್ನು ಅತಿಸಾರ ಹಾಗೂ ಜೀರ್ಣತೊಂದರೆಗಳಿಗೆ ನೀಡಲಾಗುತ್ತದೆ. ಜೋಳವನ್ನು ನೀರಿನಲ್ಲಿ ಬೇಯಿಸಿ ತಯಾರಿಸಿದ ಜೋಳದ ನೀರು ಹೊಟ್ಟೆಯ ಉಬ್ಬುವಿಕೆ ಮತ್ತು ಅನಿಲ ತೊಂದರೆಗಳಿಗೆ ಉತ್ತಮ ಔಷಧಿಯಾಗಿದೆ. ಮಜ್ಜಿಗೆ ಅಥವಾ ಮೊಸರಿನಲ್ಲಿ ಬೇಯಿಸಿದ ಜೋಳ ಅಜೀರ್ಣ ಹಾಗೂ ಆಮ್ಲ ಪಿತ್ತ ಸಮಸ್ಯೆಗೆ ನೆರವಾಗುತ್ತದೆ. ಜೋಳದ ಪುಡಿಯನ್ನು ನಿಂಬೆ ರಸ ಅಥವಾ ಹುಳಿ ಮಜ್ಜಿಗೆ ಜೊತೆಗೆ ಮಿಶ್ರಣ ಮಾಡಿ ಬಿಸಿ ಲೇಪವಾಗಿ ಹಚ್ಚಿದರೆ ಸ್ನಾಯು ಮತ್ತು ಸಂಧಿ ನೋವು ನಿವಾರಣೆಯಾಗುತ್ತದೆ.

ಜೋಳವನ್ನು ಶ್ವಾಸಕೋಶದ ಆರೋಗ್ಯಕ್ಕಾಗಿ ಸಹ ಬಳಸುತ್ತಾರೆ. ಕೆಮ್ಮು, ಶೀತದಲ್ಲಿ ಆಹಾರ ರೂಪದಲ್ಲಿ ಜೋಳವನ್ನು ಸೇವಿಸುವುದು ಉಪಯುಕ್ತ. ಚರ್ಮದ ಆರೈಕೆಯಲ್ಲಿ ಜೋಳದ ಲೇಪವನ್ನು ಹಚ್ಚುವುದರಿಂದ ಕೆಲವು ಚರ್ಮರೋಗಗಳಲ್ಲಿ ಶಮನ ಉಂಟಾಗುತ್ತದೆ. ಆದರೆ ಜೋಳ ಸೇವನೆಗೆ ಕೆಲವು ಎಚ್ಚರಿಕೆಗಳೂ ಅಗತ್ಯ. ಸಮತೋಲನವಾಗಿ ತೆಗೆದುಕೊಂಡರೆ ಸುರಕ್ಷಿತವಾದರೂ ಹೆಚ್ಚು ಸೇವಿಸಿದರೆ ವಾತ ದೋಷ ಹೆಚ್ಚಾಗಿ ಬದ್ಧಕೋಷ್ಟ ಉಂಟಾಗಬಹುದು. ಗರ್ಭಿಣಿಯರು ಮತ್ತು ಶಿಶುಪಾಲಕರು ವೈದ್ಯರ ಸಲಹೆಯೊಂದಿಗೆ ಮಾತ್ರ ಜೋಳವನ್ನು ಬಳಸುವುದು ಸೂಕ್ತ. ಗ್ಲೂಟನ್‌ಗೆ ಅಲರ್ಜಿ ಇರುವವರು, ವಿಶೇಷವಾಗಿ ಸಿಲಿಯಾಕ್ ರೋಗಿಗಳು, ಜೋಳವನ್ನು ಸೇವಿಸಬಾರದು.

ಒಟ್ಟಿನಲ್ಲಿ, ಜೋಳವು ಆಯುರ್ವೇದ ಜ್ಞಾನ ಮತ್ತು ಆಧುನಿಕ ಪೌಷ್ಟಿಕ ವಿಜ್ಞಾನವನ್ನು ಸೇರುವ ಒಂದು ಅತ್ಯುತ್ತಮ ಧಾನ್ಯ. ಶೀತ ಸ್ವಭಾವ, ಸುಲಭ ಜೀರ್ಣಶಕ್ತಿ, ದೇಹ ಶೋಧನೆ ಹಾಗೂ ಜೈವಿಕ ಕ್ರಿಯಾಶೀಲ ಅಂಶಗಳಿಂದ ಜೋಳವು ಜೀರ್ಣಾಂಗದ ಆರೋಗ್ಯ, ಮೆಟಾಬಾಲಿಕ್ ಸಮತೋಲನ, ಹೃದಯ ರಕ್ಷಣೆ ಮತ್ತು ಸಂಧಿ ನೋವಿನ ಆರೈಕೆಗೆ ಉಪಯುಕ್ತವಾಗಿದೆ. ಜೋಳದ ಗಂಜಿ, ಜೋಳದ ನೀರು, ಮಜ್ಜಿಗೆಯಲ್ಲಿ ಮಿಶ್ರಿತ ಜೋಳ ಮುಂತಾದ ಸರಳ ಮನೆಮದ್ದುಗಳು ಕಡಿಮೆ ವೆಚ್ಚದಲ್ಲಿ, ಸುರಕ್ಷಿತವಾಗಿ ಮತ್ತು ಪರಿಣಾಮಕಾರಿಯಾಗಿ ಆರೋಗ್ಯವನ್ನು ಕಾಪಾಡುವ ಶಕ್ತಿಯುತ ಉಪಾಯಗಳಾಗಿವೆ.





# ಯುವಕರ ಜ್ಯೂಬಿಲಿ ವರುಷ ತಂದಿತ್ತು ಭರವಸೆಯ ಹರುಷ



ಮಾಲಾಶ್ರೀ
ಹುಮ್ನಾಬಾದ್

ಕಥೋಲಿಕ ಧರ್ಮಸಭೆಯ ಇತಿಹಾಸದಲ್ಲಿ ಜ್ಯೂಬಿಲಿ ವರ್ಷವು ಒಂದು ವಿಶಿಷ್ಟ ಸಂದರ್ಭ. ಪ್ರತಿ 25 ವರ್ಷಗಳಿಗೊಮ್ಮೆನಡೆಯುವ ಈ ಪವಿತ್ರ ವರ್ಷವು ಕೇವಲ ಧಾರ್ಮಿಕ ಉತ್ಸವವಲ್ಲ, ಇದು ದೇವರ ಕೃಪೆಯನ್ನು ಹೊಸದಾಗಿ ಅನುಭವಿಸುವ ಮತ್ತು ಜೀವನವನ್ನು ಆಧ್ಯಾತ್ಮಿಕವಾಗಿ ನವೀಕರಿಸುವ ಅಪರೂಪದ ಅವಕಾಶ. ಪೋಪ್ ಫ್ರಾನ್ಸಿಸ್ 2025ರ ಜ್ಯೂಬಿಲಿಯನ್ನು "ನಿರಾಶೆಗೊಳ್ಳದ ಭರವಸೆ" ಎಂದು ಘೋಷಿಸಿರುವುದು, ಇಂದಿನ ಪ್ರಸ್ತುತ ಯುಗದಲ್ಲಿ ಎಲ್ಲರಿಗೂ ಬೆಳಕಾಗಿರುವ ಸತ್ಯ "ಭರವಸೆಯ ಯಾತ್ರಿಕರು" – ಅಂದರೆ ದೇವರ ದಾರಿಯಲ್ಲಿನಡೆಯುವವರು, ನಂಬಿಕೆಯಿಂದಶಕ್ತಿಗೊಂಡವರು, ಕ್ರಿಸ್ತನಬೆಳಕನ್ನು ಜಗತ್ತಿಗೆ ತರುವವರು.

**ಪವಿತ್ರ ಪುಸ್ತಕದಲ್ಲಿ ಯೆರೆಮಿಯಾ 29:11 ನಮ್ಮನ್ನು ನೆನಪಿಸುತ್ತದೆ:** ನಿಮಗೆ ಇಂಥ ಗತಿ ಬರಲಿ ಎಂದಲ್ಲ, ನಿರೀಕ್ಷೆ ಇರಲಿ ಎಂದೇ ನಾನು ನಿಮ್ಮ ವಿಷಯದಲ್ಲಿ ಮಾಡಿಕೊಂಡ ಆಲೋಚನೆಗಳನ್ನು ನಾನು ಮಾತ್ರ ಬಲ್ಲೆ. ಅವು ಅಹಿತ ಯೋಜನೆಗಳೇನೂ ಅಲ್ಲ, ಹಿತಕರವಾದ ಯೋಜನೆಗಳೇ ಇದೇ ಸಂದೇಶವನ್ನು ಯುವಕರ ಜುಬಿಲಿ ವರ್ಷದ ಮೂಲಕ ಧರ್ಮಸಭೆ ನೀಡಲು ಪ್ರಯತ್ನಿಸುತ್ತಿದೆ.

**ಜ್ಯೂಬಿಲಿ ಎಂದರೆ ಕೇವಲ ಒಂದು ಹಬ್ಬವಲ್ಲ:** ಅದು ಸಂತೋಷ, ಸ್ಮರಣೆ ಮತ್ತು ದೇವರ ಅಪಾರ ಕೃಪೆಯ ಅನುಭವ. ಇದರಲ್ಲಿಪ್ರತಿಯೊಬ್ಬ ಯುವಕರಿಗೂ ದೇವರೊಂದಿಗೆ ಸಂಬಂಧವನ್ನು ಪುನಃ ಗಟ್ಟಿಗೊಳಿಸುವ, ಜೀವನವನ್ನು ಪರಿಶೀಲಿಸುವ ಮತ್ತು ವಿಶ್ವಾಸದಲ್ಲಿ ನೆಲೆಸುವ ಅವಕಾಶ ದೊರೆಯುತ್ತದೆ. "ಆದ್ದರಿಂದ ಯಾರಾದರೂ ಕ್ರಿಸ್ತನಲ್ಲಿ ಇದ್ದರೆ, ಅವನು ಹೊಸ ಸೃಷ್ಟಿ; ಹಳೆಯವು ಹೋದವು, ಇಗೋ, ಹೊಸವು ಬಂದಿದೆ" (2 ಕೊರಿಂಥದವರಿಗೆ 5:17) ಎಂಬ ವಾಕ್ಯವು ಜ್ಯೂಬಿಲಿ ನಿಜ ಅರ್ಥವನ್ನು ವ್ಯಕ್ತಪಡಿಸುತ್ತದೆ.

ಇಂದಿನ ಯುಗದಲ್ಲಿ ಯುವಜನರು ತಂತ್ರಜ್ಞಾನ, ಮಾಧ್ಯಮದ ಪ್ರಲೋಭನೆಗೆ ಮತ್ತು ವೇಗದಲ್ಲಿ ಸಾಗುವ ಜೀವನದ ಒತ್ತಡದಲ್ಲಿ ಸಾಗುತ್ತಿದ್ದಾರೆ.ಅವರಲ್ಲಿ ಅನೇಕರಿಗೆ ವಿಶ್ವಾಸ ಮತ್ತು ಮೌಲ್ಯಗಳು ದುರ್ಬಲವಾಗುತ್ತಿವೆ. ಇದೇ ಸಂದರ್ಭದಲ್ಲಿ ಧರ್ಮಸಭೆಯು ಯುವಕರಿಗಾಗಿ ಯುವಜನರಜ್ಯೂಬಿಲಿ ಆಯೋಜಿಸಿದೆ.ಇದು ಆಧ್ಯಾತ್ಮಿಕ ಜೀವನ ಮತ್ತು ಸಾಮಾಜಿಕ ಜವಾಬ್ದಾರಿಯ ನಡುವೆ ಸೇತುವೆಯಾಗಿದ್ದು, ಯುವಕರಿಗೆ ತಮ್ಮ ವಿಶ್ವಾಸದಲ್ಲಿ ಬೆಳೆಯಲು ಹಾಗೂ ಸಮಾಜದಲ್ಲಿ ಕ್ರಿಸ್ತನ ಸಾಕ್ಷಿಗಳಾಗಲು ಪ್ರೇರಣೆ ನೀಡುತ್ತದೆ.

ಯುವಜನರ ಜ್ಯೂಬಿಲಿ ಸಮಾರೋಪ ವರ್ಷವು ನಮ್ಮೆಲ್ಲರಿಗೂ ನೆನಪಿನಲ್ಲಿ ಉಳಿಯುವ ಒಂದು ಅಧ್ಯಾಯ. ಇದು ಕೇವಲ ಧಾರ್ಮಿಕ ಆಚರಣೆ ಅಲ್ಲ, ಅದು ಬದುಕಿನ ಪಾಠ. ಈ ಸಂದರ್ಭದಲ್ಲಿ ಸಾವಿರಾರು ಯುವಕರು ಒಂದೇ ಮನಸ್ಸಿನಿಂದ ಸೇರಿ, ಪ್ರಾರ್ಥನೆ, ಧ್ಯಾನ, ವಚನಪಾಠ, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಕ್ರಿಸ್ತನಲ್ಲಿಯೇ ಒಂದಾಗಿ ಬೆಳೆಯುತ್ತಾರೆ. ಅವರ

ಹೃದಯದಲ್ಲಿ ದೇವರ ಪ್ರೀತಿ, ಕ್ಷಮೆ ಮತ್ತು ಕೃಪೆಯ ಅನುಭವವು ಆಳವಾಗಿ ನೆಲಸುತ್ತದೆ. "ಯೌವನದಲ್ಲಿ ನಿನ್ನ ಸೃಷ್ಟಿಕರ್ತನನ್ನು ಸ್ಮರಿಸಿಕೊ. ಕಷ್ಟಕರವಾದ ದಿನಗಳು ಬರುವುದಕ್ಕೆ ಮುನ್ನ, ಜೀವನ ಬೇಸರವಾಗಿದೆ ಎಂದು ನೀನು ಹೇಳುವುದಕ್ಕೆ ಮುಂಚೆ ಆತನನ್ನು ಸ್ಮರಿಸು." (ಉಪದೇಶಕ 12:1) ಎಂಬ ದೇವರ ವಾಕ್ಯದಂತೆ, ಈ ಉತ್ಸವವು ಯುವಜನರಲ್ಲಿ ಆತ್ಮೀಯತೆಗೆ ಹೊಸ ಶಕ್ತಿ ನೀಡುತ್ತದೆ.

**ಈ ಜ್ಯೂಬಿಲಿ ನಮಗೆ ಕಲಿಸಿದ ಪಾಠಗಳು ಅತ್ಯಂತ ಅಮೂಲ್ಯ:** ಪ್ರಾರ್ಥನೆಯ ಮೂಲಕ ದೇವರೊಂದಿಗೆ ಆಳವಾದ ಸಂಬಂಧ ಬೆಳೆಸುವುದು; ಪರಸ್ಪರ ಕ್ಷಮೆ ಮತ್ತು ಪ್ರೀತಿಯನ್ನು ಹಂಚಿಕೊಳ್ಳುವುದು; ಬಡವರ, ನಿರ್ಗತಿಕರ, ಅಶಕ್ತರ ಸೇವೆಯಲ್ಲಿ ತೊಡಗಿಸಿಕೊಳ್ಳುವುದು; ಎಲ್ಲರನ್ನೂ ದೇವರ ಮಕ್ಕಳಂತೆ ಸಮಾನತೆಯಿಂದ ಕಾಣುವುದು."ನೀವು ಈ ನನ್ನ ಸಹೋದರರಲ್ಲಿ ಅತೀ ಚಿಕ್ಕವನಾದವನಿಗೆ ಏನು ಮಾಡಿದೆಯೋ, ಅದು ನನಗೆ ಮಾಡಿದಂತಾಯಿತು" (ಮತ್ತಾಯ 25:40) ಎಂಬ ವಾಕ್ಯವು ಈ ಸೇವಾಭಾವನೆಯ ಮರ್ಮವನ್ನು ತೋರಿಸುತ್ತದೆ.

ಯುವ ಜುಬಿಲಿಯು ಯುವಕರಿಗೆ ತಮ್ಮ ಜೀವನವನ್ನು ಪರಿಶೀಲಿಸಿ, ದೇವರು ಕೊಟ್ಟ ದಾನದ ಉಡುಗೊರೆಗಳನ್ನು ನೆನೆದು, ಹೊಸ ಕನಸುಗಳನ್ನು ಕಟ್ಟಿಕೊಳ್ಳುವ ಅವಕಾಶ ನೀಡಿತು. ಕಳೆದ ವರ್ಷದಲ್ಲಿ ಕಂಡ ಸಂತೋಷಗಳು, ಎದುರಿಸಿದ ಸವಾಲುಗಳು, ಕಲಿತ ಪಾಠಗಳು, ಸಾಧಿಸಿದ ಯಶಸ್ಸುಗಳು – ಇವೆಲ್ಲವೂ ಶಾಶ್ವತವಾಗಿ ಹೃದಯದಲ್ಲಿ ಉಳಿಯುತ್ತವೆ. "ನಾನು ಕ್ರಿಸ್ತನಲ್ಲಿ ಎಲ್ಲಾ ಕಾರ್ಯಗಳನ್ನು ನೆರವೇರಿಸಬಲ್ಲೆನು" (ಫಿಲಿಪ್ಪಿಯರಿಗೆ 4:13) ಎಂಬ ವಾಕ್ಯವು ಯುವಕರಲ್ಲಿ ಧೈರ್ಯ ತುಂಬುತ್ತದೆ. ಸಮಾರೋಪವೆಂದರೆ ಅಂತ್ಯವಲ್ಲ; ಅದು ಹೊಸ ಕನಸುಗಳ ಆರಂಭ. ಯುವಕರು ಧರ್ಮಸಭೆಯ ಭವಿಷ್ಯ, ಸಮಾಜದ ಶಕ್ತಿ. ಅವರಲ್ಲಿ ಇರುವ ಉತ್ಸಾಹ, ಶ್ರಮ, ಕ್ರಿಯಾಶೀಲತೆಯನ್ನು ಸದಾ ಒಳ್ಳೆಯ ದಾರಿಗೆ ಬಳಸುವುದು ಅವರ ಕರ್ತವ್ಯ. ಭರವಸೆಯ ದಾರಿಯಲ್ಲಿ ನಡೆಯುವವರು ಎಂದಿಗೂ ನಿರಾಶರಾಗುವುದಿಲ್ಲ, ಏಕೆಂದರೆ ಈ ನಂಬಿಕೆ ನಿರೀಕ್ಷೆಯು ನಮಗಿರುವುದರಿಂದ ನಮಗೆ ಆಶಾಭಂಗವಾಗುವುದಿಲ್ಲ. ಏಕೆಂದರೆ, ನಮಗೆ ದಾನವಾಗಿ ದಯಪಾಲಿಸಿರುವ ಪವಿತ್ರಾತ್ಮ ಅವರ ಮುಖಾಂತರ ದೇವರು ತಮ್ಮ ಪ್ರೀತಿಯನ್ನು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿಸಿದ್ದಾರೆ. (ರೋಮನರಿಗೆ 5:5).

ಹೀಗಾಗಿ, ಈ ಜುಬಿಲಿ ವರ್ಷವು ಯುವಕರ ಹೃದಯದಲ್ಲಿ ಭರವಸೆಯ ಜ್ಯೋತಿಯನ್ನು ಹೊತ್ತಿದೆ. ಅದು ಕ್ರಿಸ್ತನಲ್ಲಿ ಒಂದಾಗಿ ನಡೆಯುವ ಶಕ್ತಿಯನ್ನು ನೀಡಿದೆ. ಇದರ ಸಂದೇಶವನ್ನು ಎರಡು ಸಾಲುಗಳಲ್ಲಿ ಹೇಳಬಹುದು:

ಒಟ್ಟಾಗಿ ನಡೆದರೆ ಗುರಿ ಸುಲಭ, ಪ್ರಾರ್ಥನೆಯಿಂದ ನಡೆದರೆ ಜೀವನ ಸುಂದರ. ಇಂತಹ ಭರವಸೆಯ ಪಾಠವನ್ನು ಕಲಿತ ಯುವಕರು ಕ್ರಿಸ್ತನ ಬೆಳಕನ್ನು ಹೊತ್ತ ಯಾತ್ರಿಕರಾಗಿ ಜಗತ್ತಿನೊಳಗೆ ಸಾಗುತ್ತಾರೆ.







# ಮೌಂಟನ್ ಕ್ಲೈಂಬರ್ ಸಂತ ಪಿಯರ್ ಜಾರ್ಜಿಯೋ ಫ್ರಸ್ಸಾಟಿ

ಫಾ ಸತೀಶ್ ಕಪುಚಿನ್

ಪಿಯರ್ ಜಾರ್ಜಿಯೋ ಫ್ರಸ್ಸಾಟಿ, ಇಟಲಿಯ ಒಬ್ಬ ಸಾಮಾನ್ಯ ಯುವಕನಾಗಿ ಜನಿಸಿದರೂ, ಇಡೀ ವಿಶ್ವದ ಯುವಜನತೆಗೆ ಮಾದರಿಯಾಗಿದ್ದಾರೆ. 1901ರ ಏಪ್ರಿಲ್ 6ರಂದು ಇಟಲಿಯ ಟುರಿನ್ ನಗರದಲ್ಲಿ ಪಿಯರ್ ಜಾರ್ಜಿಯೋ ಫ್ರಸ್ಸಾಟಿ ಜನಿಸಿದನು. ಅವರ ತಂದೆ ಅಲ್ಫ್ರೆಡೊ ಫ್ರಸ್ಸಾಟಿ ಅವರು ಪ್ರಸಿದ್ಧ ಪತ್ರಿಕೆಯ ಸಂಪಾದಕರಾಗಿದ್ದು ರಾಜಕಾರಣಿಯಾಗಿದ್ದರು. ತಾಯಿ ಅಡಿಲೇಡ್ ಅವರು ಓರ್ವ ಪ್ರತಿಭಾವಂತ ಕಲಾವಿದೆ. ಶ್ರೀಮಂತ ಹಾಗೂ ಪ್ರತಿಷ್ಠಿತ ಕುಟುಂಬದಲ್ಲಿ ಹುಟ್ಟಿದ್ದರೂ, ಪಿಯರ್ ಜಾರ್ಜಿಯೋನು ಐಶ್ವರ್ಯದಲ್ಲಿ ತೇಲಿದವನು ಅಲ್ಲ; ಬದಲಾಗಿ ಅವನ ಜೀವನವು ಬಡವರ ಸೇವೆಯಲ್ಲಿ, ಪ್ರಾರ್ಥನೆ ಮತ್ತು ಧರ್ಮಭಕ್ತಿಯಲ್ಲಿ ಮಿಗಿಲಾಯಿತು.

ಚಿಕ್ಕ ವಯಸ್ಸಿನಿಂದಲೇ ಪಿಯರ್ ಜಾರ್ಜಿಯೋ ದೇವರ ಕಡೆಗೆ ಅಪಾರ ಪ್ರೀತಿ ಹೊಂದಿದ್ದನು. ಅವನು ಪ್ರತಿದಿನದ ಪವಿತ್ರ ಬಲಿಪೂಜೆಗೆ ಹಾಜರಾಗುತ್ತಿದ್ದನು, ಪ್ರಭುವಿನ ದಿವ್ಯ ಶರೀರ ಮತ್ತು ರಕ್ತವನ್ನು ಸ್ವೀಕರಿಸುತ್ತಿದ್ದನು. ಪೂಜ್ಯ ಮರಿಯಮ್ಮನ ಮೇಲೆ ಅವನಿಗೆ ಅಪಾರ ಭಕ್ತಿ ಇತ್ತು. ಅವರು ಸದಾ ಜಪಮಾಲೆಯನ್ನು ಕೈಯಲ್ಲಿ ಹಿಡಿದುಕೊಂಡೇ ನಡೆದು ಹೋಗುತ್ತಿದ್ದನು. ಅವನ ಸ್ನೇಹಿತರು ಹೇಳುವಂತೆ, ಅವನ ನಗು ಎಲ್ಲರ ಮನದಲ್ಲಿ ದೇವರ ಪ್ರೀತಿಯನ್ನು ನೆನಪಿಸುತ್ತಿತ್ತು.

ಪಿಯರ್ ಜಾರ್ಜಿಯೋನ ಜೀವನದ ವಿಶೇಷತೆ ಎಂದರೆ ಅವನುಬಡವರಮತ್ತು ರೋಗಿಗಳ ನಡುವೆ ಸದಾ ಇರುವುದಾಗಿತ್ತು. ಅವನ ಕೈಸಂಚಿಯಲ್ಲಿದ್ದ ತನ್ನ ಖರ್ಚಿನ ಹಣವನ್ನು ಬಹುಮಟ್ಟಿಗೆ ಬಡವರಿಗೆ ನೀಡುತ್ತಿದ್ದನು. ಅವನು ಬಡವರ ಮನೆಗಳಿಗೆ ಹೋಗಿ, ಅವರೊಂದಿಗೆ ಊಟ ಮಾಡುತ್ತಿದ್ದನು, ಅವರ ದುಃಖವನ್ನು ತನ್ನದು ಎಂದು ಭಾವಿಸಿ ಹಂಚಿಕೊಳ್ಳುತ್ತಿದ್ದನು. ಅವನ ತಾಯಿ–ತಂದೆಯರು ಹಲವಾರು ಬಾರಿ ಅವನು ಮನೆಗೆ ಬಂದು ತನ್ನ ಬೂಟನ್ನು ಬಡವನಿಗೆ ಕೊಟ್ಟು, ತಾನೇ ಹಳೆಯ ಬೂಟು ಧರಿಸಿದ್ದನ್ನು ಕಂಡು ಆಶ್ಚರ್ಯಗೊಂಡಿದ್ದಾರೆ.

ಪಿಯರ್ ಜಾರ್ಜಿಯೋನ ಆತ್ಮೀಯತೆಯ ಇನ್ನೊಂದು ಬಿಂಬವೆಂದರೆ ಅವನ ಪ್ರಾರ್ಥನಾ ಜೀವನ. "ಯೇಸು ಇಲ್ಲದೆ ನಾನು ಬದುಕಲಾರೆ" ಎಂದು ಹೇಳುತ್ತಿದ್ದನು.ಅವನು ಬಹು ಬಾರಿ ಪವಿತ್ರ ಆರಾಧನೆಯಲ್ಲಿ ಗಂಟೆಗಳ ಕಾಲ ಮೌನವಾಗಿ ಪ್ರಾರ್ಥಿಸುತ್ತಿದ್ದನು.ಸ್ನೇಹಿತರು ಅವನನ್ನು ಸಂತ ಎಂದು ಕರೆದರೂ, ಅವನು ಸದಾ ನಗುಮುಖದಿಂದ "ನಾನು ದೇವರ ಸಾಧನ ಮಾತ್ರ" ಎಂದಿದ್ದನು.

ಅವನಿಗೆ ಬೆಟ್ಟ ಹತ್ತುವುದು ಬಹಳ ಇಷ್ಟ. ಪ್ರಕೃತಿಯನಡುವೆ ದೇವರನ್ನು ಅನುಭವಿಸುತ್ತಿದ್ದನು. ಬೆಟ್ಟದ ಶಿಖರದ ಮೇಲೆ ನಿಂತು, ಅವನು ತನ್ನ ಕೈಗಳನ್ನು ಆಕಾಶದ ಕಡೆಗೆ ಎತ್ತಿ ಪ್ರಾರ್ಥಿಸುತ್ತಿದ್ದನು: "ದೇವರೆ, ನೀನೇ ನನ್ನ ಶಕ್ತಿ, ನನ್ನ ಆನಂದ." ಹೀಗಾಗಿ ಅವನನ್ನು "ಮೌಂಟನ್ ಕ್ಲೈಂಬರ್ ಸಂತ" ಎಂದು ಜನರು ಕರೆಯುತ್ತಾರೆ.

ಪಿಯರ್ ಜಾರ್ಜಿಯೋನು ಕೇವಲ 24 ವರ್ಷವಯಸ್ಸಿನಲ್ಲೇ, 1925ರ ಜುಲೈ 4ರಂದು ಪೊಲಿಯೊ ಎಂಬ ರೋಗದಿಂದಮರಣ ಹೊಂದಿದನು. ಅವನು ಮರಣಾ ಸ್ಥಿತಿಯಲ್ಲಿದ್ದಾಗಲೂ ತನ್ನ ಹಾಸಿಗೆಯ ಮೇಲೆ ಬಡವರಿಗಾಗಿ ಒಂದು ಔಷಧದ ಚೀಟಿಯನ್ನುಬರೆದು ಇಟ್ಟಿದ್ದ. "ಅವರಿಗೆ ಔಷಧ ತಲುಪಬೇಕು" ಎಂಬುದು ಅವನ ಅಂತಿಮ

ಕೀರ್ತನೆ 102:17 – "ಅವನು ಬಡವರ ಪ್ರಾರ್ಥನೆಯನ್ನು ಪರಿಗಣಿಸಿ ತಿರಸ್ಕರಿಸುವುದಿಲ್ಲ."

ಚಿಂತೆಯಾಗಿತ್ತು. ಅವನ ಅಂತ್ಯಕ್ರಿಯೆಗೆ ಸಾವಿರಾರು ಬಡವರು, ಸ್ನೇಹಿತರು, ಯುವಕರು ಸೇರಿಕೊಂಡರು. ಆ ದಿನ ಟುರಿನ್ ನಗರವು ಒಬ್ಬ ಯುವ ಸಂತನನ್ನು ಕಳೆದುಕೊಂಡ ದುಃಖದಿಂದ ಮುಳುಗಿತ್ತು.

ಪಿಯರ್ ಜಾರ್ಜಿಯೋನ ಜೀವನವು ಧರ್ಮಸಭೆಯ ಗಮನ ಸೆಳೆದಿತು. ಅವನ ಪವಿತ್ರ ಜೀವನದ ಸಾಕ್ಷಿಗಳನ್ನು ಆಧರಿಸಿ, 1989ರಲ್ಲಿ ಪೋಪ್ ಸಂತ ಜಾನ್ ಪಾಲ್ ದ್ವಿತೀಯರು ಅವನನ್ನು ಧನ್ಯನನ್ನಾಗಿ (ಪುನೀತ) ಘೋಷಿಸಿದರು. ಇವರು ಸಂತ ಪದವಿಗೆ ಸೆಪ್ಟೆಂಬರ್ 7 2025ರಂದು ಪೋಪ್ ಲಿಯೋರವರು ಸಂತರ ಪದವಿಗೆ ಏರಿಸಿದರು. ಇಡೀ ವಿಶ್ವದ ಯುವಜನತೆಗೆ ಮಾದರಿಯನ್ನಾಗಿ ಪ್ರಸ್ತುತ ಪಡಿಸಿದರು. ಪಿಯರ್ ಜಾರ್ಜಿಯೋನ ಪ್ರಾರ್ಥನೆಗಳ ಮೂಲಕ ಅನೇಕರು ರೋಗಮುಕ್ತರಾಗಿರುವುದು, ದೇವರ ಕಡೆಗೆ ಮರಳಿರುವುದು ಚರ್ಚಿಗೆ ವರದಿಯಾಗಿದೆ. ಇವೆಲ್ಲವೂ ಅವನ ಪವಿತ್ರತೆಯನ್ನು ದೃಢಪಡಿಸುತ್ತವೆ.

ಅವನ ಪವಿತ್ರ ಜೀವನದ ಮೂಲಮಂತ್ರವೊಂದೇ: "Verso l'alto"– ಅಂದರೆ "ಎತ್ತರದ ಕಡೆಗೆ." ಈ ನುಡಿಗಟ್ಟು ಅವನ ಜೀವನದ ದಿಕ್ಕನ್ನು ತೋರಿಸುತ್ತದೆ. ಅವನು ಪ್ರತಿಯೊಂದು ಕಾರ್ಯವನ್ನೂ ದೇವರ ಮಹಿಮೆಯತ್ತ ಎತ್ತುತ್ತಿದ್ದನು. ಇಂದಿಗೂ ವಿಶ್ವದ ಅನೇಕ ಯುವಕರು ಈ ಮಂತ್ರವನ್ನು ತಮ್ಮ ಜೀವನದ ಆದರ್ಶವನ್ನಾಗಿ ಮಾಡಿಕೊಂಡಿದ್ದಾರೆ.

ಅವನ ಜೀವನವನ್ನು ನೋಡಿದಾಗ, ಪವಿತ್ರತೆ ಎನ್ನುವುದು ದೊಡ್ಡ ಕಾರ್ಯಗಳಲ್ಲಿ ಅಲ್ಲ, ಬದಲಾಗಿ ಪ್ರತಿದಿನದ ಸಣ್ಣ ಕೆಲಸಗಳಲ್ಲಿ, ಪ್ರೀತಿಯ ಮನೋಭಾವದಲ್ಲಿ ಅಡಗಿದೆ ಎಂಬುದನ್ನು ನಾವು ಅರಿಯುತ್ತೇವೆ. ಅವನು ತೋರಿಸಿದ ದಾರಿ, ಸೇವಾಭಾವ, ಪ್ರಾರ್ಥನೆಯ ಶಕ್ತಿ, ಧೈರ್ಯ, ಸಂತೋಷ ಇವೆಲ್ಲವೂ ನಮ್ಮ ಜೀವನಕ್ಕೆ ಬೆಳಕು.

ಇಂದು ಪಿಯರ್ ಜಾರ್ಜಿಯೋ ಫ್ರಸ್ಸಾಟಿ ಯುವಕರ ಪೋಷಕ ಧನ್ಯನಾಗಿ ಪೂಜಿಸಲ್ಪಡುತ್ತಾನೆ. ಅವನ ಬದುಕು ನಮಗೆ ಹೇಳುತ್ತದೆ: ಯುವ ವಯಸ್ಸು ದೇವರಿಗೆ ಅರ್ಪಣೆಯಾಗಬಹುದು, ಸಂತೋಷವು ಬಡವರ ಸೇವೆಯಲ್ಲಿ ದೊರೆಯುತ್ತದೆ, ನಿಜವಾದ ಶಕ್ತಿ ಪ್ರಾರ್ಥನೆಯಲ್ಲಿ ಸಿಗುತ್ತದೆ, ಕ್ರೈಸ್ತ ಮೌಲ್ಯಗಳನ್ನು ಬದುಕುವುದೇ ಶ್ರೇಷ್ಠ ಜಯ.

**ಪಿಯರ್ ಜಾರ್ಜಿಯೋನ ಮಾತುಗಳನ್ನು ನೆನಪಿಸಿಕೊಳ್ಳೋಣ:** "ಯೇಸು ನನ್ನಲಿಗೆ ಬರುತ್ತಾರೆ, ನಾನೂ ಅವರ ಕಡೆಗೆ ಹೋಗುತ್ತೇನೆ." ಅವನು ನಡೆಸಿದ ದಾರಿಯಲ್ಲಿ ನಡೆಯೋಣ, ನಮ್ಮ ಬದುಕನ್ನೂ ದೇವರ ಸೇವೆಗೆ ಅರ್ಪಿಸೋಣ. ಅವನ ಮಧ್ಯಸ್ಥಿಕೆಯಿಂದ ನಮ್ಮ ಯುವಕರಿಗೆ ದೇವರ ಪ್ರೀತಿಯಲ್ಲಿ ಬದುಕುವ ಕೃಪೆ ದೊರಕಲಿ.





# ಸಂತ ಕಾರ್ಲೊ ಆಕುತಿಸ್
## ಧರ್ಮಸಭೆಯ ನೂತನ ಸಂತರು



ಸಿ. ಜೇನ್ ಪಾಯ್ಸ್, ಬೆಥನಿ

ಆಧುನಿಕ ಯುಗದಲ್ಲಿ, ತಂತ್ರಜ್ಞಾನ ಮತ್ತು ಕ್ರೈಸ್ತ-ವಿಶ್ವಾಸ ಒಂದಕ್ಕೊಂದು ಭಿನ್ನಾಭಿಪ್ರಾಯಗಳನ್ನು ಉಂಟು ಮಾಡುವ ಅದ್ವಿತೀಯ ಕ್ಷೇತ್ರಗಳು, ತಾಂತ್ರಿಕ ಯುಗ ಧಾರ್ಮಿಕತೆಗೆ ಶಾಪವೆಂದು ಕೆಲವರು ಹೇಳಿದರೆ, ಕಾರ್ಲೊ ಅಕುತಿಸ್ ಅವರ ಜೀವನ, ಈ ಎರಡು ಕ್ಷೇತ್ರಗಳಿಗೆ ಸಾಮರಸ್ಯದ ಸಹಬಾಳ್ವೆಯಾಗಿ ದಾರಿ ದೀಪವಾಗುವಂತಹ ನೈಜ ಕಥೆಯಾಗಿದೆ. ಲಂಡನ್ನ್‌ನಿನ ಪೋರ್ಟ್ ಲ್ಯಾಂಡ್ ನಿವಾಸಿ ಶ್ರೀ ಆಂಡ್ರಿಯಾ ಅಕುತಿಸ್ ಮತ್ತು ಶ್ರೀಮತಿ ಆಂಟೋನಿಯಾ ಸಾಲ್ಜಾನೊ ದಂಪತಿಗಳಿಗೆ ಪುನೀತ ಕಾರ್ಲೊ ಅಕುತಿಸ್ ಮೇ 3, 1991ರಂದು ಜನಿಸಿದರು. ತದನಂತರ ಸೆಪ್ಟೆಂಬರ್ 1991ರಲ್ಲಿ ಇವರು ಇಟಲಿಯ ಮಿಲನ್‌ಗೆ ಸ್ಥಳಾಂತರಗೊಂಡರು. ಅಲ್ಲಿ ಆಕುತಿಸ್ ಇವರ ತಂದೆ ಶ್ರೀ ಆಂಡ್ರಿಯಾ ಅಕುತಿಸ್ ಹಣಕಾಸು ತಜ್ಞರು, ಇವರು ವಿಮಾ ನಿಗಮದ ನಿರ್ವಾಹಕರಾಗಿ ಕೆಲಸ ಮಾಡುತ್ತಿದ್ದರು. ಹೆತ್ತವರಿಗೆ ದೈವಭಕ್ತಿ ಇಲ್ಲದಿದ್ದರೂ ಬಾಲಕನಾಗಿದ್ದಾಗ ಕಾರ್ಲೊ ಆಕುತಿಸ್ ತನ್ನ ಬದುಕಿನಲ್ಲಿ ಆಳವಾದ ಆಧ್ಯಾತ್ಮಿಕ ವಿಶ್ವಾಸವನ್ನು ಗಳಿಸಿದನು. ಆತನ ಮನೆಯ ಅಕ್ಕಪಕ್ಕ ಮನೆಯವರ ವಾತಾವರಣ ಚೆನ್ನಾಗಿರಲಿಲ್ಲ. ಕೌಟುಂಬಿಕ ಕಾದಾಟ, ಮನಸ್ತಾಪಗಳು, ವೈವಾಹಿಕ ವಿಚ್ಛೇದನೆಗಳು ಈ ರೀತಿ ಸಂಭವಗಳನ್ನು ಕಂಡು ಮನ ಕುಗ್ಗದೆ ಅವರಿಗಾಗಿ ಪ್ರಾರ್ಥಿಸಲು ಪ್ರೇರಣೆ ಹೊಂದಿದನು. ಕಾರ್ಲೊ ವಿಶ್ವಾಸ ದೃಢತೆಗೆ ಜಪಸರವೇ ಕಾರಣವಾಗಿತ್ತು. ಅವನ ಹೆತ್ತವರಲ್ಲಿ ಯಾರೊಬ್ಬರೂ ಧಾರ್ಮಿಕರಾಗಿರಲಿಲ್ಲ. ಆದರೆ ಚಿಕ್ಕ ವಯಸ್ಸಿನಿಂದಲೂ ಕಾರ್ಲೊ ಪ್ರತೀ ಸಲ ದೇವಾಲಯವನ್ನು ಹಾದು ಹೋಗುವಾಗ ಪರಮಪ್ರಸಾದದ ಭೇಟಿ ಮಾಡುತ್ತಿದ್ದನು. ಈ ರೀತಿಯ ಈತನ ವಿಶ್ವಾಸದ ಕಾರ್ಯಗಳು ಅನೇಕರ ಮೇಲೆ ಪರಿಣಾಮ ಬೀರಿತ್ತು. ಪ್ರಾರ್ಥನೆ ಮಾಡುವುದು ತಪ್ಪಿ ಹೋದರೆ ಕಾರ್ಲೊ, ಅವರ ಪೋಷಕರನ್ನು ಪ್ರಾರ್ಥನೆ ಮಾಡಲು ಒತ್ತಾಯಿಸುತ್ತಿದ್ದ. ಈ ರೀತಿ ತನ್ನ ದೈನಂದಿನ ಬದುಕಿನಲ್ಲಿ ಒಬ್ಬ ಕ್ರೈಸ್ತನಾಗಿ ತನ್ನ ಹೃದಯದಲ್ಲಿ ದೇವರ ಪ್ರೀತಿಯನ್ನು ಮುಖದಲ್ಲಿ ವಿಶ್ವಾಸದ ನಗುವನ್ನು ಹೊಂದುವ ಮೂಲಕ ಮತ್ತೋರ್ವ ಕ್ರೈಸ್ತನಿಗೆ ಮಾರ್ಗದರ್ಶನವಾಗಿದ್ದನು. ದೈವಿಕ ಕರುಣೆ ಜಪಸರ ಮತ್ತು ಪ್ರಾರ್ಥನೆ ಮಾಡುತ್ತಾ ಅದರ ಪವಾಡಗಳನ್ನು ಅದ್ಭುತಗಳನ್ನು ಓದುತ್ತ ಸ್ಫೂರ್ತಿ ಪಡೆಯುತ್ತಿದ್ದನು. ಕಾರ್ಲೊ ತನ್ನ ಏಳನೇ ವಯಸ್ಸಿನಲ್ಲಿ ತನ್ನ ಪ್ರಥಮ ಪರಮ ಪ್ರಸಾದವನ್ನು ಸ್ವೀಕರಿಸಿದನು. ಚಿಕ್ಕ ವಯಸ್ಸಿನಲ್ಲಿಯೇ ಆಳವಾದ ದೇವಮಾತೆಯ ಭಕ್ತಿಯನ್ನು ಬೆಳೆಸಿಕೊಂಡು. ದೇವಮಾತೆಯನ್ನು ತನ್ನ ಸ್ವಂತ ತಾಯಿಯಂತೆ ಕಾಣಲು ಪ್ರಾರಂಭಿಸಿದನು. ಜಪಮಾಲೆ ಹೇಳಲು ಕಲಿತ ಆ ದಿನದಿಂದ ದೇವಮಾತೆಯ ಮೇಲಿನ ಪ್ರೀತಿಯಿಂದ ದಿನವೂ ಜಪಮಾಲೆ ಹೇಳುತ್ತಿದ್ದ ಒಂದೇ ಒಂದು ಬಾರಿಯೂ ದೇವಮಾತೆಯ ಪುಣ್ಯಸ್ಮರಣೆ ತಪ್ಪಿಸಿರಲಿಲ್ಲ.

**ಕಾರ್ಲೊ, ತನ್ನ ಜೀವನದಲ್ಲಿ ಮೊದಲ ಆದ್ಯತೆ ಪರಮ ಪ್ರಸಾದದ ಭಕ್ತಿಗೆ ಮೀಸಲಾಗಿಟ್ಟಿದ್ದನು. 'ಪರಮ ಪ್ರಸಾದದ ಭಕ್ತಿ ನನ್ನ ಸ್ವರ್ಗಕ್ಕೆ ಹೆದ್ದಾರಿ' ಎಂದು ಸದಾ ಹೇಳುತ್ತಿದ್ದನು.**

ಕಾರ್ಲೊ ಆಕುತಿಸ್ ಮೊಬೈಲ್ ಮತ್ತು ಕಂಪ್ಯೂಟರ್ ಮೇಲೆ ಹೆಚ್ಚು ಪ್ರಭಾವಿತನಾಗಿದ್ದು, ತನ್ನ ಧಾರ್ಮಿಕ ಭಕ್ತಿಯನ್ನು ತಂತ್ರಜ್ಞಾನ ಮತ್ತು ಗೇಮಿಂಗ್‌ನ ಮೇಲಿನ ಪ್ರೀತಿಯೊಂದಿಗೆ ಸಂಯೋಜಿಸಲು ಅತಿಯಾದ ಆಸೆ ಬೆಳಸಿಕೊಂಡಿದ್ದನು. ಆತ ತನ್ನ ಕಂಪ್ಯೂಟರ್

ಕೌಶಲ್ಯಗಳನ್ನು ಬಳಸಿ ಶುಭಸಂದೇಶ ಸಾರುವ ಆಕಾಂಕ್ಷೆಯನ್ನು ಹೊಂದಿದ್ದನು. ಇಂದಿನ ಯುವಜನರು ಕಾರ್ಲೊ ಉತ್ತಮ ಕಂಪ್ಯೂಟರ್ ಪರಿಣಿತ. ಈ ಕಂಪ್ಯೂಟರ್ ಜ್ಞಾನವೇ ಕಾರ್ಲೊನನ್ನು ನಿಜವಾಗಿಯೂ ಅಗಾಧ ಬುದ್ಧಿಶಕ್ತಿಯುಳ್ಳವನಾಗಿ ಮಾಡಿತ್ತು. ಕಾರ್ಲೋ ಕಂಪ್ಯೂಟರ್ ಯುಗಕ್ಕೆ ಸಂಬಂಧಿಸಿದ ಎಲ್ಲದರೊಂದಿಗೆ ಬಹಳ ಪ್ರತಿಭಾನ್ವಿತನಾಗಿದ್ದನು, ಆದ್ದರಿಂದ ಅವನ ಸ್ನೇಹಿತರು ಮತ್ತು ಕಂಪ್ಯೂಟರ್ ಎಂಜಿನಿಯರಿಂಗ್ ಪದವಿಗಳನ್ನು ಹೊಂದಿರುವ ವಯಸ್ಕರು ಅವನ ಪ್ರತಿಭೆಯನ್ನು ಕಂಡು ನಿಬ್ಬೆರಗಾಗುತ್ತಿದ್ದರು. ವಿಶ್ವವಿದ್ಯಾನಿಲಯದಲ್ಲಿ ವಿಶೇಷ ಪದವಿ ಪಡೆದವರೇ ಈ ಬಾಲಕನ ಕೈಚಳಕವನ್ನು ಕಂಡು ಮನಸೋತ್ತಿದ್ದರು. ಕಾರ್ಲೊ ಮೊದಲ ಬಾರಿಗೆ ಪ್ರಪಂಚದಾದ್ಯಂತ ಪವಿತ್ರ ಪರಮ ಪ್ರಸಾದದ ಪವಾಡಗಳನ್ನು ಪಟ್ಟಿಮಾಡಿ. ವೆಬ್‌ಸೈಟನ್ನು ರಚಿಸಿ, ಪರಮಪ್ರಸಾದದ ಪವಾಡಗಳನ್ನು ಸಂಗ್ರಹಿಸಿದ್ದನು.

ಕಾರ್ಲೊ ಆಸ್ಸಿಸಿಯಾದ ಸಂತ ಫ್ರಾನ್ಸಿಸ್ ಅವರನ್ನು ಪಾಲಿಸಿದ್ದರಿಂದ ಅವನ ಶರೀರವನ್ನು ಅಸ್ಸಿಸಿಯಾದಲ್ಲಿ ಸಮಾಧಿ ಮಾಡಬೇಕೆಂಬುದು ಆತನ ಅಂತಿಮ ಬಯಕೆಯಾಗಿತ್ತು. ಏಪ್ರಿಲ್ 6, 2019 ರಂದು, ಅಸ್ಸಿಸಿಯಾದಲ್ಲಿ ಅಂತಿಮ ಸಂಸ್ಕಾರ ನಡೆಸಲಾಯಿತು. 2020ರಲ್ಲಿ ಧರ್ಮಸಭೆ ಕಾರ್ಲೊ ಅಕುತಿಸ್‌ನನ್ನು ಪುನೀತರ ಪದವಿಗೆ ಏರಿಸಿತ್ತು. 2019ರಲ್ಲಿ ಲೂಸಿ ವಿಯಾನಾ ಅವರ ಮಗ ಮ್ಯಾಥ್ಸ್ ಮೇದೋಜೀರಕಗ್ರಂಥಿ ದೋಷದಿಂದ ಜನಿಸಿದ್ದನು. ಆತನಿಗೆ ತಿನ್ನಲು ಕಷ್ಟವಾಗಿದ್ದು ಬದುಕುವ ಶಕ್ತಿಯನ್ನು ಕಳೆದುಕೊಂಡಿದ್ದನು. ವೈದ್ಯರು ಆತ ಸಾವಿನ ಅಂಚಿನಲ್ಲಿರುವುದನ್ನು ಹೆತ್ತವರಿಗೆ ತಿಳಿಸಿದ್ದರು. ಆಗ ಲೂಸಿ ವಿಶ್ವಾಸದಿಂದ ಪರಮಪ್ರಸಾದದ ಪ್ರಾರ್ಥನೆ ಮತ್ತು ಸೇವೆಗೆ ಮುಂದಾದರು, ವಿಶೇಷವಾಗಿ ಕಾರ್ಲೊನನ್ನು ನೆನೆದು ಪ್ರಾರ್ಥಿಸಿದ್ದರು. ಕಾರ್ಲೊ ಮಧ್ಯಸ್ಥಿಕೆಯಿಂದ ಆ ಬಾಲಕ ಗುಣಮುಖನಾದನು. ಇದು ಮೊದಲ ಪವಾಡವೆಂದು ಧರ್ಮಸಭೆ ಪರಿಗಣಿಸಿದೆ. 2022ರಲ್ಲಿ ವಲೇರಿಯಾ ಎಂಬ ಕೋಸ್ಟರಿಕನ್ ಮಹಿಳೆ ತನ್ನ ಬೈಕಿನಿಂದ ಬಿದ್ದು ಮೆದುಳಿನ ರಕ್ತಸ್ರಾವವನ್ನು ಅನುಭವಿಸುತ್ತಿದ್ದರು ಆಕೆ ಗುಣಮುಖರಾದರು ಇದು ಸಂತರ ಪದವಿಗೆ ಹಾದಿ ಮಾಡಿಕೊಟ್ಟಿದೆ.

ಕಾರ್ಲೊ, ತನ್ನ ಜೀವನದಲ್ಲಿ ಮೊದಲ ಆಧ್ಯತೆ ಪರಮ ಪ್ರಸಾದದ ಭಕ್ತಿಗೆ ಮೀಸಲಾಗಿಟ್ಟಿದ್ದನು. "ಪರಮ ಪ್ರಸಾದದ ಭಕ್ತಿ ನನ್ನ ಸ್ವರ್ಗಕ್ಕೆ ಹೆದ್ದಾರಿ" ಎಂದು ಸದಾ ಹೇಳುತ್ತಿದ್ದನು. ದೈನಂದಿನ ಬಲಿಪೂಜೆ, ಜಪಸರ, ಪ್ರಾರ್ಥನೆಗಳನ್ನು ತಪ್ಪಿಸುತ್ತಿರಲಿಲ್ಲ, ಬಲಿಪೂಜೆ ಸಂಸ್ಕಾರದ ಮೊದಲು, ಆರಾಧನೆಯಲ್ಲಿ ಸ್ವಲ್ಪ ಕಾಲ ಕಳೆಯುತ್ತಿದ್ದನು. ಹೀಗೆ ಆತನ ಜೀವನವು ಸಂಕ್ಷಿಪ್ತವಾಗಿದ್ದರೂ, ಸರಳತೆ ಮತ್ತು ಪರಿಶುದ್ಧತೆಯಿಂದ ಎಲ್ಲರಿಗು ಗುರುತಿಸಲ್ಪಡುತ್ತಿದ್ದ. ಕಾರ್ಲೊ 2006 ರಲ್ಲಿ ಲ್ಯುಕೇಮಿಯ – ರಕ್ತ ಕ್ಯಾನ್ಸರ್‌ಗೆ ತುತ್ತಾದನು. ಈ ವಿಚಾರವನ್ನು ವೈದ್ಯರು ಗ್ರಹಿಸುವುದರಲ್ಲಿ ಆತ ಕ್ಯಾನ್ಸರ್‌ನ ಮೂರನೆ ಹಂತದಲ್ಲಿದ್ದ. ಆಗ ಈ ಸುದ್ದಿಯನ್ನು ಅವರ ತಂದೆ ತಾಯಿಯರು ಮನ ಮುರಿದು ಆತನಿಗೆ ತಿಳಿಸಲೇಬೇಕಿತ್ತು. ಕಾರ್ಲೊ ಈ ಸುದ್ದಿಯನ್ನು ಸಂತೋಷದಿಂದ ಸ್ವೀಕರಿಸಿದನು. ಈ ಪುಟ್ಟ ಬಾಲಕ ಸಂತನು ಮರಣಾವಸ್ಥೆಯಲ್ಲಿಯೂ ತನ್ನ ಎಲ್ಲಾ ನೋವುಗಳನ್ನು ನುಂಗುತ್ತಾ, ದೇವರಲ್ಲಿ ಅಖಿಲ ಧರ್ಮಸಭೆಗಾಗಿ ಪ್ರಾರ್ಥಿಸುತ್ತಾ ಮತ್ತು ಎಲ್ಲಾ ಯುವಜನತೆಯನ್ನು ನೆನೆದು ತನ್ನ ನೋವನ್ನು ಅರ್ಪಿಸಿ ಪ್ರಾರ್ಥಿಸಿದನು. ಸಾಯುವ ಕೊನೆ ಕ್ಷಣಗಳಲ್ಲಿ, ಇರುವ ಒಬ್ಬನೇ ಮಗನನ್ನು ಕಳೆದು ಕೊಳ್ಳುವ ತಾಯಿಯ ನೋವನ್ನು ನೆನೆದು ಹೀಗೆಂದಿದ್ದನು. "ಅಮ್ಮ, ಈ ಆಸ್ಪತ್ರೆಯಿಂದ ನಾನು ಹೋಗಲು ಇಚ್ಚಿಸುತ್ತೇನೆ, ಆದರೆ ನನಗೆ ತಿಳಿದಿದೆ ನಾನು ಬದುಕಿದ್ದಾಗ ಅದು ಸಾಧ್ಯವಿಲ್ಲ. ನಾನು ಹೋದ ಮೇಲೆ, ನಾನು ದೇವರ ಜೊತೆ ಇರುತ್ತೇನೆ. ಅಲ್ಲಿಂದ ನಾನು ನಿಮಗೆ ಅದ್ಭುತವನ್ನು ತರುತ್ತೇನೆ" ಎಂದಿದ್ದನು. ಆತ ಕೊನೆ ಉಸಿರೆಳೆಯುವಾಗ ನರ್ಸ್ ಒಬ್ಬರು ಅವನ ತಾಯಿಯನ್ನು ಎಬ್ಬಿಸಲು ಹೋದರು, ಆಗ ಕಾರ್ಲೊ ಅವರಿಗೆ. "ಅವರನ್ನು ಎಚ್ಚರಿಸ ಬೇಡಿ. ಅವರು ಈಗಾಗಲೇ ನೋವಿನಿಂದ ದಣಿದಿದ್ದಾರೆ. ನಾನು ಕಣ್ಮುಚ್ಚುವುದು ನೋಡಿದರೆ ಇನ್ನು ಹೆಚ್ಚು ನೋವು ಮಾಡಿಕೊಳ್ಳುವರು.* ಎಂದನು. ಆತನ ಕೊನೆಯ ಮಾತುಗಳು ಹೀಗಿದ್ದವು. "ನಾನು ಸಂತೋಷದಿಂದ ಸಾಯುತ್ತಿದ್ದೇನೆ, ಏಕೆಂದರೆ ನಾನು ನನ್ನ ಜೀವನದ ಯಾವುದೇ ಸಮಯವನ್ನು ದೇವರು ಇಷ್ಟಪಡದ ವಿಷಯಗಳಲ್ಲಿ ಕಳೆಯಲಿಲ್ಲ. ಯೇಸುವೇ ನಿಮ್ಮನ್ನು ನಾನು ಸದಾ ಪ್ರೀತಿಸುತ್ತೇನೆ." ಹೀಗೆ ನುಡಿದು ಕೊನೆ ಉಸಿರೆಳೆದನು. ಅಕ್ಟೋಬರ್ 12, 2006ರಂದು ತನ್ನ ಹದಿನೈದನೇ ವಯಸ್ಸಿನಲ್ಲಿ ಪ್ರಾರ್ಥನೆ ಮಾಡುತ್ತ ಪರಮ ಪ್ರಸಾದದ ಸ್ತುತಿ ಹೇಳುತ್ತಾ ನಿಧನನಾದನು. ಸರಿಯಾಗಿ ನಾಲ್ಕು ವರ್ಷಗಳ ನಂತರ, ಕಾರ್ಲೊ ಮರಣದ ಸ್ಮರಣೆಯಂದು, ಅವನ ತಾಯಿ ನಲವತ್ತನಾಲ್ಕನೇ ವಯಸ್ಸಿನಲ್ಲಿ, ಕಾರ್ಲೋ ನೀಡಿದ ಭರವಸೆಯ ವರಗಳಿಗೆ ಜನ್ಮ ನೀಡಿದರು – ಕಾರ್ಲೊ ತಾಯಿ ಅವಳಿ ಮಕ್ಕಳನ್ನು ಹೆತ್ತರು. ಆತನ ಸಾವಿನ ಹಂಚಿನ ನುಡಿಗಳು ಸತ್ಯವಾದವು. ಇಂದು ಕಾರ್ಲೊ ಅನೇಕ ಯುವಜನರಿಗೆ ಆದರ್ಶ ಪಾಲಕ ಸಂತನಾಗಿ ಮೆಚ್ಚುಗೆ ಪಡೆದಿದ್ದಾನೆ. ಇವರು ಸಂತ ಪದವಿಗೆ ಸೆಪ್ಟೆಂಬರ್ 7 2025ರಂದು ಪೋಪ್ ಲಿಯೋರವರು ಸಂತರ ಪದವಿಗೆ ಏರಿಸಿದರು.





# ಸಂತ ವಿನ್ಸೆಂಜಾ ಜೆರೋಸಾ

## ಸಂತ ಪದವಿಯ 75ನೇ ವರ್ಷದ ಭರವಸೆಯ ಸಂಭ್ರಮ

ಸಿ. ರೋಸ್‌ಫ್ಲೋರಿನ್ ಡಿ'ಸೋಜಾ

ಕ್ಯಾಥರೀನ ಹುಟ್ಟಿದ್ದು 1784 ಅಕ್ಟೋಬರ್ 29ರಂದು ಒಂದು ಶ್ರೀಮಂತ ಕುಟುಂಬದಲ್ಲಿ. ಈಕೆಯ ತಂದೆ ಜಾನ್ ಅಂತೋನಿಯೋ ಜೆರೋಸಾ ಮತ್ತು ತಾಯಿ ಜಾಕೋ ಮೀನಾ ಮಕಾರಿಯೋ. ಇವರದು ಒಂದು ಅವಿಭಕ್ತ ಕುಟುಂಬ. ಚರ್ಮ ವ್ಯಾಪಾರಿಗಳಾದ ಇವರಿಗೆ ಬೇಕಾದಷ್ಟು ಆಸ್ತಿಪಾಸ್ತಿ, ಮನೆ ಮಠಗಳಿದ್ದವು. ಜೆರೋಸಾ ಕುಟುಂಬಕ್ಕೆ ಬಡಬಗ್ಗರ ಮೇಲೆ ದಯೆ. ಸಹಾಯ ಬೇಡಿ ಇವರ ಹೊಸ್ತಿಲಿಗೆ ಬಂದವರು ಎಂದೂ ಬರಿಗೈಯಿಂದ ಮರಳುತ್ತಿರಲಿಲ್ಲ. ಕ್ಯಾಥರೀನಳ ವಿದ್ಯಾಭ್ಯಾಸ ಮನೆಯಲ್ಲಿಯೇ ನಡೆದಿತ್ತು. 1801ರಲ್ಲಿ ತಂದೆ ನಿಧನರಾದ ಬಳಿಕ ಕುಟುಂಬದಲ್ಲಿ ಅನೇಕ ದುರ್ಘಟನೆಗಳು, ಸಾವುನೋವುಗಳು ತಲೆದೋರಿದವು. ಕೊನೆಗೆ ತನ್ನ ತಾಯಿಯನ್ನು ಮಾತ್ರವಲ್ಲದೆ ತನ್ನಂತೆಯೇ ದಾನ ಶೀಲೆಯಾಗಿ ತನ್ನ ಏಕಮಾತ್ರ ತಂಗಿಯನ್ನು ಕಳೆದುಕೊಂಡಳು. ಲೋವೆರೆಯ ಅವರ ಅತಿ ದೊಡ್ಡ ಬಂಗಲೆಯಲ್ಲಿ ಕೊನೆಗೆ ಉಳಿದವರು ಕ್ಯಾಥರೀನ ಮತ್ತು ಆಕೆಯ ತಂದೆಯ ತಂಗಿ ಬರ್ತಾಲೋಮೆಯ ಜೆರೋಸಾ. ಕ್ಯಾಥರೀನಳ ನೇತೃತ್ವದಲ್ಲಿ ಹಿಂದಿನಿಂದಲೂ ನಡೆದು ಬಂದ ದಾನ ಧರ್ಮಗಳು ಈಗಲೂ ಮುಂದುವರಿದವು. ಕಾಥರೀನ ಜೆರೋಸಾ ಬಹು ಸಾಧ್ವಿ. ಬಲಗೈ ಕೊಟ್ಟದ್ದನ್ನು ಎಡಗೈ ತಿಳಿಯದಂತೆ ನೀಡುವ ಗುಪ್ತದಾನ ಆಕೆಯದು. 1817ರಲ್ಲಿ ಹರಡಿದ ಒಂದು ಸಾಂಕ್ರಾಮಿಕ ರೋಗದಿಂದ ನರಳುತ್ತಿದ್ದ ಜನರಿಗೆ ಇವಳೊಬ್ಬ ಭಾಗ್ಯ ದೇವತೆಯಾದಳು. ಈಕೆಗೂ ಮದುವೆಯಾಗುವುದರಲ್ಲಿ ಆಸಕ್ತಿಯಿರಲಿಲ್ಲ. ತನ್ನ ಇಡೀ ಜೀವನವನ್ನು ದೇವರಿಗೆ ಒಪ್ಪಿಸಿ ಬಡಬಗ್ಗರ ಸೇವೆಯಲ್ಲಿ ನಿರತಳಾಗಲು ಈಕೆ ಬಯಸಿದಳು.

1824ರಲ್ಲಿ ಬರ್ತೋಲೋಮೆಯ ಕಪಿತಾನಿಯೋ, ಕ್ಯಾಥರೀನಳನ್ನು ಭೇಟಿಯಾಗಿ ತನ್ನ ಮನದ ಇಂಗಿತವನ್ನು ಈಕೆಯ ಮುಂದಿಟ್ಟಳು. ಈಕೆ ತನ್ನಿಂದಾದ ಎಲ್ಲಾ ಸಹಾಯವನ್ನು ನೀಡಲು ಸಂತೋಷದಿಂದ ಒಪ್ಪಿದಳಾದರೂ, ಸದಾ ಗುಪ್ತ ಜೀವಿಯಾಗಿಯೇ ಉಳಿಯಲು ಆಶಿಸಿದಳು. ತನ್ನ ಚಿಕ್ಕಪ್ಪನ ಕೊಡುಗೆಯಾದ ಒಂದು ವಿಶಾಲ ಮನೆಯನ್ನು ಒಂದು ಆಸ್ಪತ್ರೆಯನ್ನಾಗಿ ಮಾರ್ಪಡಿಸಿದಳು. 1826 ನವಂಬರ್ ಒಂದರಂದು ಹೊಸ ಆಸ್ಪತ್ರೆಯ ಉದ್ಘಾಟನೆಯಾಯಿತು. ತನ್ನ ಸಂಗಾತಿ ಬರ್ತೋಲೋಮೆಯಳನ್ನೇ ಅದರ ಸಂಚಾಲಕಿಯಾನ್ನಾಗಿ ನೇಮಿಸಿ, ತಾನು ಆಕೆಯ ಸಹಾಯಕಿಯಾಗಿ ದುಡಿದಳು.

ಇಬ್ಬರು ಕನ್ಯಾಭಗಿನೀಯರ ಸಹನೆ, ಮಮತೆ, ನೀಡಿದ ಸಾಂತ್ವನ ಮತ್ತು ಮಾಡಿದ ಪ್ರೀತಿಯ ಆರೈಕೆ ರೋಗಿಗಳು ಶಾರೀರಿಕವಾಗಿಯೂ, ಮಾನಸಿಕವಾಗಿಯೂ ಚೇತರಿಸಿಕೊಳ್ಳಲು ಅನುಕೂಲವಾಗಿದ್ದವು ಮಾತ್ರವಲ್ಲದೆ, ರೋಗಿಗಳು ಆಧ್ಯಾತ್ಮಿಕ ವರದಾನಗಳನ್ನು ಪಡೆಯಲು ಶಕ್ತರಾಗುತ್ತಿದ್ದರು.ಕೋಪದಿಂದ ಮುಖದ ಮೇಲೆ ಉಗುಳಿದವನ ಕೈಯನ್ನು ಮುತ್ತಿಕ್ಕುವ ಇವರ ಸ್ವಭಾವವು ಅನೇಕ ದುಷ್ಟರನ್ನು ಶಿಷ್ಟರನ್ನಾಗಿ ಪರಿವರ್ತಿಸಿತು. ಕಾಥರೀನ ಯಾವಾಗಲೂ ಹೇಳುವುದಿತ್ತು. "ಯಾರು ಕ್ರಿಸ್ತನ ಶಿಲುಬೆಯನ್ನು ಅರಿತಿರುವರೋ ಅವರು ಜ್ಞಾನಿಗಳು, ಯಾರು ಅದನ್ನು ಅರಿತಿಲ್ಲವೋ ಅವರು ಅಜ್ಞಾನಿಗಳು" ಎಂದು. ಈಕೆಯಾದರೋ ಕೈಯಲ್ಲಿ ಶಿಲುಬೆಯನ್ನು ಹಿಡಿದು ಅಥವಾ ಶಿಲುಬೆಯ ಮುಂದೆ ಕುಳಿತು ಬಹಳ ಹೊತ್ತು ಧ್ಯಾನಮಗ್ನಳಾಗುತ್ತಿದ್ದಳು.

1832 ನವಂಬರ್ 21 ಬಾಲಿಕಾ ಮರಿಯಮ್ಮನವರನ್ನು ದೇವಾಲಯಕ್ಕೆ ಕಾಣಿಕೆಯಾಗಿ ಒಪ್ಪಿಸಿದ ಹಬ್ಬ. ಮೊದಲೇ ನಿಶ್ಚಯಿಸಿದಂತೆ ಅಂದು ಬೆಳಿಗ್ಗೆ ಬರ್ತೋಲೋಮೆಯ ಕಪಿತಾನಿಯೊ ಮತ್ತು ಕ್ಯಾಥರೀನ ಜೆರೋಸಾ ತಮ್ಮ ಮನೆಗಳಿಂದ ಹೊರಟು, ಸಂತ ಜಾರ್ಜ್ ದೇವಾಲಯದಲ್ಲಿ ಸೇರಿದರು. ಪರಿಶುದ್ಧತೆ, ವಿಧೇಯತೆ ಹಾಗೂ ಬಡತನದ ಜೀವನ ನಡೆಸಿ, ತಮ್ಮನ್ನೂ ತಮ್ಮ ಸರ್ವಸ್ವವನ್ನೂ ಬಡವರ ಸೇವೆಯಲ್ಲಿ ಕಳೆಯುವುದಾಗಿ ವಾಗ್ದಾನ ಮಾಡಿದರು. ಹೀಗೆ ಬಹು ಸರಳವಾದ ರೀತಿಯಲ್ಲಿ "ಸಿಸ್ಟರ್ಸ್ ಆಫ್ ಚಾರಿಟಿ" ಸಂಸ್ಥೆಯು ಉಗಮವಾಯಿತು. ಆಗ ಬರ್ತೋಲೋಮೆಯ ಕಪಿತಾನಿಯೋಗೆ 26 ವರ್ಷ ವಯಸ್ಸಾದರೆ, ಕ್ಯಾಥರಿನ್ ಜೆರೋಸಾಳಿಗೆ 48 ವರ್ಷ ವಯಸ್ಸಾಗಿತ್ತು. ಇನ್ನು ಯಾವ ಅಡೆತಡೆಯಿಲ್ಲದೆ ಇವರಿಬ್ಬರೂ ಹಗಲಿರುಳು ಪರರ ಸೇವೆಯಲ್ಲೂ ದೇವರ ಧ್ಯಾನದಲ್ಲೂ ತಮ್ಮನ್ನೇ ಸಮರ್ಪಿಸಲಾರಂಭಿಸಿದರು. 1833 ಜುಲೈ 26ರಂದು ಬರ್ತೋಲೋಮೆಯ ತನ್ನ ಕೈಯಲ್ಲಿ ಕ್ರಿಸ್ತರ ಶಿಲುಬೆಯನ್ನು ಹಿಡಿದುಕೊಂಡು ಯೇಸು ಮತ್ತು ಮರಿಯಮ್ಮನವರ ನಾಮವನ್ನು ಮಧುರವಾಗಿ ಜಪಿಸುತ್ತಾ ಕಣ್ಮುಚ್ಚಿದಳು. ಬರ್ತೋಲೋಮೆಯಳ ಮರಣದ ವಾರ್ತೆ ಕಾಳ್ಗಿಚ್ಚಿನಂತೆ ಲೋವೆರೆ ಮತ್ತು ಅಕ್ಕಪಕ್ಕದ ಊರುಗಳಿಗೆ ಹರಡಿತು. "ಸಂತಳೊಬ್ಬಳು ಮರಣ ಹೊಂದಿದ್ದಾಳೆ" ಎಂದು ಹೇಳುತ್ತಾ, ಸಾವಿರಾರು ಜನರು ಆಕೆಯ ಅಂತಿಮ ದರ್ಶನ ಪಡೆಯಲು ಓಡಿಬಂದರು. ಎಳೆಯ ವಯಸ್ಸಿನ, ಲವಲವಿಕೆಯ, ದೈವಪ್ರೇಮ ಮತ್ತು ಪರಸ್ನೇಹ ಉಕ್ಕಿ ಹರಿಯುತ್ತಿದ್ದ ಈ ಮುಗ್ಧ ದೇವತೆ, ಇಷ್ಟುಬೇಗ ತಮ್ಮನ್ನಗಲಿ ಹೋಗುವುದನ್ನು ನೋಡಲು ಯಾರಿಗೂ ಸಹಿಸದಾಯಿತು.ಎಲ್ಲರ ಕಣ್ಣುಗಳಿಂದ ಕಣ್ಣೀರು ಕೋಡಿಯಾಗಿ ಹರಿಯಿತು. ಕ್ಯಾಥರೀನ ತನ್ನ ಪ್ರೀತಿಯ ಗೆಳತಿಯ ಪಾರ್ಥಿವ ಶರೀರವನ್ನು ಬಿಟ್ಟು ಕದಲಲಿಲ್ಲ. ಆಕೆಯ ನೋವನ್ನು ಈ ಸಂದರ್ಭದಲ್ಲಿ ಅರಿತವರಾರು?

ಕೆಲವೇ ದಿನಗಳಲ್ಲಿ ಬರ್ತೋಲೋಮೆಯಳ ಗೆಳತಿಯರು ಸೇರಿದಂತೆ ಅನೇಕ ಯುವತಿಯರು ಈ ಸಂಸ್ಥೆಯನ್ನು ಸೇರಲು, ಕಾಥರೀನಳಿಗೆ ಸಹಾಯ ನೀಡಲು ಮತ್ತು ತಮ್ಮನ್ನೇ ದೇವರ ಮತ್ತು ಬಡವರ ಸೇವೆಗಾಗಿ ಅರ್ಪಿಸಲು ಮುಂದೆ ಬಂದರು. ಇಂತಹವರ ಸಂಖ್ಯೆ ದಿನೇ ದಿನೇ ಹೆಚ್ಚಿತ್ತು. 1835 ನವೆಂಬರ್ 21ರಂದು ಕ್ಯಾಥರೀನಳೊಡನೆ ಎಂಟು ಮಂದಿ ಕನ್ಯೆಯರು ಮೊದಲ ಬಾರಿಗೆ ತಮ್ಮ ಕನ್ಯಾಸ್ತ್ರೀ ಜೀವನದ ವಾಗ್ದಾನಗಳನ್ನು ಮಾಡಿದರು. ಅಂದು ಕ್ಯಾಥರೀನ್ ತನ್ನ ಹೆಸರನ್ನು ವಿನ್ಸೆಂಜಾ ಎಂದು ಬದಲಾಯಿಸಿಕೊಂಡರು.

1836ರಲ್ಲಿ ಲೊವೆರೆಯಲ್ಲಿ ಕಾಲರಾ ರೋಗ ಹರಡಿ, ನೂರಾರು ಜನರನ್ನು ಬಲಿತೆಗೆದುಕೊಂಡಿತು. ವಿನ್ಸೆಂಜಾ ಮತ್ತು ಆಕೆಯ ಸಹೋದರಿಯರು ತಮ್ಮ ಜೀವರಕ್ಷಣೆಯನ್ನೂ ಲೆಕ್ಕಿಸದೆ, ಕಾಲರಾ ರೋಗಿಗಳ ಆರೈಕೆಗಾಗಿ ಮುಂದೆ ಬಂದರು. ಇವರ ಆರೈಕೆ ನೂರಾರು ಜನರಿಗೆ ಜೀವದಾನ ನೀಡಿತು.ಇದರ ನಂತರ, ಹತ್ತಾರು ಕಡೆಗಳಿಂದ ರೋಗಿಗಳ ಆರೈಕೆ ಮಾಡಲು ಇವರಿಗೆ ಕರೆ ಬಂದವು.ಇವರ ಸೇವಾ ಗುಣವನ್ನು ಮೆಚ್ಚಿದ ಧರ್ಮಾಧ್ಯಕ್ಷರುಗಳು, ಧರ್ಮ ಗುರುಗಳು, ಮತ್ತಿತರ ಧರ್ಮಿಷ್ಠರು ಅನಾಥರಿಗಾಗಿಯೂ ನಿರ್ಗತಿಕರಿಗಾಗಿಯೂ, ರೋಗಿಗಳಿಗಾಗಿಯೂ, ಮಕ್ಕಳ ಶಿಕ್ಷಣಕ್ಕಾಗಿಯೂ ಸ್ಥಾಪಿಸಿದ ಸಂಸ್ಥೆಗಳಲ್ಲಿ ಈ ಭಗಿನಿಯರಸಹಾಯಹಸ್ತವನ್ನು ಕೋರಿದರು. 1840ರಲ್ಲಿ ಆಗಿನ ಜಗದ್ಗುರು ಹದಿನಾರನೆಯ ಗ್ರೆಗರಿಯವರು ಹೊಸದಾಗಿ ಸ್ಥಾಪಿಸಲ್ಪಟ್ಟ ಈ "ಸಿಸ್ಟರ್ಸ್ ಆಫ್ ಚಾರಿಟಿ" ಸಂಸ್ಥೆಯ ಸೇವಾಕಾರ್ಯಗಳನ್ನು ಮೆಚ್ಚಿ, ಈ ಸಂಸ್ಥೆಯು ದೇಶ–ವಿದೇಶಗಳಲ್ಲಿ ಹರಡಿ, ದೇವರ ಮಹಿಮೆಯನ್ನು ಎಲ್ಲೆಲ್ಲೂ ಪಸರಿಸಲು ತಮ್ಮ ಅನುಮತಿ ನೀಡಿದರು.ಅಂತೆಯೇ ದೇಶ ವಿದೇಶಗಳಿಂದ ಬಂದ ಕರೆಯೋಲೆಗಳನ್ನು ಮನ್ನಿಸಿ, ತಮ್ಮ ಸೇವಾಕಾರ್ಯಗಳನ್ನು ಎಲ್ಲೆಡೆಗಳಲ್ಲಿ ನಡೆಸಿಕೊಂಡು ಹೋಗಲು, ಈ ಸಂಸ್ಥೆಯ ಧೀರ ಭಗಿನಿಯರು ಕಾತುರರಾದರು.ಇದಕ್ಕಾಗಿ ಎಲ್ಲಕ್ಕಿಂತಲೂ ಮಿಗಿಲಾದ ಆಧ್ಯಾತ್ಮಿಕ ಸಿದ್ಧತೆಯನ್ನು ಮಾಡತೊಡಗಿದರು.

1847ರ ಮೇ ತಿಂಗಳಲ್ಲಿ ವಿನ್ಸೆಂಜಾ ಜೆರೋಸಾರವರ ದೇಹಸ್ಥಿತಿ ಹದಗೆಡಲಾರಂಭಿಸಿತು. ತನ್ನ ಸಂಸ್ಥೆಯ ಜವಾಬ್ದಾರಿಯನ್ನು ಮತ್ತೊಬ್ಬ ಸಹೋದರಿಗೆ ಹಸ್ತಾಂತರಿಸಿ, ತನ್ನ ಕೊನೆಯ ದಿನಗಳನ್ನು ದೇವರ ಧ್ಯಾನದಲ್ಲಿ ಕಳೆಯಲಿಚ್ಚಿಸಿದರು. 1847ರ ಜೂನ್ 29 ರಂದು ತನ್ನ ಸುತ್ತಲೂ ನೆರೆದು ಪ್ರಾರ್ಥಿಸುತ್ತಿದ್ದ ಸೋಹದರಿಯರಿಗೆ "ನನ್ನನ್ನು ಹೋಗಲು ಬಿಡಿ, ನನ್ನನ್ನು ಹೋಗಲು ಬಿಡಿ", ಎಂದು ಹೇಳಲಾರಂಭಿಸಿದರು.ಗಾಬರಿಗೊಂಡ ಅವರು "ಎಲ್ಲಿಗೆ?"ಎಂದು ಕೇಳಲು, "ಸ್ವರ್ಗಕ್ಕೆ, ಸ್ವರ್ಗಕ್ಕೆ" ಎಂದು ಉತ್ತರಿಸುತ್ತಿದ್ದರು.ಆಕೆಗೆ ಅಂತಿಮ ಸಂಸ್ಕಾರಗಳನ್ನು ನೀಡಲಾಯಿತು. ಸ್ವಾಮಿ ಬೋಸಿಯೊ, ಮತ್ತಿತರ ಸಹೋದರಿಯರು ದುಃಖಭರಿತರಾಗಿ ನೋಡುತ್ತಿದ್ದಂತೆಯೇ ತನ್ನ ಕೈಯಲ್ಲಿ ಶಿಲುಬೆಯನ್ನು ಹಿಡಿದುಕೊಂಡು, ಮಧುರವಾಗಿ ಯೇಸು ಮತ್ತು ಮರಿಯಮ್ಮನವರ ನಾಮವನ್ನು ಪಠಿಸುತ್ತಾ, ತನ್ನ ತಲೆ ಬಾಗಿಸಿ ಪ್ರಾಣಾರ್ಪಣೆ ಮಾಡಿದರು.

### ಧರ್ಮಕ್ಷೇತ್ರದಲ್ಲಿ ಕಥೋಲಿಕ ಕ್ಯಾರಿಸ್ಮ್ಯಾಟಿಕ್ ರಿನಿವಲ್ (CCR) ಘಟಕ



ಕಥೋಲಿಕ ಕ್ಯಾರಿಸ್ಮ್ಯಾಟಿಕ್ ರಿನಿವಲ್ (CCR) ಸಂವಿಧಾನ ಸ್ಥಾಪಿಸುವ ಉದ್ದೇಶದಿಂದ ವಿಶೇಷ ಕಾರ್ಯಕ್ರಮವನ್ನು 2025 ಸೆಪ್ಟೆಂಬರ್ 14ರಂದು ಕೋಟನೂರು ಸಮೀಪದ ಸುಜ್ಞಾನ್ ಧರ್ಮಕ್ಷೇತ್ರದ ಪಾಲನಾ ಕೇಂದ್ರದಲ್ಲಿ ಆಯೋಜಿಸಲಾಯಿತು. ನ್ಯಾಷನಲ್ ಸರ್ವಿಸ್ ಟೀಮ್ ಸದಸ್ಯರಾದ ಶ್ರೀ ಸಂತೋಷ್ ತಲ ಚಿರಾ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಮಾರ್ಗದರ್ಶನ ನೀಡುತ್ತಾ, ಅಲಖನ ಮುಖ್ಯ ಗುರಿಗಳನ್ನು ವಿವರಿಸಿದರು – ಪವಿತ್ರಾತ್ಮರಲ್ಲಿ ದೀಕ್ಷಾಸ್ನಾನವನ್ನು ಅನುಭವಿಸುವುದು, ಪ್ರಾರ್ಥನೆಯ ಶಕ್ತಿಯನ್ನು ಕಂಡುಹಿಡಿಯುವುದು, ದೇವರ ವರಗಳನ್ನು ಧರ್ಮಸಭೆಯ ಸೇವೆಗೆ ಬಳಸುವುದು ಹಾಗೂ ಪವಿತ್ರತೆಯಲ್ಲಿ ಬೆಳೆಯುವುದು. ಈ ಸಂದರ್ಭದಲ್ಲಿ ಬೀದರ್ ಮತ್ತು ಗುಲ್ಬರ್ಗಾ ಘಟಕಗಳಿಗೆ ಸಂಯೋಜಕರನ್ನು ಕಾರ್ಯದರ್ಶಿಗಳನ್ನು ಮತ್ತು ಖಜಾಂಚಿಗಳನ್ನು ಆಯ್ಕೆಮಾಡಿ ಹೊಸ ಕ್ಯಾರಿಸ್ಮ್ಯಾಟಿಕ್ ತಂಡವನ್ನು ರಚಿಸಲಾಯಿತು. ಯಾಜಕರು, ಧಾರ್ಮಿಕ ಸಹೋದರಿಯರು ಮತ್ತು ಶ್ರೀ ಸಾಮಾನ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

### ಹುಮನಾಬಾದ್ ವಲಯದಯುವ ಸಮಾಗಮ:




ಹುಮನಾಬಾದ್ ವಲಯದಯುವ ಸಮಾಗಮವು 2025 ಆಗಸ್ಟ್ 31ರಂದು ಸಂತ ಲಾರೆನ್ಸ್ ದೇವಾಲಯ, ತಾಳ್ಮಡಿಗೆಯಲ್ಲಿ ಜರಗಿತು. 43 ಮಂದಿ ಉತ್ಸಾಹ ಭರಿತ ಯುವಜನರು ಭಾಗವಹಿಸಿ ಸಮಾಗಮಕ್ಕೆ ಶೋಭೆಯನ್ನು ತಂದರು. ಯುವಚೇತನ ನಿರ್ದೇಶಕರಾದ ಫಾ. ಸಚಿನ್ ಕ್ರಿಸ್ಟಿ ಬಲಿಪೂಜೆಯನ್ನು ಅರ್ಪಿಸಿ ಬದಲಾವಣೆಗಳಿಂದ ತುಂಬಿದ ಜಗತ್ತಿನಲ್ಲಿ ದೇವರ ಮೇಲಿನ ವಿಶ್ವಾಸ ಮಾತ್ರ ಶಾಶ್ವತ ಎಂಬುದನ್ನು ಯುವಕರಿಗೆ ನೆನಪಿಸಿದರು. ಫಾ. ಜಾರ್ಜ್, ಧರ್ಮಕೇಂದ್ರದ ಗುರುಗಳು ಯುವಜನರಿಗೆ ಧರ್ಮಸಭೆ ಚೈತನ್ಯಮಯ ಸಮುದಾಯಗಳನ್ನು ನಿರ್ಮಿಸಲು ಯುವಜನರು ತಮ್ಮ ಪಾತ್ರವನ್ನು ಜವಾಬ್ದಾರಿಯಿಂದ ನಿರ್ವಹಿಸಲು ಪ್ರೇರೇಪಿಸಿದರು. ರಾಷ್ಟ್ರೀಯ ಯಾತ್ರೆಯಲ್ಲಿ ಪಾಲ್ಗೊಂಡಿದ್ದ ಶ್ರೀ ಬೋ ಅಜ್ ತಮ್ಮ ಅನುಭವವನ್ನು ಹಂಚಿಕೊಂಡರು. ವಕೀಲ ವಿದ್ಯಾ ಸಾಗರ್ ಯುವಕರಲ್ಲಿ ಹೆಚ್ಚುತ್ತಿರುವ ಅಪರಾಧ ಮತ್ತು ಶಿಕ್ಷೆಯ ಅಪಾಯಗಳ ಬಗ್ಗೆ ಮಾಹಿತಿ ನೀಡಿದರು.

### ಗುರುಗಳಿಗೆ ದೈವಾರಾಧನೆ ಮಾಹಿತಿ ಶಿಬಿರ



ಪೂಜಾ ವಿಧಿ ವಿಧಾನ ಅರ್ಥಪೂರ್ಣವಾಗಿ ಆಚರಿಸುವ ಉದ್ದೇಶದಿಂದ ಧರ್ಮಕ್ಷೇತ್ರದಗುರುಗಳಿಗೆ ವಿಶೇಷ ಸಮ್ಮೇಳನವು 2025 ಆಗಸ್ಟ್ 28ರಂದು ಸುಜ್ಞಾನ್ ಧರ್ಮಕ್ಷೇತ್ರದ ಪಾಲನಾ ಕೇಂದ್ರದಲ್ಲಿ. ಸುಮಾರು 40 ಮಂದಿ ಗುರುಗಳು ಭಾಗವಹಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಕ್ರಿಸ್ತ ಜ್ಯೋತಿ ಕಾಲೇಜು, ಬೆಂಗಳೂರಿನ ದೈವಾರಾಧನೆ ವಿಭಾಗದ ಮುಖ್ಯಸ್ಥರಾದ ಫಾ. ಮೊನ್ಸಿ ನೆಲ್ಲಿ ಕುನ್ನೇಲ್ ಉಪಸ್ಥಿತರಿದ್ದರು. ಫಾ. ಮೊನ್ಸಿ ಪೂಜಾ ವಿಧಿಯಲ್ಲಿ ಸಕ್ರಿಯವಾಗಿ ಭಾಗವಹಿಸುವಿಕೆಯ ಅಗತ್ಯವನ್ನು ಒತ್ತಿ ಹೇಳಿ, ಬಲಿಪೂಜೆಯಲ್ಲಿ ಮಾಡುವ ಸಾಮಾನ್ಯ ತಪ್ಪುಗಳನ್ನು ತಿದ್ದುಕೊಳ್ಳಲು ಮಾರ್ಗದರ್ಶನ ನೀಡಿದರು. ಮುಕ್ತ ಚರ್ಚೆಯಲ್ಲಿ ಗುರುಗಳ ಅನುಭವ ಹಂಚಿಕೆ, ಸಂದೇಹ ನಿವಾರಣೆ, ತಪ್ಪು ಅಭ್ಯಾಸಗಳ ತಿದ್ದುಪಡಿ ಕುರಿತು ನಿರ್ಧಾರ ಕೈಗೊಳ್ಳಲಾಯಿತು. ಧರ್ಮಾಧ್ಯಕ್ಷರಾದ ಪೂಜ್ಯ ರಾಬರ್ಟ್ ಮಿರಾಂದಾ ಹಾಜರಿದ್ದು, ಜ್ಯೂಬಿಲಿ ವರ್ಷದಸಮಾಪ್ತಿ ಮತ್ತು ಭಾಲ್ಕಿ ಜಾತ್ರಾ ಸಿದ್ಧತೆಗಳ ಬಗ್ಗೆ ಚರ್ಚೆ ನಡೆಸಿದರು.

### ಮಹಿಳಾ ಆರೋಗ್ಯ ಮಾಹಿತಿ ಶಿಬಿರ

ಮಹಿಳೆಯರಲ್ಲಿ ಸಮಗ್ರ ಆರೋಗ್ಯ ಜಾಗೃತಿ ಮೂಡಿಸುವುದು ಮತ್ತು ಆರೋಗ್ಯಕರ ಜೀವನ ಶೈಲಿಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಮಹಿಳೆಯರಿಗೆ ಆರೋಗ್ಯ ಮತ್ತು ಆಹಾರ ವಿಷಯದ ಬಗ್ಗೆ ಮಾಹಿತಿ ಶಿಬಿರವನ್ನು ಆಗಸ್ಟ್ 23ರಂದು ಸೇಕ್ರೆಡ್ ಹಾರ್ಟ್ ದೇವಾಲಯ, ಬೀದರ್‌ನಲ್ಲಿ ನಡೆಯಿತು. ಈ ಜಾಗ್ರತಿ ಶಿಬಿರವನ್ನು ಮಹಿಳಾ ಆಯೋಗದ ಕಾರ್ಯದರ್ಶಿಯಾಗಿರುವ ಸಿ.ಮರಿಯ ರಿತಾ ನಡೆಸಿಕೊಟ್ಟರು. ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಸೋನಿ ಸಮತೋಲಿತ ಆಹಾರ, ನಿಯಮಿತ ವ್ಯಾಯಾಮ, ಒತ್ತಡ ನಿಯಂತ್ರಣ, ತಡೆಗಟ್ಟುವ ಆರೋಗ್ಯ



ಹಾಗೂ ಪ್ರಾರ್ಥನೆ ಮತ್ತು ದೇವರ ವಾಕ್ಯದ ಮೂಲಕ ಆಂತರಿಕ ಆರೋಗ್ಯದ ಮಹತ್ವವನ್ನು ವಿವರಿಸಿದರು. ಸಂಭಾಷಣೆಯ ಸಮಯದಲ್ಲಿ ಮಹಿಳೆಯರು ತಮ್ಮ ಪ್ರಶ್ನೆಗಳು ಮತ್ತು ಚಿಂತೆಗಳನ್ನು ಹಂಚಿಕೊಂಡರು, ಅದಕ್ಕೆ ತಕ್ಕ ಉತ್ತರಗಳನ್ನು ವೈದ್ಯರು ನೀಡಿದರು.

**ಧರ್ಮಕ್ಷೇತ್ರ ಮಟ್ಟದ ಸಿ.ಆರ್.ಐ ಸಭೆ ಮತ್ತು ನೂತನ ಕಾರ್ಯಕಾರಿ ಸಮಿತಿಯ ರಚನೆ**

ಗುಲ್ಬರ್ಗಾ ಧರ್ಮಕ್ಷೇತ್ರ ಮಟ್ಟದ ಸಿ.ಆರ್.ಐ ಸಭೆ 2025ರ ಆಗಸ್ಟ್ 9ರಂದು ದೈವಾನುಗ್ರಹ ಮಾತೆ ದೇವಾಲಯದಲ್ಲಿ ಜರಗಿತು . ಸುಮಾರು 92ಕ್ಕೂ ಹೆಚ್ಚು ಗುರುಗಳು, ಕನ್ಯಾಭಗಿನೀಯರು ಸಕ್ರಿಯವಾಗಿ ಭಾಗವಹಿಸಿದರು. ಕಾರ್ಯಕ್ರಮವನ್ನು ಫಾ. ರೋಶನ್ ಡಿ'ಸೋಜಾ ಪ್ರಾರ್ಥನೆಯಿಂದ ಪ್ರಾರಂಭಿಸಿ, ಫಾ. ಮ್ಯಾಕ್ಸಿಂ ಹೃತ್ಪೂರ್ವಕ ಸ್ವಾಗತ ಕೋರಿದರು. ಧರ್ಮಾಧ್ಯಕ್ಷರು, ಸಿ.ಆರ್.ಐ ಅಧ್ಯಕ್ಷರ ಪ್ರೇರಣಾದಾಯಕ ಸಂದೇಶಗಳು ಕಾರ್ಯಕ್ರಮಕ್ಕೆ ಉತ್ಸಾಹ ತುಂಬಿದವು. ಸಭೆಯಲ್ಲಿ ಹೊಸ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಫಾ. ರೋನಾಲ್ಡ್ ಕಾರ್ಯದರ್ಶಿಯಾಗಿ ಸಿ. ಮರಿಯಮ್ಮ ಹಾಗೂ ಖಜಾಂಚಿಯಾಗಿ. ಸಿ. ಲಿಡಿಯಾ ಕುಟನ್ಹಾ ನೇಮಕಗೊಂಡರು. ಸಂಪನ್ಮೂಲ ವ್ಯಕ್ತಿ ಫಾ. ವಿನ್ಸೆಂಟ್‌ಪಿರೇರಾ "ಗುಲ್ಬರ್ಗಾ ಧರ್ಮಕ್ಷೇತ್ರದಲ್ಲಿ ಸೈನೋಡಾಲಿಟಿಯನ್ನು ಜೀವಂತವಾಗಿಸಲು ಆಳವಾಗಿ ಆಲಿಸುವಿಕೆ, ಯುವಕರು ಮತ್ತು ಕುಟುಂಬಗಳ ಸಕ್ರಿಯ ಪಾಲ್ಗೊಳ್ಳಿಕೆ, ವಿಶ್ವಾಸ ಸಮುದಾಯ ನಿರ್ಮಾಣ ಹಾಗೂ ಸುವಾರ್ತೆಗೆ ಕೈ ಜೋಡಿಸುವುದು ಅತ್ಯಂತ ಅಗತ್ಯ" ಎಂದು ನುಡಿದರು. ನಂತರ KRCR ಕಾರ್ಯಯೋಜನೆ, ವರದಿ ಮಂಡನೆ ಹಾಗೂ ನೂತನತಂಡಕ್ಕೆ ಸನ್ಮಾನ ನಡೆಸಲಾಯಿತು.



**ಧರ್ಮಾಧ್ಯಕ್ಷರ ಸೇವಾವಧಿಯ 20ನೇ ಜ್ಯೂಬಿಲಿ ವಾರ್ಷಿಕೋತ್ಸವ**

ಗುಲ್ಬರ್ಗಾ ಧರ್ಮಕ್ಷೇತ್ರದ ಧರ್ಮಾಧ್ಯಕ್ಷರಾಗಿ 20ನೇ ಜ್ಯೂಬಿಲಿ ವಾರ್ಷಿಕೋತ್ಸವನ್ನು ಹಾಗೂ ಧರ್ಮಕ್ಷೇತ್ರದ ಸ್ಥಾಪನೆಯ 20ನೇ ವರ್ಷದ ಸಂಭ್ರಮವನ್ನು ಕೃತಜ್ಞತೆಯಿಂದ ಆಚರಿಸಿತು ಆಗಸ್ಟ್ 18ರಂದು ಕಲಬುರಗಿಯ ದೈವಾನುಗ್ರಹ ಮಾತೆ ದೇವಾಲಯದಲ್ಲಿ ಆಚರಿಸಲಾಯಿತು. ನಂತರ ಮದರ್‌ತೆರೇಸಾ ಸಭಾಂಗಣದಲ್ಲಿ ಸಾಂಸ್ಕೃತಿಕ ಅಭಿನಂದನಾ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಪ್ರಾರ್ಥನಾ ನೃತ್ಯ, ಅಭಿನಂದನಾಗೀತೆ ಹಾಗೂ ಧರ್ಮಾಧ್ಯಕ್ಷರ ಜೀವನ In the Spirit of the Lord ವಿಡಿಯೋವನ್ನು ಪ್ರದರ್ಶಿಸಲಾಯಿತು. ಫಾ. ಅನಂದ್ ಪ್ರಭು ಮಾತನಾಡಿ ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿದರು. "ನಮ್ಮ ಕೈಯಲ್ಲಿ ವಿಶ್ವಾಸ, ಜನರು ಮತ್ತು ಭರವಸೆ ಇದೆ; ಇವುಗಳಿಂದಲೇ ದೇವರ ರಾಜ್ಯವನ್ನು ಕಟ್ಟಬಹುದು" ಎಂದುತಿಳಿಸಿ ಹೇಳಿದರು. ಫಾ. ಪ್ರವೀಣ್ ಜೋಸೆಫ್ ಕಾರ್ಯಕ್ರಮವನ್ನು ನಿರೂಪಿಸಿ ಧನ್ಯವಾದಗಳನ್ನು ಸಮರ್ಪಿಸಿದರು.



**ಕಾರಾಗೃಹದಲ್ಲಿ ಬಂಧಿತರಿಗೆ ಬಿಡುಗಡೆ:**

ಕಲಬುರಗಿಯ ಕೇಂದ್ರ ಕಾರಾಗೃಹದಲ್ಲಿ ಶಿಕ್ಷಾವಧಿ ಪೂರ್ಣಗೊಂಡಿದ್ದರೂ ದಂಡವನ್ನು ಪಾವತಿಸಲು ಅಸಮರ್ಥರಾಗಿದ್ದ ಮೂವರು ಕೈದಿಗಳು ಜುಲೈ 10ರಂದು ಧನಸಹಾಯ ಮಾಡಿ ಬಿಡುಗಡೆಗೊಳಿಸಿದರು. ಕಾರ್ಮೆಲ್ ಜ್ಯೋತಿ ಪಬ್ಲಿಕ್ ಟ್ರಸ್ಟ್ ಮತ್ತು ಪ್ರಿಸನ್ ಮಿನಿಸ್ಟ್ರಿ, ಕಲಬುರಗಿ ಘಟಕದ ಹಸ್ತಕ್ಷೇಪದಿಂದ ಈ ಕಾರ್ಯ ಸಾಧ್ಯವಾಯಿತು. ಶುಭಾಶ್ ಶಿವರಾಯಿ ನಾಟಿಕರ್ (ಕೈದಿ ಸಂಖ್ಯೆ 1258), ಶ್ರೀಕಾಂತ್ ಚಿನ್ನು (1733) ಮತ್ತು ಶರಣಪ್ಪ ನರಸಪ್ಪ (1305) ತಲಾ–10,000 ದಂಡವನ್ನು ಕಟ್ಟಲು ಅಸಮರ್ಥರಾಗಿದ್ದರು. ಜೈಲು ಮುಖ್ಯಾಧಿಕಾರಿಗಳ ವಿನಂತಿಯ ಮೇರೆಗೆ ಕಾರ್ಮೆಲ್ ಜ್ಯೋತಿ ಟ್ರಸ್ಟ್ ಅಧಿಕೃತ ಚೆಕ್ಕಿನ ಮೂಲಕ ದಂಡಪಾವತಿಸಿ ಬಿಡುಗಡೆಗೆ ನೆರವಾಯಿತು. ಈ ಹಸ್ತಕ್ಷೇಪವು ಬಡತನದಿಂದ ನ್ಯಾಯಾಂಗ ವ್ಯವಸ್ಥೆಯಲ್ಲಿ ಸಿಲುಕಿಕೊಂಡವರಿಗೆ ಮಾನವೀಯತೆ ಮತ್ತು ಸಮಾಜೀಕರಣವನ್ನು ಮರಳಿ ನೀಡುವ ದಿಸೆಯಲ್ಲಿ ಮಹತ್ವದ ಹೆಜ್ಜೆಯಾಗಿದೆ.




WELCOME
WELCOME
22-08-2005

ಎತ್ತಿರುವೆ ಪ್ರಭೂ, ಹೃನ್ಮನಗಳನು ನಿನ್ನತ್ತ  ಇಟ್ಟಿರುವೆ ಭರವಸೆ ನಿನ್ನಲಿ ದೇವಾ ಸನ್ಮುತ (ಕೀರ್ತನೆ 25:1)

# ಬಾಲ ಯೇಸು ಪುಣ್ಯಕ್ಷೇತ್ರ, ಭಾಲ್ಕಿ

## ಜಾತ್ರೋತ್ಸವ 2025

**7–9 ನವೆಂಬರ್ 2025**



**ನಾವು ಭರವಸೆಯ ಯಾತ್ರಿಕರು, ಸಂಭ್ರಮಿಸೋಣ, ಸೇವೆಗೈಯೋಣ**